ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ



# ಚಂದ್ರಶೇಖರ ಪಾಟೀಲ್
## ಮಹಾಗಾಂವ್

ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

# ಚಂದ್ರಶೇಖರ ಪಾಟೀಲ್

## ಮಹಾಗಾಂವ್

ಲೇಖಕರು :

**ಡಾ|| ಶಿವಾನಂದ ಬೇಕಲ್**

ಬಿ.ಎಸ್‌ಸಿ., ಬಿ.ಎಡ್., ಎಂ.ಎ., ಪಿಎಚ್.ಡಿ.

ಪ್ರಕಟಣೆ :

ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ

ವಿಧಾನಸೌಧ, ಬೆಂಗಳೂರು

**Mahagaon Chandrashekhar Patil**
**MAHAGAON**
Eminent Parliamentarian Series
Written by : **Dr. Shivananda Bekal,**
B.Sc., B.Ed., M.A. Ph.D.
Published by:
Karnataka Legislature Library Committee
Vidhana Soudha, Bangalore - 560 001
Pages: 163+xx Price : Rs.30/-
(C) Chairman: Karnataka Legislative Council
Speaker: Karnataka Legislative Assembly
First Edition: 2014, Copies: 2000
Printed & Designed By:
Government Press, Bangalore

# ಚಂದ್ರಶೇಖರ ಪಾಟೀಲ್

# ಮಹಾಗಾಂವ್

ಪ್ರತಿಭಾವಂತ ಸಂಸದೀಯಪಟು ಪುಸ್ತಕ ಮಾಲಿಕೆ
ಲೇಖಕರು: **ಡಾ॥ ಶಿವಾನಂದ ಬೇಕಲ್,**
ಬಿ.ಎಸ್‌ಸಿ., ಬಿ.ಎಡ್., ಎಂ.ಎ., ಪಿಎಚ್.ಡಿ.
ಪ್ರಕಾಶನ:
ಗ್ರಂಥಾಲಯ ಸಮಿತಿ, ಕರ್ನಾಟಕ ವಿಧಾನ ಮಂಡಲ
ವಿಧಾನಸೌಧ, ಬೆಂಗಳೂರು - 560 001
ಪುಟ: 163+XX ಬೆಲೆ: ರೂ.30/-
(C)ಸಭಾಪತಿಗಳು: ಕರ್ನಾಟಕ ವಿಧಾನ ಪರಿಷತ್
ಸಭಾಧ್ಯಕ್ಷರು: ಕರ್ನಾಟಕ ವಿಧಾನ ಸಭೆ
ಮೊದಲ ಮುದ್ರಣ: 2014 ಪ್ರತಿಗಳು: 2000
ಮುದ್ರಣ ಮತ್ತು ವಿನ್ಯಾಸ:
ಸರ್ಕಾರಿ ಮುದ್ರಣಾಲಯ, ಬೆಂಗಳೂರು

# ವಿಧಾನ ಮಂಡಲ ಗ್ರಂಥಾಲಯ ಸಮಿತಿ
# 2014–2015

ಅಧ್ಯಕ್ಷರು

ಶ್ರೀ ಡಿ.ಎಚ್. ಶಂಕರಮೂರ್ತಿ

ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರು

ಶ್ರೀ ಕಾಗೋಡು ತಿಮ್ಮಪ್ಪ

ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ

ಶ್ರೀ ಜಗದೀಶ್ ಶೆಟ್ಟರ

ವಿಧಾನಸಭಾ ಸದಸ್ಯರು

ಶ್ರೀ ಎ.ಎಸ್. ಪಾಟೀಲ (ನಡಹಳ್ಳಿ)

ವಿಧಾನಸಭಾ ಸದಸ್ಯರು

ಶ್ರೀ ಹೆಚ್.ಪಿ. ರಾಜೇಶ್

ವಿಧಾನಸಭಾ ಸದಸ್ಯರು

ಶ್ರೀ ಬಿ.ಜೆಡ್. ಜಮೀರ್ ಅಹ್ಮದ್ ಖಾನ್

ವಿಧಾನಸಭಾ ಸದಸ್ಯರು

ಶ್ರೀ ಕೆ. ಶ್ರೀನಿವಾಸಮೂರ್ತಿ

ವಿಧಾನಸಭಾ ಸದಸ್ಯರು

ಶ್ರೀ ಡಿ.ಎಸ್. ವೀರಯ್ಯ

ವಿಧಾನ ಪರಿಷತ್ ಸದಸ್ಯರು

ಶ್ರೀ ಲೆಹರ್‌ಸಿಂಗ್ ಸಿರೋಯ

ವಿಧಾನ ಪರಿಷತ್ ಸದಸ್ಯರು

ಶ್ರೀ ಐವಾನ್ ಡಿ'ಸೋಜಾ

ವಿಧಾನ ಪರಿಷತ್ ಸದಸ್ಯರು

# ಪ್ರತಿಭಾವಂತ ಸಂಸದೀಯಪಟು ಪುಸ್ತಕ ಮಾಲಿಕೆ
## ಅಧಿಕಾರಿ – ಸಂಪಾದಕ ವರ್ಗ

### ಕರ್ನಾಟಕ ವಿಧಾನಸಭೆ ಸಚಿವಾಲಯ

| | |
|---|---|
| ಪಿ. ಓಂಪ್ರಕಾಶ್ | ಕಾರ್ಯದರ್ಶಿ |
| ಎಂ. ಗುರುರಾಜ | ಅಪರ ಕಾರ್ಯದರ್ಶಿ |
| ಎನ್.ವೈ. ಗುಣಶೇಖರ್ | ನಿರ್ದೇಶಕರು |
| ಅನಸೂಯ ಎನ್. ದೇವಗಿರಿ | ಮುಖ್ಯ ಗ್ರಂಥಪಾಲಕಿ |

### ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

| | |
|---|---|
| ವಿ. ಶ್ರೀಶ್ | ಕಾರ್ಯದರ್ಶಿ |

# ಪರಿವಿಡಿ


| | ಪುಟ |
|---|---|
| ಮುನ್ನುಡಿ | i |
| ನನ್ನ ಮಾತು | iii |

## ಭಾಗ – 1
## ಜೀವನ ದರ್ಶನ

| | |
|---|---|
| 1. ಬದುಕಿನ ಕೆಲವು ಅವಿಸ್ಮರಣೀಯ ಘಟನೆಗಳು | 3 |
| 2. ಮೈಲಿಗಲ್ಲುಗಳು | 5 |
| 3. ಪುಣ್ಯಭೂಮಿ ಮಹಾಗಾಂವ್ | 7 |
| 4. ಗಣ್ಯರ ಅನಿಸಿಕೆಗಳು | 10 |
| 5. ತಂದೆ ಸಂಗಶೆಟ್ಟಿ ಪೊಲೀಸ್ ಪಾಟೀಲ್ | 13 |
| 6. ಬಾಲಕ ಚಂದ್ರಶೇಖರ | 14 |
| 7. ತುಂಟರಲ್ಲಿ ತುಂಟ | 16 |
| 8. ನೀರ ಬಿಟ್ಟ ಮೀನು | 18 |
| 9. ಸಾಹಸಪ್ರಿಯ | 19 |
| 10. ಶಾಲೆಗೆ ತಿಲಾಂಜಲಿ | 20 |
| 11. ತರುಣ ಸಂಘ | 22 |
| 12. ಮಾತೆಯ ಮನೋಬಲ | 23 |
| 13. ನೇಗಿಲ ಯೋಗಿ | 24 |
| 14. ಸಮಾಜ ಕಲ್ಯಾಣ | 25 |
| 15. ಸಕಾಲಕ್ಕೆ ಸಪ್ತಪದಿ | 26 |
| 16. ಸಾಮಾಜಿಕ ಚಿಂತನೆ | 28 |
| 17. ತರುಣ ಸಂಘದ ಶುಭೋದಯ | 29 |
| 18. ಭಗತ್‌ಸಿಂಗರ ಆದರ್ಶ | 31 |
| 19. ರಕ್ತದಲ್ಲಿ ಸಹಿ | 33 |
| 20. "ಶರೀರ ಮಾದ್ಯಂ...." | 34 |
| 21. ಐಕ್ಯಗಾನ | 35 |

| | ಪುಟ |
|---|---|
| 22. "ಓಂ" ಧ್ವಜರೋಹಣ | 36 |
| 23. ದೇಹಕ್ಕೆ ದಂಡನೆ, ಸಮಾಜಕ್ಕೆ ಪ್ರತೀಕಾರ | 37 |
| 24. ರಾಷ್ಟ್ರೀಯ ಭಾವನೆ | 38 |
| 25. ಸ್ವಾಮಿ ರಮಾನಂದರ ಆದರ್ಶ | 39 |
| 26. ಹೋರಾಟದ ಕರೆ | 40 |
| 27. "ವಂದೇ ಮಾತರಂ" ಚಳುವಳಿ | 42 |
| 28. ಸತ್ಯಾಗ್ರಹ | 43 |
| 29. ಅನಪೇಕ್ಷಿತ ಸೆರೆವಾಸ | 44 |
| 30. ಅಮಾನುಷ ಅನಾಚಾರ | 45 |
| 31. ಮರಳಿ ಮನೆಗೆ | 48 |
| 32. ಧರ್ಮಶ್ರದ್ಧೆಗೆ ಇಂಬು | 49 |
| 33. ರಜಾಕಾರರ ಹಾವಳಿ | 50 |
| 34. ಸೇರಿಗೆ ಸಲ್ವಾಸೇರು | 52 |
| 35. ಅನಂತ ಆತ್ಮಾಭಿಮನ | 53 |
| 36. ವಿನಾಕಾರಣ ಚಿತ್ರಹಿಂಸೆ | 53 |
| 37. ಸಂಘಟನಾ ಕರಾಮತ್ತು | 55 |
| 38. ಎಲ್ಲೆಲ್ಲೂ ಹಾಹಾಕಾರ | 55 |
| 39. ಕುಟುಂಬ ಸಹಿತ ವಲಸೆ | 56 |
| 40. ನಿರಾಶ್ರಿತರ ಗಡಿಶಿಬಿರ | 58 |
| 41. ಹುತಾತ್ಮ ಅಪ್ಪಾ ರಾವ್ | 60 |
| 42. ಕರ್ನಾಟಕ ಏಕೀಕರಣ ಚಳವಳಿ | 61 |
| 43. ಶೈಕ್ಷಣಿಕ ರಂಗ | 64 |
| 44. ಫರ್ಸ್ಟ್ ಕ್ಲಾಸ್ ಫರ್ಸ್ಟ್ ಛಾನ್ಸ್ | 65 |
| 45. ಪ್ರಸಂಗಾವಧಾನತೆ | 67 |
| 46. ನಿರಪೇಕ್ಷಿತ ಭಾವ | 69 |
| 47. ಆದರ್ಶದ ಕನಸು | 70 |
| 48. ಅಕಾಲಿಕ ಆಕಸ್ಮಿಕ ಮರಣ | 71 |

| | ಪುಟ |
|---|---|
| 49. ಅವರ ನೆನಪಿನ ಕಂಪು | 74 |
| 50. ಶ್ರದ್ಧೆಯ ಕಣ್ಣೀರು | 75 |
| 51. ಕನಸು ಕನಸಾಗಿಯೇ ಕಮರಿತು | 81 |
| 52. ಸವಿನೆನಪಿಗೆ ಸ್ಮಾರಕಗಳು | 81 |

## ಭಾಗ – 2

## ಸತ್ವಶಾಲಿ ಚಿಂತನೆಗಳು

| | |
|---|---|
| 1. ಜನತಾ ಸೇವೆಯೇ ಜನಾರ್ದನ ಸೇವೆ | 85 |
| 2. ಉನ್ನತ ವ್ಯಕ್ತಿತ್ವ | 87 |
| 3. ಹೈದರಾಬಾದ್ ಸದಸ್ಯರಾಗಿ ಪಾಟೀಲ್ | 88 |
| 4. ಗೆದ್ದದ್ದು ಅಭ್ಯರ್ಥಿ, ಹಾರ ಪಾಟೀಲರಿಗೆ | 90 |
| 5. ರಾಜಕೀಯ ರಂಗಪ್ರವೇಶ | 91 |
| 6. ನಾಡಿಗೆ ನಾಯಕ, ಅವಿಶ್ರಾಂತ ಕಾಯಕ | 93 |
| 7. ಪ್ರಾಂಜಲ ಮನಸ್ಸು | 95 |
| 8. ಕರುಣಾಮಯಿ | 95 |
| 9. ದೇಶ ಸೇವೆ ಈಶಸೇವೆ | 96 |
| 10. ಒಕ್ಕಲುತನ ಕಾರ್ಮಿಕರ ವೇತನ ಮಸೂದೆ | 98 |
| (ಅ) ಒಕ್ಕಲುತನದವರು ಅವಿದ್ಯಾವಂತರು | 98 |
| (ಆ) ವೇಳೆಗೆ ತಕ್ಕ ಕೂಲಿ ಸಲ್ಲ | 99 |
| (ಇ) ಒಕ್ಕಲಿಗರಲ್ಲಿ ಉಚ್ಚ ನೀಚ ಇಲ್ಲ | 99 |
| (ಈ) ಮುಕ್ತ ಮನಸ್ಸಿನ ಒಕ್ಕಲಿಗ | 100 |
| 11. ಸದನದಲ್ಲಿ ಶ್ರದ್ಧಾಂಜಲಿಯ ಉಲ್ಲೇಖ | 101 |
| 12. ಅಂತಿಮ ನಮನ | 103 |
| 13. ಪ್ರಕಟಿತ ಗ್ರಂಥ, ಸಾಕ್ಷ್ಯಚಿತ್ರ, ಇತರ ಕೃತಿಗಳು | 104 |
| 14. ಸನ್ಮಾನ ಪತ್ರ | 106 |

ಪುಟ

## ಭಾಗ –3
## ಗಣ್ಯರ ದೃಷ್ಟಿಯಲ್ಲಿ

1. ಭವ್ಯತೆಯ ಸಾಕಾರ ಚಂದ್ರಶೇಖರ
– ದಿ।ಎಸ್.ನಿಜಲಿಂಗಪ್ಪ 109
2. ಈ ಅಧಿಕಾರ ಹೆಸರು ಅವರಿಗೆ ಏನೂ ಬೇಡ
– ಡಾ। ಪಾಟೀಲ ಪುಟ್ಟಪ್ಪ 115
3. ವೀರೇಂದ್ರ ಗಾಥಾ (ನನ್ನ ನಾ ಕಂಡಂತೆ)
ಹೈದರಾಬಾದ್ ಶಾಸನ ಸಭೆಗೆ ಆಯ್ಕೆ
– ದಿ।ವೀರೇಂದ್ರ ಪಾಟೀಲ 121
4. ದೊಡ್ಡದ್ದನ್ನು ಸಾಧಿಸುತ್ತೀರಿ!
– ಡೆಕ್ಕಾನ್ ಹೆರಾಲ್ಡ್ ವರದಿ 124
5. ಸೇವಾದುರಂಧರ
– ಎನ್. ಧರಂಸಿಂಗ್ 127
6. ಶ್ರೇಷ್ಠ ನಾಯಕ
– ಎಸ್.ಆರ್. ಬೊಮ್ಮಾಯಿ 128
7. ಅಪರೂಪದ ರಾಜಾ ಮನುಷ್ಯ
– ದಿ। ರಾಮಕೃಷ್ಣ ಹೆಗಡೆ 129
8. ಶೂರ ಧೀರ ಚಂದ್ರಶೇಖರ
– ರಾಮಚಂದ್ರಪ್ಪ ವೀರಪ್ಪ 130
9. ಸೇವಾ ಧುರೀಣ ಚಂದ್ರಶೇಖರ
– ಎಸ್. ರುದ್ರಪ್ಪ 131
10. ಹುಟ್ಟು ನೇತಾರ
– ಎಂ.ರಾಜಶೇಖರಮೂರ್ತಿ 133
11. ಪ್ರಭಾವಿಶಾಲೀ ವ್ಯಕ್ತಿತ್ವ
– ಸ್ವಾಮಿ ರಮಾನಂದತೀರ್ಥ 134

| | ಪುಟ |
|---|---|

12. ಮಹಾಗಾಂವ್‌ನ ಮಹಾವೀರ 135
– ಮೆಹದಿ ನವಾಜ್ ಜಂಗ್
13. ಅನುಕರಣೀಯ ಮಾದರಿ ವ್ಯಕ್ತಿತ್ವ
– ಕೆ.ವಿ.ರಂಗಾರೆಡ್ಡಿ 136
14. ತ್ಯಾಗದ ಬದುಕು
– ಡಾ।ರಫೀಕ್ ಝುಕಾರಿಯಾ 137
15. ಬೆಳ್ಳಿ ಚುಕ್ಕಿ
– ಡಾ। ಬಿ.ಸಿ.ಮಹಾಬಲೇಶ್ವರಪ್ಪ 139
16. ಸಾರ್ವಜನಿಕರಿಗಾಗಿ ಜೀವತೇಯ್ದ
– ಡಾ।ಶರಣಬಸವಪ್ಪ ಅಪ್ಪ 139
17. ಅಧಿಕಾರಿಗಳಿಗೆಲ್ಲ ಆದರ್ಶ ವ್ಯಕ್ತಿ 141
– ಎಂ.ವಾಸುದೇವ ರಾವ್, ಐ.ಎ.ಎಸ್.
18. ನಮ್ಮ ಲಾರ್ಡ್ ಮೌಂಟ್‌ಬ್ಯಾಟನ್
– ಜಿ.ವಿ.ಹಳ್ಳಿಕೇರಿ 144
19. ಜನಸೇವೆಯ ಮಿಂಚಿನಬಳ್ಳಿ
– ಡಾ।ಸೂರ್ಯನಾಥ ಕಾಮತ್ 145
20. ಮಾದರಿ ಬದುಕು
– ಡಾ। ಎಂ. ಚೆನ್ನಾರೆಡ್ಡಿ 146

**ಭಾಗ – 4**

**ಭಾವಚಿತ್ರಗಳು 147**

* * *

# ಮುನ್ನುಡಿ

ಸುವರ್ಣ ಮಹೋತ್ಸವದ ಆಚರಣೆಯ ಅಂಗವಾಗಿ ಈ ದೇಶಕ್ಕಾಗಿ ದುಡಿದ, ಅಗ್ರಮಾನ್ಯ ಸಂಸದೀಯ ಪಟುಗಳಾಗಿ ಕೊಡುಗೆಯನ್ನು ನೀಡಿದ ಮಹನೀಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಪ್ರತಿಭಾವಂತ ಸಂಸದೀಯ ಪಟುಗಳ ಬಗ್ಗೆ ಅನೇಕ ಹೊತ್ತಗೆಗಳನ್ನು ಹಿಂದಿ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಹೊರತಂದಿದ್ದಾರೆ. ಅವುಗಳಲ್ಲಿ ಡಾ॥ ರಾಮಮನೋಹರ ಲೋಹಿಯಾ, ಡಾ॥ ಬಿ.ಆರ್. ಅಂಬೇಡ್ಕರ್, ಡಾ॥ ಶಾಮಪ್ರಸಾದ್ ಮುಖರ್ಜಿ, ಡಾ॥ ರಾಜೇಂದ್ರ ಪ್ರಸಾದ್ ಮೊದಲಾದ ಗಣ್ಯರ ಪುಸ್ತಗಳನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಹೊರತಂದಿರುವ ಸಂತೋಷಕರ ವಿಷಯವನ್ನು ಉಲ್ಲೇಖಿಸ ಬಯಸುತ್ತೇವೆ.

ರಾಜ್ಯದ ಸಂಸದೀಯ ಪಟುಗಳಾದ ಅನೇಕ ಮಹನೀಯರನ್ನು ಕುರಿತು ಹೊತ್ತಗೆಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆಯನ್ನು ಕರ್ನಾಟಕ ವಿಧಾನ ಮಂಡಲವು ಹಮ್ಮಿಕೊಂಡಿದ್ದು, ವಿಧಾನ ಮಂಡಲದ ಗ್ರಂಥಾಲಯ ಸಮಿತಿಯು ಈಗಾಗಲೇ ಪ್ರಕಟಿಸುತ್ತ ಬಂದಿದೆ. ಈ ಉಪ ಸಮಿತಿಯು ಕಾರ್ಯಪ್ರವೃತ್ತವಾಗಿ ರಾಜ್ಯದ ಲೇಖಕರ, ವಿದ್ವಾಂಸರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ನಮ್ಮ ನಾಡಿನ ಪ್ರಗತಿಪರ ಚಿಂತಕರು, ರಾಜಕೀಯ ಮುತ್ಸದ್ದಿಗಳ ಆಶಯಗಳನ್ನು ದಾಖಲಿಸಿ ಆ ಮೂಲಕ ಅವರ ಜೀವನ ಚಿತ್ರಣವನ್ನು ಪುಸ್ತಕ ರೂಪದಲ್ಲಿ ತರುತ್ತಿದೆ.

ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಈಗಾಗಲೇ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಶಾಂತವೇರಿ ಗೋಪಾಲಗೌಡ, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಕೆ.ಸಿ. ರೆಡ್ಡಿ, ಶ್ರೀ ಡಿ. ದೇವರಾಜ ಅರಸು, ಶ್ರೀ ಜೆ.ಎಚ್. ಪಟೇಲ್, ಶ್ರೀ ಟಿ.ಆರ್. ಶಾಮಣ್ಣ, ಶ್ರೀ ಟಿ.ಎ.ಪೈ, ಶ್ರೀ ಎಸ್.ಡಿ. ಗಾಂವಕರ್, ಶ್ರೀಮತಿ ಬಿ.ಎಲ್. ಸುಬ್ಬಮ್ಮ,

ಡಾ॥ ಲಂಖಾ ಸುಂದರಂ, ಸರದಾರ ಶರಣಗೌಡ ಇನಾಂದಾರ್, ಕೆ.ಎಚ್. ರಂಗನಾಥ್ ಮತ್ತಿತರ ಹಲವು ಗಣ್ಯರ ಬಗೆಗಿನ ಪುಸ್ತಕಗಳನ್ನು ಹೊರತರಲಾಗಿದೆ.

ಡಾ॥ ಶಿವಾನಂದ ಬೇಕಲ್ ಅವರು ರಚಿಸಿರುವ ರಾಜ್ಯದ ಹಿರಿಯ ಸಂಸದೀಯ ಪಟುವಾಗಿದ್ದ ಶ್ರೀ ಚಂದ್ರಶೇಖರ ಪಾಟೀಲ್ ಮಹಾಗಾಂವ್ ಅವರ ಬಗೆಗಿನ ಈ ಪುಸ್ತಕವನ್ನು ತಮ್ಮ ಮುಂದಿಡಲು ಹೆಮ್ಮೆಯೆನಿಸುತ್ತದೆ. ಹೈದರಾಬಾದ್ ಕರ್ನಾಟಕದ ವೀರಾವೇಶದ ರಾಜಕೀಯ ಪಟುವಾಗಿದ್ದ ಚಂದ್ರಶೇಖರರು ಆ ಭಾಗದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿಗೆ ಅಪಾರ ಕೊಡುಗೆಯನ್ನು ನೀಡಿರುವ ವಿಚಾರ ಈ ಗ್ರಂಥದಲ್ಲಿ ಬಿಂಬಿತವಾಗಿದೆ.

ಗ್ರಂಥವನ್ನು ರಚಿಸಿರುವ ಡಾ॥ ಶಿವಾನಂದ ಬೇಕಲ್ ಅವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೂ, ಉಪ ಸಮಿತಿಯ ಎಲ್ಲಾ ಸದಸ್ಯರುಗಳಿಗೂ ಧನ್ಯವಾದವನ್ನು ಅರ್ಪಿಸುತ್ತೇವೆ.

ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳ ಬಗೆಗಿನ ಈ ಗ್ರಂಥವು ಮಾನ್ಯ ಸದಸ್ಯರುಗಳಿಗೆ, ಸಂಶೋಧಕರಿಗೆ ಹಾಗೂ ಸಾಮಾನ್ಯ ಓದುಗರಿಗೆ ಸಂಸದೀಯ ವಿಷಯಗಳಲ್ಲಿ ಹೆಚ್ಚಿನ ಅನುಭವ ನೀಡುತ್ತದೆ ಮತ್ತು ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತದೆ ಎಂದು ಭಾವಿಸುತ್ತೇವೆ.

**ಡಿ.ಎಚ್. ಶಂಕರಮೂರ್ತಿ**
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

**ಕಾಗೋಡು ತಿಮ್ಮಪ್ಪ**
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ

# ನನ್ನ ಮಾತು

## 4 ಮಾರ್ಚ್ 2011 (ಖರ ಸಂವತ್ಸರದ ಚಾಂದ್ರಮಾನ ಯುಗಾದಿ)

ಬಹಳ ವರ್ಷಗಳ ಹಿಂದಿನ ಮಾತು. ಬಹುಶಃ 1998ನೇ ಇಸವಿ ಇರಬೇಕು. ಆಗ ನಾನು ಗುಲಬರ್ಗಾ ದೂರದರ್ಶನ ಕೇಂದ್ರದಲ್ಲಿ ಸಹಾಯಕ ಕೇಂದ್ರ ನಿರ್ದೇಶಕನಾಗಿ ಸೇವೆ ಸಲ್ಲಿಸುತ್ತ ಇದ್ದೆ. ಒಂದು ದಿನ ನಮ್ಮ ದಿಲ್ಲಿಯ ವಾರ್ತಾ ಮತ್ತು ಪ್ರಸಾರ ಮಂತ್ರಾಲಯದ ಪತ್ರವೊಂದು ದಿಲ್ಲಿ ದೂರದರ್ಶನ ನಿರ್ದೇಶನಾಲಯದ ಮೂಲಕ ನಮಗೆ ಬಂತು. ಸ್ವಾತಂತ್ರ್ಯ ಹೋರಾಟಗಾರ ಹಾಗೂ ಉತ್ತರ ಕರ್ನಾಟಕ ಪ್ರದೇಶದ ಜನನಾಯಕರಾಗಿದ್ದ ದಿ। ಚಂದ್ರಶೇಖರ ಪಾಟೀಲರ ಕುರಿತು ಒಂದು ಸಾಕ್ಷ್ಯಚಿತ್ರವನ್ನು ನಿರ್ಮಿಸಬೇಕೆಂದೂ, ಆದಷ್ಟು ಬೇಗನೆ ಆ ಸಾಕ್ಷ್ಯಚಿತ್ರವನ್ನು ದೂರದರ್ಶನ ಕೇಂದ್ರಗಳ ಮೂಲಕ ಪ್ರಸಾರ ಮಾಡಬೇಕೆಂದೂ ಅದರಲ್ಲಿ ಆದೇಶಿಸಲಾಗಿತ್ತು.

ದೂರದರ್ಶನ ನಿರ್ದೇಶನಾಲಯದ ಆದೇಶವೂ, ಜತೆಗೆ ವಾರ್ತಾ ಮತ್ತು ಪ್ರಸಾರ ಮಂತ್ರಾಲಯದ ವಿಶೇಷ 'ಹುಕುಂ' ಇದಾಗಿದ್ದುದರಿಂದ ನಾವು ವಿಶೇಷ ಕಾಳಜಿಯಿಂದ ಮತ್ತು ತ್ವರಿತ ಗತಿಯಿಂದ ಸಾಕ್ಷ್ಯಚಿತ್ರದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳುವಂತಾಯಿತು. ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳೂ, ರಾಷ್ಟ್ರ ಮಟ್ಟದ ಹಿರಿಯ ರಾಜಕೀಯ ಮುತ್ಸದ್ದಿಯೂ, ಕನ್ನಡದ ಹಿರಿಯ ಚೇತನವೂ ಆಗಿದ್ದ ದಿ। ನಿಜಲಿಂಗಪ್ಪನವರೇ ಸ್ವತಃ ಹೀಗೊಂದು ಸಾಕ್ಷ್ಯಚಿತ್ರ ನಿರ್ಮಾಣದ ಹೊಳಹನ್ನು ಹುಟ್ಟುಹಾಕಿದ್ದು, ಸಂಬಂಧಪಟ್ಟವರಿಗೆ ಈ ಕುರಿತಂತೆ ಉನ್ನತ ಮಟ್ಟದ ಶಿಫಾರಸ್ಸನ್ನು ಮಾಡಿದ್ದರೆಂದು ಮುಂದೆ ತಿಳಿಯುವಂತಾಯಿತು. ಹೀಗೊಂದು ಸಾಕ್ಷ್ಯಚಿತ್ರದ ನಿರ್ಮಾಣ ಮತ್ತು ಅದರ ಪ್ರಸಾರದ ಕುರಿತಂತೆ ಮುತುವರ್ಜಿ ವಹಿಸಿ, ತಮ್ಮ ಆತ್ಮೀಯರಲ್ಲಿ ಆತ್ಮೀಯರಾಗಿದ್ದ ಚಂದ್ರಶೇಖರ ಪಾಟೀಲರ ಬಗೆಗಿನ ಅಸೀಮ ಪ್ರೀತಿ ಮತ್ತು ಶ್ರದ್ಧಾಭಕ್ತಿಯ ಋಣವನ್ನು ಈ ಮೂಲಕ ಶ್ರೀ ನಿಜಲಿಂಗಪ್ಪನವರು ತೀರಿಸಿಕೊಂಡರು ಅಂತ ನನಗನಿಸುತ್ತದೆ.

ಸಾಕ್ಷ್ಯಚಿತ್ರ ನಿರ್ಮಾಣ ಮತ್ತು ನಿರ್ದೇಶನದ ಸಮಸ್ತ ಉಸ್ತುವಾರಿಯನ್ನು ನಾನು ಸ್ವತಃ ವಹಿಸಿಕೊಂಡಿದ್ದರಿಂದ, ಅನೇಕ ರಾಜಕೀಯ ಮುತ್ಸದ್ದಿಗಳನ್ನೂ, ಪಾಟೀಲರ ನಿಕಟವರ್ತಿಗಳನ್ನೂ ಆತ್ಮೀಯರನ್ನೂ ಬಂಧುಗಳನ್ನೂ ನಾನು ಸ್ವತಃ ಭೇಟಿ ಮಾಡಿ ಅವರ ಮಾತುಗಳನ್ನು ಚಿತ್ರೀಕರಿಸಿಕೊಳ್ಳುವ ವಿಶೇಷ ಸುಯೋಗ ನನಗೆ ಬಂದೊದಗಿತು.

ದಿ। ನಿಜಲಿಂಗಪ್ಪನವರ ಚಿತ್ರದುರ್ಗದ ಅವರ ಮನೆಗೆ ಹೋಗಿ ಅವರನ್ನು ಭೇಟಿಮಾಡಿ ಚಿತ್ರೀಕರಿಸಿಕೊಳ್ಳುವ ಪ್ರಥಮದಲ್ಲಿ ಅವರು ಆಡಿದ ಮಾತುಗಳು ಇನ್ನೂ ನನ್ನ ಕಿವಿಗಳಲ್ಲಿ ಪ್ರತಿಧ್ವನಿಸುವಂತಿದೆ–

"ಚಂದ್ರಶೇಖರ ಪಾಟೀಲರ ಹೆಸರೆತ್ತಿದರೆ ನನ್ನ ಅಂತಃಕರಣ ಕರಗುತ್ತದೆ!"

ಕರ್ನಾಟಕದ ಮಾಜಿ ಮುಖ್ಯಮಂತ್ರಿ, ಹಿರಿಯ ರಾಜಕೀಯ ಮುತ್ಸದ್ದಿ, ಪಾಟೀಲರ ಆತ್ಮೀಯ ಗೆಳೆಯರಾದ ದಿ। ರಾಮಕೃಷ್ಣ ಹೆಗಡೆಯವರನ್ನು ಸಂದರ್ಶನಕ್ಕೆ ಸಮಯ ಕೇಳಿದ್ದಾಗ, ಅವರು ತಕ್ಷಣ ತಮ್ಮ ಬಿರುಸಿನ ಚಟುವಟುಕೆಗಳನ್ನೆಲ್ಲ ಬದಿಗಿಟ್ಟು, ನಮಗೆ ಚಿತ್ರೀಕರಣಕ್ಕೆ ಅನುವುಮಾಡಿಕೊಟ್ಟರು. ಹೀಗೆ, ಹೆಗಡೆಯವರು ಶ್ರೀ ಚಂದ್ರಶೇಖರರ ಬಗೆಗಿನ ತಮ್ಮ ಅತೀವ ಪ್ರೀತಿಯನ್ನು ಪ್ರದರ್ಶಿಸಿದುಂಟು.

ಕನ್ನಡದ ಕಟ್ಟಾಳು ಡಾ। ಪಾಟೀಲ ಪುಟ್ಟಪ್ಪನವರ ಅನಿಸಿಕೆಗಳನ್ನು ದಾಖಲಿಸಿಕೊಳ್ಳುವ ಸಂದರ್ಭದಲ್ಲೂ ಅಷ್ಟೇ. ನನಗಾದದ್ದು ಅನಿರ್ವಚನೀಯ ಅನುಭವ. ಕನ್ನಡದ ಪ್ರತಿಷ್ಠಿತ ಸಾಪ್ತಾಹಿಕಗಳಲ್ಲಿ ಒಂದಾದ 'ತರಂಗ'ದಲ್ಲಿ ಅವರು ನಿರಂತರವಾಗಿ 'ಕಾಲಂ' ಒಂದನ್ನು ಬರೆಯುತ್ತಿದ್ದರು. ಅದರಲ್ಲಿ ಒಮ್ಮೆ ಅವರು ಚಂದ್ರಶೇಖರ ಪಾಟೀಲರ ನಿಸ್ವಾರ್ಥ ಬದುಕಿನ ಬಗೆಗೆ ಬಹು ಹೃದಯಂಗಮವಾದ ಚಿತ್ರಣ ನೀಡಿದ್ದರು. ನಾನು ಸಿದ್ಧಪಡಿಸುತ್ತಿದ್ದ ಸಾಕ್ಷ್ಯಚಿತ್ರದಲ್ಲಿ ಡಾ। ಪಾಟೀಲ ಪುಟ್ಟಪ್ಪನವರ ಅನಿಸಿಕೆಗಳನ್ನು

ಅಳವಡಿಸಬೇಕೆಂಬ ಯೋಚನೆ ಹೊಳೆದದ್ದೂ ಆಗಲೇ. ಶ್ರೀ ಪುಟ್ಟಪ್ಪನವರು ಗುಲಬರ್ಗಾಕ್ಕೆ ಬರುವ ಸಂದರ್ಭವನ್ನೇ ಎದುರು ನೋಡುತ್ತಿದ್ದ ನನಗೆ, ಅಂಥ ಒಂದು ಸದವಕಾಶ ಬಂದೇ ಬಂತು. ಅವರು ಚಂದ್ರಶೇಖರರ ಬಗೆಗೆ ಮಾತನಾಡಲು ಸಂಪ್ರೀತಿಯಿಂದ ಒಪ್ಪಿಕೊಂಡು, ತಮ್ಮ ಬಿರುಸಿನ ಕಾರ್ಯಕ್ರಮಗಳಿಂದ ಬಿಡುವು ಮಾಡಿಕೊಂಡು ನಮ್ಮ ಟಿ.ವಿ.ಕೇಂದ್ರಕ್ಕೇ ಬಂದು ಚಿತ್ರೀಕರಿಸಲು ಅನುವು ಮಾಡಿಕೊಟ್ಟರು.

ತದನಂತರ ಮಹಾದಾಸೋಹಿ ಪೂಜ್ಯ ಡಾ| ಶರಣಬಸವಪ್ಪ ಅಪ್ಪ, ಶ್ರೀ ವಿ.ಪಿ.ದೇವೂಳ್‌ಗಾಂವ್‌ಕರ್(ಸ್ವಾತಂತ್ರ್ಯ ಸೇನಾನಿ), ಡಾ| ಬಿ.ಸಿ.ಮಹಾಬಳೇಶ್ವರಪ್ಪ (ಪಾಟೀಲರ ಬಗೆಗೆ ಎಂ.ಫಿಲ್. ಮಾಡಿದ ವಿದ್ವಾಂಸರು), ಶ್ರೀಮತಿ ಲಲಿತಾ ಬಾಯಿ(ಪಾಟೀಲರ ಧರ್ಮ ಪತ್ನಿ), ಶ್ರೀ ಅರುಣ ಕುಮಾರ ಪಾಟೀಲ(ಮಗ), ಶ್ರೀ ರುದ್ರಶೆಟ್ಟಿ ಪಾಟೀಲ(ಪಾಟೀಲರ ಹಿರಿಯ ಸಹೋದರ), ಶ್ರೀ ಗೋಪಾಲ ರಾವ್ ಮುಡಬಿ( ಪಾಟೀಲರ ನಿಕಟವರ್ತಿ), ಶ್ರೀ ಸಂಗಬಸಪ್ಪ ಹತ್ತಿ (ಸ್ವಾತಂತ್ರ್ಯ ಹೋರಾಟಗಾರ), ಶ್ರೀ ಬಬಲಾದಿ (ಪ್ರತ್ಯಕ್ಷದರ್ಶಿ), ಶ್ರೀ ರುಕ್ನುದ್ದೀನ್ (ಪಾಟೀಲರ ವಾಹನ ಚಾಲಕ)– ಹೀಗೆ ಸಂಬಂಧಪಟ್ಟ ಪ್ರತಿಯೊಬ್ಬರನ್ನೂ ಭೇಟಿ ಮಾಡಿ ಅವರನ್ನೆಲ್ಲ ಮಾತನಾಡಿಸಿ ಚಿತ್ರೀಕರಿಸಿಕೊಂಡದ್ದು ಅವಿಸ್ಮರಣೀಯವೆನಿಸಿತು.

ಹೀಗೆ ನಿರ್ಮಾಣಗೊಂಡು ಎರಡು ಕಂತುಗಳಲ್ಲಿ ಪ್ರಸಾರ ಕಂಡ "ಸ್ವಾತಂತ್ರ್ಯ ಚೇತನ ಚಂದ್ರಶೇಖರ ಪಾಟೀಲ" ಎಂಬ ಈ ಸಾಕ್ಷ್ಯಚಿತ್ರ ಬೆಂಗಳೂರು ಕೇಂದ್ರದಿಂದಲೂ ಪ್ರಸಾರಗೊಂಡು ಕರ್ನಾಟಕ ರಾಜ್ಯಾದ್ಯಂತ ಮಾತ್ರವಲ್ಲಿ ಜಗತ್ತಿನ ಮೂಲೆಮೂಲೆಗೂ ತಲುಪಿ ಜನಮನ್ನಣೆ ಪಡೆಯಿತು. ಕರ್ನಾಟಕದಲ್ಲಿ ದೂರದರ್ಶನ ಕೈಗೊಂಡ ಒಂದು ವಿಕ್ರಮ ಸಾಧನೆ, ಈ ಕಾರ್ಯಕ್ರಮ. ಸ್ವಾತಂತ್ರ್ಯ ಚೇತನವಾಗಿ ಬಾಳಿದ, ಕರ್ನಾಟಕದ ಆರಂಭಿಕ ರಾಜಕೀಯ ವ್ಯವಸ್ಥೆಯಲ್ಲಿ, ಅದರಲ್ಲೂ ಹಿಂದುಳಿದ ಹೈದರಾಬಾದ್ ಕರ್ನಾಟಕದ ಒಂದು ಪುಟ್ಟ ಹಳ್ಳಿಯಲ್ಲಿ ಜನಿಸಿದ ಭಾರತದ ಓರ್ವ

ಸುಪುತ್ರನಿಗೆ ಸಂದಾಯವಾದ ಗೌರವದ ಕಾಣಿಕೆಯಿದು. ಶ್ರೀ ನಿಜಲಿಂಗಪ್ಪನವರು ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರು ಮಾತಾಡಿದ್ದನ್ನು ನೋಡಿ, ಇವರೆಲ್ಲರ ಚಿತ್ರೀಕರಣ ಹೇಗೆ ಸಾಧ್ಯವಾಯಿತು ಎಂದು ಹುಬ್ಬೇರಿಸಿ ಪ್ರಶ್ನಿಸಿದವರೂ ಇದ್ದಾರೆ.

ಈ ನಡುವೆ ಗುಲಬರ್ಗಾ ವಿಶ್ವವಿದ್ಯಾಲಯದ ರಜತ ಮಹೋತ್ಸವದ ಸಂದರ್ಭದಲ್ಲಿ ಹೊರತರಲಾದ ಬೆಳ್ಳಿಬೆಳಕು ಮಾಲಿಕೆಯಲ್ಲಿ ಚಂದ್ರಶೇಖರ ಪಾಟೀಲರ ಕುರಿತಂತೆ ವಿಶೇಷ ಹೊತ್ತಗೆಯೊಂದನ್ನು ರಚಿಸಿಕೊಡುವ ಹೊಣೆಯನ್ನು ವಿಶ್ವವಿದ್ಯಾಲಯದ ಉಪಕುಲಪತಿಗಳು ನನಗೆ ವಹಿಸಿಕೊಟ್ಟರು. ಅದನ್ನು ಕಾಯಾ–ವಾಚಾ–ಮನಸ್ಸಿನೊಂದಿಗೆ ರಚಿಸಿಕೊಟ್ಟಾಗ ಮನಸ್ಸು ತುಂಬಿ ಬಂದಿತು. ಅದು ಲೋಕಾರ್ಪಣೆಗೊಂಡು ನಾಡಿನಾದ್ಯಂತ ಜನಮೆಚ್ಚುಗೆ ಗಳಿಸಿದ್ದಲ್ಲದೆ, ಚಂದ್ರಶೇಖರ ಪಾಟೀಲರ ಹೆಸರಿನೊಂದಿಗೆ ನನ್ನ ಹೆಸರು ಅವಿನಾಭಾವ ಸಂಬಂಧ ಪಡೆದು ಮುಂದೆ ಚಂದ್ರಶೇಖರ ಪಾಟೀಲರ ಯಾವುದೇ ಅಧಿಕೃತ ಬರವಣಿಗೆ ನನ್ನ ಪಾಲಿಗೆ ಒದಗಿಬರುವಂಥ ಸುಯೋಗ ಏರ್ಪಟ್ಟಿತು! ಇದು ನನ್ನ ಸೌಭಾಗ್ಯವೆಂದು ಭಾವಿಸುತ್ತ, ನನಗೆ ಎಷ್ಟೇ ಕಾರ್ಯಬಾಹುಳ್ಯವಿದ್ದಾಗ್ಯೂ, ಚಂದ್ರಶೇಖರ ಪಾಟೀಲರ ಕುರಿತಾದ ಯಾವುದೇ ಕೆಲಸ ನನ್ನ ಪಾಲಿಗೆ ಒದಗಿ ಬಂದಾಗ ಅದನ್ನು ಪ್ರಥಮವಾಗಿ ನಿರ್ವಂಚನೆಯಿಂದ ನಿಭಾಯಿಸುವ ಮನಸ್ಥಿತಿಗೆ ನಾನು ಬರುವಂತಾಯಿತು. ಗುಲಬರ್ಗಾ ವಿಶ್ವವಿದ್ಯಾಲಯದ ಗ್ರಂಥ ರಚನೆ ಕಾರ್ಯ ಮುಗಿದ ಸ್ವಲ್ಪ ಸಮಯದಲ್ಲೇ ಚಂದ್ರಶೇಖರ ಪಾಟೀಲರ ಕುರಿತಂತೆ ಇನ್ನೊಂದು ಹೊತ್ತಗೆಯನ್ನು ರಚಿಸಿಕೊಡುವಂತೆ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ವಿಭಾಗದ ಪ್ರಧಾನ ಸಂಯೋಜಕರಾದ ಶ್ರೀ ಬಸವರಾಜ ಪಾಟೀಲ ಸೇಡಂ ಅವರಿಂದ ಕರೆಯೋಲೆಯೊಂದು ಹಸ್ತಗತವಾಯಿತು. ಹೈದರಾಬಾದ್ ಕರ್ನಾಟಕ ಸಾಂಸ್ಕೃತಿಕ ಪರಿಚಯ ಪುಸ್ತಕ ಮಾಲೆಯಲ್ಲಿ ಈ ಹೊತ್ತಗೆ 2008ರಲ್ಲಿ ಬೆಳಕು ಕಂಡಿತು.

ಮುಂದೆ, ಶ್ರೀ ಬಿ.ಬಿ.ಯಲಗಾರರು ರಚಿಸಿದ "ಹೈದರಾಬಾದ್ ಕರ್ನಾಟಕದ ಹುಲಿ-ಚಂದ್ರಶೇಖರ ಪಾಟೀಲ" ಎಂಬ ನಾಟಕದ ಹಸ್ತಪ್ರತಿಯನ್ನು ಪರಿಷ್ಕರಿಸಿ ಕೊಡುವ ಮಹಾತ್ಕಾರ್ಯವನ್ನು ಗುಲಬರ್ಗಾ ವಿಶ್ವವಿದ್ಯಾಲಯದವರು ನನಗೆ ವಹಿಸಿಕೊಟ್ಟರು. ಮೊನ್ನೆ ಮೊನ್ನೆ, ಅಂದರೆ, 2010ರಲ್ಲಿ ಬಿಡುಗಡೆಯಾದ ಈ ನಾಟಕ ಮುಂದಿನ ದಿನಗಳಲ್ಲಿ ರಂಗಭೂಮಿಯಲ್ಲಿ ಪ್ರದರ್ಶನಕ್ಕೆ ಅನುವುಗೊಳ್ಳುತ್ತದೆ ಎಂದು ಭಾವಿಸುವುದರಲ್ಲಿ ತಪ್ಪೇನೂ ಇರಲಾರದು.

ಈ ನಡುವೆ ಕರ್ನಾಟಕದ ಮುಖ್ಯ ಕಾರ್ಯದರ್ಶಿಯವರ ಕಚೇರಿಯಿಂದ ಪತ್ರವೊಂದು ನನಗೆ ಬಂತು. 'ಪ್ರತಿಭಾವಂತ ಸಂಸದೀಯ ಪಟುಗಳು' ಮಾಲಿಕೆಯಲ್ಲಿ ಶ್ರೀ ಚಂದ್ರಶೇಖರ ಪಾಟೀಲರ ಕುರಿತಂತೆ ಪುಸ್ತಕವೊಂದನ್ನು ರಚಿಸಿ ಕೊಡಬೇಕೆಂದೂ, ಅದಕ್ಕೆ ಸಂಬಂಧಿಸಿದ ಕಡತಗಳನ್ನು ವಿಧಾನಸೌಧದ ಗ್ರಂಥಾಲಯದಿಂದ ಪಡೆದುಕೊಳ್ಳಬೇಕೆಂದೂ, ಸಂಬಂಧಪಟ್ಟ ಪ್ರವೇಶ ಮುಂತಾದ ಪರವಾನಗಿಗಳನ್ನು ಸೂಕ್ತವಾಗಿ ಪಡೆದುಕೊಳ್ಳಬೇಕೆಂದೂ ಪತ್ರದ ಒಕ್ಕಣೆ ಮಾಹಿತಿ ನೀಡಿತು. ನಾನು ಸಂಪ್ರೀತಿಯಿಂದ ಈ ಕೆಲಸವನ್ನು ಮಾಡಿಕೊಡುವೆನೆಂದು ಮುಖ್ಯ ಕಾರ್ಯದರ್ಶಿಯವರಿಗೆ ಮಾರೋಲೆ ಕಳುಹಿಸಿದೆ. ಅದರ ಫಲಸ್ವರೂಪವೇ ನಿಮ್ಮ ಕೈಯ್ಯಲ್ಲಿರುವ ಈ ಸದ್ಗ್ರಂಥ.

ಈ ಎಲ್ಲಾ ಕಾಯಕದ ಹಿಂದೆ ನನ್ನಲ್ಲಿ ಮೂಡುತ್ತಿರುವ ಜಿಜ್ಞಾಸೆ ಎರಡು ಬಗೆಯದು- ಒಂದು, ಶ್ರೀ ಚಂದ್ರಶೇಖರ ಪಾಟೀಲರ ಕುರಿತಂತೆ ಅಧಿಕೃತವಾಗಿ ಬರೆಯಬಲ್ಲೆನೆಂಬ ಹೆಮ್ಮೆ ಒಂದೆಡೆಯಾದರೆ, ಅಂತಹ ಒಂದು ಸದವಕಾಶ ನನ್ನ ಪಾಲಿಗೆ ನಿರಂತರವಾಗಿ ಒದಗಿ ಬರುತ್ತಿರುವುದು ನನ್ನ ಪೂರ್ವಜನ್ಮದ ಪುಣ್ಯ ವಿಶೇಷವಿರಬೇಕೆಂಬ ಜಿಜ್ಞಾಸೆ. ನಿಜಕ್ಕೂ ನಾನು ಧನ್ಯ ಎಂಬ ಭಾವನೆ ಮೂಡಿ ಬರುತ್ತದೆ. ದಿ| ಚಂದ್ರಶೇಖರ

ಪಾಟೀಲರ ದಿವ್ಯ ಚೈತನ್ಯ ಸದಾ ಕಾಲ ನನಗೆ ದಾರಿದೀಪವಾಗಿ ಮುನ್ನೆಡಸಲಿ ಎಂದು ಹಾರೈಸುತ್ತೇನೆ. ದಿ। ನಿಜಲಿಂಗಪ್ಪನವರು ಉದ್ಗರಿಸಿದಂತೆ, ಇಂದು, ಚಂದ್ರಶೇಖರ ಪಾಟೀಲರ ಹೆಸರೆತ್ತಿದರೆ ನನ್ನ ಅಂತಃಕರಣವೂ ಕರಗುತ್ತದೆ!

ಶ್ರೀ ಚಂದ್ರಶೇಖರ ಪಾಟೀಲರ ಬಗೆಗಿನ ಈ ಎಲ್ಲಾ ನನ್ನ ಬರವಣಿಗೆ, ಪ್ರಸಾರ ಮುಂತಾದ ಕೈಂಕರ್ಯಗಳ ಹಿಂದೆ, ಒಂದು ಅದಮ್ಯವಾದ ಪ್ರೇರಕ ಶಕ್ತಿ ಕೆಲಸ ಮಾಡಿದೆ ಎಂಬುದನ್ನು ಉಲ್ಲೇಖಿಸದಿದ್ದರೆ, ಪ್ರಾಯಶಃ ನಾನು ಕರ್ತವ್ಯ ಚ್ಯುತನಾಗುತ್ತೇನೆ. ಆ ಪ್ರೇರಕ ಶಕ್ತಿ ಬೇರಾರೂ ಅಲ್ಲ, ಶ್ರೀ ಚಂದ್ರಶೇಖರ ಪಾಟೀಲರ ಹಿರಿಯ ಪುತ್ರ, ಖ್ಯಾತ ನ್ಯಾಯವಾದಿ ಶ್ರೀ ಅರುಣ್ ಕುಮಾರ ಪಾಟೀಲರು. ತಂದೆಗೆ ತಕ್ಕ ವರ್ಚಸ್ಸನ್ನು ಹೊಂದಿರುವ ಶ್ರೀ ಅರುಣ್ ಕುಮಾರ್, ದಿನಬೆಳಗಾದರೆ, ತಮ್ಮ ತಂದೆಯ ಹೆಸರಿನ ಜಪಮಾಡುವವರು. ಮಾತೆತ್ತಿದರೆ ತಮ್ಮ ತಂದೆಯವರ ಗುಣಗಾನ ಹೊರತು, ಅವರಿಗೆ ಬೇರೇನೂ ಬೇಡ. ಇಂತಹ ಒಬ್ಬ ಸುಪುತ್ರನನ್ನು ಪಡೆದ ಶ್ರೀ ಚಂದ್ರಶೇಖರರೇ ಧನ್ಯರು ಎಂದು ಉದ್ಗರಿಸಬೇಕಾಗುತ್ತದೆ. ನನ್ನ ಈ ಪುಟ್ಟ ದೇಣಿಗೆಯ ಹಿಂದೆ ಶ್ರೀ ಅರುಣ್ ಕುಮಾರ್ ಪಾಟೀಲರ ಅಪಾರ ಧೀಶಕ್ತಿ ನಿರಂತರವಾಗಿ ಕೆಲಸ ಮಾಡಿದೆ ಎಂದು ಅನುಮಾನವಿಲ್ಲದೆಯೇ ನಾನು ಒಪ್ಪಿಕೊಳ್ಳುತ್ತೇನೆ. ಅವರಿಗೆ ನನ್ನ ಅನಂತಾನಂತ ವಂದನೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ.

ಈ ಎಲ್ಲಾ ಕೆಲಸಗಳಿಗೆ ಸದಾ ನನಗೆ ಕಾಲಕಾಲಕ್ಕೆ ಮಾಹಿತಿ ಮತ್ತು ಕಡತಗಳನ್ನು ಒದಗಿಸುತ್ತ ಸಹಕರಿಸಿದವರೆಂದರೆ ವಿಧಾನ ಸೌಧದ ಗ್ರಂಥಾಲಯ ಇಲಾಖೆಯ ಗ್ರಂಥಾಲಯದ ಮುಖ್ಯ ಗ್ರಂಥಪಾಲಕಿಯವರಾದ ಶ್ರೀಮತಿ ಅನಸೂಯಾ ಎಸ್. ದೇವಿಗಿರಿ ಹಾಗೂ ಗ್ರಂಥದ ಸಂಪಾದಕರೂಗಳಿಗೂ ನನ್ನ ನೆನಕೆಗಳು ಸಲ್ಲುತ್ತವೆ.

ಹೀಗೊಂದು ಅತ್ಯುಪಯುಕ್ತ ಗ್ರಂಥ ಪ್ರಕಟವಾಗಲು ಕಾರಣವಾದ ಕರ್ನಾಟಕ ಸರಕಾರಕ್ಕೆ, ಅದರಲ್ಲೂ ಮುಖ್ಯವಾಗಿ ವಿಧಾನ ಪರಿಷತ್ತಿನ ಗೌರವಾನ್ವಿತ ಸಭಾಪತಿಗಳೂ, ಗ್ರಂಥಾಲಯ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಡಿ.ಎಚ್. ಶಂಕರಮೂರ್ತಿ ಹಾಗೂ ವಿಧಾನ ಸಭೆಯ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪ ಅವರಿಗೂ, ಉಪಸಮಿತಿಯ ಎಲ್ಲ ಸದಸ್ಯರುಗಳಿಗೂ, ನನ್ನ ಆತ್ಮೀಯರಾದ ಶ್ರೀ ಅರುಣ್ ಕುಮಾರ್ ಪಾಟೀಲ್ ಅವರಿಗೂ ನನ್ನ ಅನಂತ ವಂದನೆಗಳು ಸಲ್ಲುತ್ತವೆ.

ಮಂಗಳೂರು
4.3.2011

**ಡಾ। ಶಿವಾನಂದ ಬೇಕಲ್ ಭಾ.ಪ್ರಸೇ.(ನಿ)**
"ಸಾಯಿಕೃಷ್ಣ", ಮಾರ್ನಮಿಕಟ್ಟೆ 1ನೇ ಕ್ರಾಸ್,
ಮಂಗಳೂರು-575 001, ದ.ಕ.ಜಿಲ್ಲೆ
ಸಂಚಾರಿ ದೂರವಾಣಿ: 9449002132/
08281184688

# 1

# ಮಹಾಗಾಂವ್ ಚಂದ್ರಶೇಖರ ಪಾಟೀಲ್

## ಜೀವನ ದರ್ಶನ

"ಚಂದ್ರಶೇಖರ ಪಾಟೀಲರ ಹೆಸರೆತ್ತಿದರೆ ನನ್ನ ಅಂತಃಕರಣ ಕರಗುತ್ತದೆ."

–ಎಸ್. ನಿಜಲಿಂಗಪ್ಪ, ಕರ್ನಾಟಕದ ಮಾಜಿ ಮುಖ್ಯಮಂತ್ರಿ, ರಾಜಕೀಯ ಮುತ್ಸದ್ದಿ, ಹಿರಿಯ ಚೇತನ



## ಮಹಾಗಾಂವ್
## ಚಂದ್ರಶೇಖರ ಪಾಟೀಲ್

### ಬದುಕಿನ ಕೆಲವು ಅವಿಸ್ಮರಣೀಯ ಘಟನೆಗಳು

ಧರ್ಮನಿಷ್ಠ ದಂಪತಿಗಳಾದ ಸಂಗಶೆಟ್ಟಿ ಪಾಟೀಲ ಮತ್ತು ವೀರಮ್ಮನವರ ತೃತೀಯ ಪುತ್ರನಾಗಿ ಚಂದ್ರಶೇಖರ ಪಾಟೀಲರು 1918 ಜನವರಿ ತಿಂಗಳ 25 ರಂದು ಗುಲಬರ್ಗಾ ಜಿಲ್ಲೆಯ ಸಣ್ಣ ಊರು ಮಹಾಗಾಂವ್‌ನಲ್ಲಿ ಜನಿಸಿದರು.

ಬಾಲ್ಯ ಶಿಕ್ಷಣವನ್ನು ಮಹಾಗಾಂವ್‌ನಲ್ಲಿ ಮತ್ತು ನಿಜಾಮಾಬಾದ್‌ಗಳಲ್ಲಿ ಮುಗಿಸಿ, ಪ್ರೌಢ ಶಿಕ್ಷಣವನ್ನು ಪಡೆಯುವುದಕ್ಕಾಗಿ ಗುಲಬರ್ಗಾದ ಫೌಕಾನಿಯಾ

ಶಾಲೆಯಲ್ಲಿ ಪ್ರವೇಶ ಪಡೆದರೂ, ಆರನೇ ತರಗತಿಯವರೆಗೆ ಮಾತ್ರ ಶಿಕ್ಷಣವನ್ನು ಪಡೆಯುವುದಕ್ಕೆ ಸಾಧ್ಯವಾಯಿತು. ಪಠ್ಯಕ್ಕಿಂತಲೂ ಪಠ್ಯೇತರ ಚಟುವಟಿಕೆಗಳಲ್ಲೇ ಬಾಲಕ ಚಂದ್ರಶೇಖರನಿಗೆ ಆಸಕ್ತಿ. ಕಾರಹುಣ್ಣಿಮೆ, ನಾಗರ ಪಂಚಮಿ ಮೊದಲಾದ ಹಬ್ಬಹರಿದಿನಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಹುಮ್ಮಸ್ಸು. ಶಿರಿಯಾಳ, ಕುಸ್ತಿಗಮ್ಮತ್ತುಗಳೆಂದರೆ ಜೀವಾಳ. ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಮೆಚ್ಚಿನ ಮುತುವರ್ಜಿ.

ಒಮ್ಮೆ ಹರ್ಡೇಕರ್ ಮಂಜಪ್ಪನವರು ಮಹಾಗಾಂವ್‌ಗೆ ಬಂದಾಗ ಅವರ ಭಾಷಣ ಕೇಳಿ ಮೈಮರೆತು, ರಾಷ್ಟ್ರಾಭಿಮಾನ ಬೆಳೆಯಲು ನಾಂದಿ ಹಾಡಿತು. ಹರ್ಡೇಕರ್ ಮಂಜಪ್ಪನವರ ಕೆಚ್ಚೆದೆಯ ಭಾಷಣ ಎಳೆಯ ಚಂದ್ರಶೇಖರರಲ್ಲಿ ಸ್ವಾತಂತ್ರ್ಯ ಹೋರಾಟದ ಕಿಡಿ ಹೊತ್ತಿಸಿದ್ದು. ಮಗನನ್ನು ಸರಿದಾರಿಗೆ ತರುವ ಸಲುವಾಗಿ ತಂದೆ ಸಂಗಶೆಟ್ಟಿ, ವಿದ್ಯಾಭ್ಯಾಸಕ್ಕಾಗಿ ಅಣ್ಣನ ಜತೆ ಗುಲಬರ್ಗಾಕ್ಕೆ ಕಳುಹಿಸಿದ್ದು. ತನ್ಮೂಲಕ ಸ್ಥಳೀಯ ತರುಣ ಸಂಘದ ಸಂಪರ್ಕ ಏರ್ಪಟ್ಟಿತು. ಕಷ್ಟದಲ್ಲಿರುವವರಿಗೆ ನೆರವು, ಅನ್ಯಾಯದ ವಿರುದ್ಧ ಹೋರಾಟಕ್ಕೆ ತರುಣ ಸಂಘದ ಸದಸ್ಯತ್ವ ಇಂಬುಕೊಟ್ಟಿತು. ಓದಿನಲ್ಲಿ ಆಸಕ್ತಿ ಮೂಡದೆ, ಜನಸೇವೆಯಲ್ಲೇ ತೊಡಗುವ ಹಂಬಲ. ಶಾಲೆಗೆ ತಿಲಾಂಜಲಿ. ನೇಗಿಲ ಯೋಗಿಯಾಗಿ ಮಹಾಗಾಂವ್‌ಗೆ ವಾಪಸ್ಸು.

ಅಂದು ಹೈದರಾಬಾದ್ ಕರ್ನಾಟಕ ನಿಜಾಮನ ಕಪಿಮುಷ್ಟಿಯಲ್ಲಿ ನಲುಗುತ್ತಿದ್ದ ಸಮಯ. ರಜಾಕಾರರ ದೌರ್ಜನ್ಯದಿಂದ ನರಳುತ್ತಿದ್ದ ಜನರು. ಶೋಷಿತ, ಭಯಪೀಡಿತ ಜನರು. ನಿಜಾಮಶಾಹಿಯ ವಿರುದ್ಧ ಬಹಿರಂಗವಾಗಿಯೇ ಸಿಡಿದೇಳುವ ಪ್ರಮೇಯ ಒದಗಿ ಬಂತು. ತರುಣ ಸಂಘ ಸ್ಥಾಪಿಸಿ ಚಳವಳಿಯ ರೂಪುರೇಷೆ ಸಿದ್ಧಪಡಿಸಿ, ಹೋರಾಟಕ್ಕಿಳಿದು ಸಮರ್ಥ ನಾಯಕನಾಗುವ ಸಾಮರ್ಥ್ಯ ಕೂಡಿಬಂತು.

ಗೆಳೆಯರೊಂದಿಗೆ ಸೇರಿ ನಿಜಾಮಶಾಹಿಯ ವಿರುದ್ಧ ಎನ್ನುವಂತೆ ಬಸವೇಶ್ವರ ದೇವಾಲಯದ ಮೇಲೆ 'ಓಂ' ಧ್ವಜವನ್ನು ಹಾರಿಸುವ ಧೈರ್ಯವನ್ನು ಪ್ರದರ್ಶಿಸುವ ಅವಕಾಶ. ಮತೀಯ ಸಂಘರ್ಷಕ್ಕೆ ಎಡೆಯಾಗದಂತೆ ಧ್ವಜವನ್ನು

ಕೆಳಗಿಳಿಸಿದಾಗ ಅತೀವ ಸಂತಾಪ. ದೇಶ ಕೇವಲ ಸ್ವಾತಂತ್ರ್ಯಕ್ಕಾಗಿ ಮಾತ್ರ ಹೋರಾಟ ನಡೆಸಿದರೆ ಸಾಲದು, ಜನರಲ್ಲಿ ಬೇರೂರಿರುವ ಅನಾಚಾರ, ಕಂದಾಚಾರ, ಮೂಢನಂಬಿಕೆ ಮತ್ತು ಜಾತಿ ವೈಷಮ್ಯದ ವಿಷಬೀಜಗಳನ್ನೂ ಕಿತ್ತೊಗೆಯಬೇಕೆಂಬ ಸಂಕಲ್ಪ. ಸ್ವಾತಂತ್ರ್ಯ ಚಳವಳಿ, ನಿಜಾಮಶಾಹಿಯ ವಿರುದ್ಧದ ಹೋರಾಟ ಮತ್ತು ರಜಾಕಾರರನ್ನು ಹದ್ದುಬಸ್ತಿನಲ್ಲಿಡುವ ಕಾಯಕಕ್ಕೆ ಆಗಲೇ ಟೊಂಕಕಟ್ಟಿ ದುಡಿಯುವ ಸಾಹಸ. ಯುವಕರನ್ನು ಒಗ್ಗೂಡಿಸಿ ಅಹಿರ್ನಿಶಿ ದುಡಿಮೆ.

ಮುಂದೆ ಸ್ವಾತಂತ್ರ್ಯಾನಂತರ ಓರ್ವ ಸಮಾಜಸುಧಾರಕನಾಗಿ, ಶಿಕ್ಷಣ ಪ್ರೇಮಿಯಾಗಿ ಹೊರಹೊಮ್ಮಿದ ಚೇತನ. ಶಿಕ್ಷಣದಲ್ಲಿ ರಾಜಕೀಯಕ್ಕೆ ಅವಕಾಶವಿಲ್ಲದಂತೆ ಮಾಡುವ ದೃಢಸಂಕಲ್ಪ.

ಮಹಾಗಾಂವ್ ಕಾಂಗ್ರೆಸ್ ಅಧ್ಯಕ್ಷನಾಗಿ ರಾಜಕೀಯ ಪ್ರವೇಶ. 1953ರಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯಾಗಿ, ತದನಂತರ, ಜಿಲ್ಲಾ ಅಧ್ಯಕ್ಷನಾಗಿ ಪದವಿಯಲಂಕಾರ. ತನ್ನ 33ನೇ ವಯಸ್ಸಿನಲ್ಲೇ ಶಾಸನ ಸಭೆಗೆ ಆಯ್ಕೆ. 1957ರಲ್ಲಿ ಮತ್ತೆ ಮೈಸೂರು ವಿಧಾನ ಸಭೆಗೆ ಸದಸ್ಯನಾಗಿ ಸೇರ್ಪಡೆ.

ತನ್ನ ತಾಯ್ನಾಡಿಗಾಗಿ ದಿನಹಗಲು ದುಡಿಮೆ. ಅದರಲ್ಲೇ ದೈವ ಸಾಕ್ಷಾತ್ಕಾರ. ದೀನದಲಿತರ ಬಂಧುವಾಗಿ, ಶೋಷಿತ ಜನರ ಕೂಗಿಗೆ ಧ್ವನಿಯಾಗಿ ಹೈದರಾಬಾದ್ ಕರ್ನಾಟಕದ ಹಿಂದುಳಿದ ಪ್ರದೇಶದಲ್ಲಿ ಏಕಮೇವ ಅದ್ವಿತೀಯನಾಗಿ ಹೋರಾಟ. ಹೋರಾಡುತ್ತಲೇ ಸಾಗಿದ ಅಂತಿಮ ಯಾತ್ರೆ.

## ಮೈಲಿಗಲ್ಲುಗಳು:

| | | |
|---|---|---|
| 1. | ಚಂದ್ರಶೇಖರ ಪಾಟೀಲರ ಜನನ–<br>ಗುಲಬರ್ಗಾದ ಮಹಾಗಾಂವ್‌ನಲ್ಲಿ | 25.01.1918 |
| 2. | ಮಹಾಗಾಂವ್‌ನ ಪ್ರಾಥಮಿಕ ಶಾಲೆಯಲ್ಲಿ ದಾಖಲು | 1925 |

3. ಗುಲಬರ್ಗಾ ಶಾಲೆಗೆ ಸೇರ್ಪಡೆ 1931

4. ತಂದೆ ಸಂಗಶೆಟ್ಟಿಯವರ ಅಪೇಕ್ಷೆಯಂತೆ ಶಾಲೆ ಬಿಡಿಸಿ
ಮಹಾಗಾಂವ್‌ಗೆ ಪುನರಾಗಮನ 1932

5. ತರುಣ ಸಂಘ ಸ್ಥಾಪನೆ 1935

6. ತರುಣ ಸಂಘದ ಮಿತ್ರಬಳಗದವರೊಂದಿಗೆ
ನೆತ್ತರಿನಿಂದ ಸಹಿಮಾಡಿದ ಐತಿಹಾಸಿಕ ಘಟನೆ 1935

7. ಚಂದ್ರಶೇಖರ ಪಾಟೀಲರ ಮದುವೆ 1935

8. ಓಂ ಧ್ವಜಾರೋಹಣ 1936

9. 'ವಂದೇ ಮಾತರಂ' ಚಳುವಳಿಯಲ್ಲಿ ಭಾಗವಹಿಸಿ
ವೈಜಾಪುರ, ಔರಂಗಾಬಾದ್, ಘರಭಣಿ, ಹೈದರಾಬಾದ್
ಮುಂತಾದೆಡೆ ಜೈಲುವಾಸದ ಅನುಭವ 1938

10. ಧಾರ್ಮಿಕ ಪ್ರವಚನ ಸಪ್ತಾಹವನ್ನು ಯಶಸ್ವಿಯಾಗಿ
ಏರ್ಪಡಿಸಿದ್ದು 1939

11. ಅರಾಜಕತೆಯ ವಿರೋಧವಾಗಿ ಸಿಡಿದೆದ್ದು
ಪ್ರತಿಭಟನೆ ಸೂಚಿಸಿ, ಸರಕಾರದ ವಿರುದ್ಧ ಸಂಘಟಿಸಿ
ಹೋರಾಟ ನಡೆಸಿದ್ದಕ್ಕಾಗಿ ಬಂಧಿಸಲ್ಪಟ್ಟು
ಗುಲಬರ್ಗಾದಲ್ಲಿ ಜೈಲುವಾಸ 1946

12. ಶೋಲಾಪುರದಲ್ಲಿ ವಾಸ 1947

13. ನಿಕಟವರ್ತಿ ಸ್ನೇಹಿತ ಅಪ್ಪಾರಾವ್ ಗುಂಡೇಟಿಗೆ
ಬಲಿಯಾಗಿ ಹುತಾತ್ಮರಾದುದು 1948

14. ಮಹಾಗಾಂವ್‌ನಲ್ಲಿ ಕಾಂಗ್ರೆಸ್ ಸಂಸ್ಥೆಯ ಸ್ಥಾಪನೆ 1949

15. ಗುಲಬರ್ಗಾ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದುದು 1951

16. ಗುಲಬರ್ಗಾ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ,
ಹೈದರಾಬಾದ್ ಪ್ರಾಂತ ವಿಧಾನ ಸಭಾ ಸದಸ್ಯರಾಗಿ
ಆಯ್ಕೆಯಾದುದು 1952

17. ವಿಶಾಲ ಮೈಸೂರು ರಾಜ್ಯದ ವಿಧಾನಸಭಾ
ಸದಸ್ಯರಾಗಿ ಆಯ್ಕೆಯಾದುದು 1957

18. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ
ಶಿವಸಾಯುಜ್ಯ ಹೊಂದಿದ್ದು 22.12.1960

## ಪುಣ್ಯಭೂಮಿ ಮಹಾಗಾಂವ್

ಚಾರಿತ್ರಿಕ ನಗರ ಗುಲಬರ್ಗಾದಿಂದ ಹುಮನಾಬಾದ್‌ಗೆ ತೆರಳುವ ಮುಖ್ಯ ರಸ್ತೆಯಲ್ಲಿ ವಾಯುವ್ಯಕ್ಕೆ 25ಕಿಲೋಮೀಟರ್ ಅಂತರದಲ್ಲಿದೆ ಮಹಾಗಾಂವ್.

'ಮಹಾಗಾಂವ್' ಎಂಬ ಹೆಸರನ್ನೇ ಕೇಳಿದರೆ ಮೈ ರೋಮಾಂಚನ-ಗೊಳ್ಳಬೇಕು. ಯಾಕಂದರೆ, ಮಹಾಗಾಂವ್ ಕವಿಗಳನ್ನೂ ವೇದಾಂತಿಗಳನ್ನೂ, ಸ್ವಾತಂತ್ರ್ಯಯೋಧರನ್ನೂ ನೀಡಿದ ನಾಡು. ನಿಜಾಮರ ವಿರುದ್ಧ ಸಿಡಿದೆದ್ದ ಕಲಿಗಳ ಬೀಡು.

ರಾಯಪ್ಪ ಗೌಡರಂಥ ವರ್ಚಸ್ವಿಗಳ ತೇಜೋಭೂಮಿ; ಪಂಚಾಂಗ ಪ್ರಸಿದ್ಧ ರುದ್ರಾರಾಧ್ಯರಂಥ ಪಂಡಿತರ ಜ್ಞಾನ ಭೂಮಿ; ಗುರುಲಿಂಗಸಿದ್ಧ ಕವಿಗಳಂಥ ಭಾವಜೀವಿಗಳ ಪುಣ್ಯಭೂಮಿ; ಅಪ್ಪಾರಾವ್ ಪಾಟೀಲರಂಥ ಕೆಚ್ಚೆದೆಯ ಬಂಟರ ಜನ್ಮಭೂಮಿ– ಗಾಂಧೀಜಿಯವರ ದಂಡೀ ಯಾತ್ರೆಯಲ್ಲಿ ಭಾಗವಹಿಸಿದ ಶರಣಯ್ಯ ಸ್ವಾಮಿಗಳಿಗೆ, ಆರ್ಯಸಮಾಜದ ವಿನಾಯಕ ವಿದ್ಯಾಲಂಕಾರ್ ಮೊದಲಾದವರಿಗೆ ಜನ್ಮ ನೀಡಿದ ಪುಣ್ಯಭೂಮಿಯೂ ಮಹಾಗಾಂವ್.

ಇವರೆಲ್ಲ ತಮ್ಮ ವೈಯಕ್ತಿಕ ಬದುಕನ್ನು ತಾವಿರಿಸಿಕೊಂಡ ಧ್ಯೇಯ-ಗಳಿಗನುಗುಣವಾಗಿ ರೂಪಿಸಿಕೊಂಡರಲ್ಲದೆ, ತಮ್ಮ ಹಳ್ಳಿಗಳ ಮತ್ತು ನೆರೆಹೊರೆಯ ಸೀಮೆಗಳ ಚರಿತ್ರೆಯನ್ನೇ ಬದಲಿಸಿದರು. ಭೂಪಟದಲ್ಲಿ ಎಂದೂ ಹೆಸರನ್ನು ಗಳಿಸಿಕೊಳ್ಳಲು ಅನರ್ಹವಾಗಿದ್ದ ಊರು ನಾಡಿನ ಇತಿಹಾಸ ಬರೆಯುವಲ್ಲಿ ಪ್ರಮುಖ ಪಾತ್ರವಹಿಸುವಂತೆ ಮಾಡಿದವರು. ಮಹಾಗಾಂವ್ ಅಂತಹ ಒಂದು ಪುಣ್ಯ ಪ್ರದವಾದ ಗ್ರಾಮ.

ಪೂರ್ವ ಭಾಗದಲ್ಲಿ ರಜಾಕಾರರಿಗೆ ಲಕ್ಷ್ಮಣರೇಖೆಯಂತಿದ್ದ ಗಂಡೋರಿ ತೊರೆ ದಕ್ಷಿಣೋತ್ತರವಾಗಿ ಹರಿಯುತ್ತ ಮುಂದೆ ಬೆಣ್ಣತೊರಾ ನದಿಯನ್ನು ಸೇರುತ್ತದೆ. ಇವೆರಡರ ಸಂಗಮದಲ್ಲಿ ಒಂದು ಶಿವಾಲಯವಿದೆ. ಗಂಡೋರಿಯನ್ನು ದಾಟಿ ಊರನ್ನು ಪ್ರವೇಶಿಸಿದರೆ ರಸ್ತೆ ಇಬ್ಭಾಗವಾಗಿ ಹೊರಳಿಕೊಳ್ಳುತ್ತದೆ.



ಅಕ್ಕಮಹಾದೇವಿ

ರಸ್ತೆಯ ಕೊನೆಯ ಅಂಚಿನಲ್ಲಿರುವುದೇ ಅಕ್ಕಮಹಾದೇವಿಯ ಗುಡಿ. ಅನುಭವ ಮಂಟಪದ ಕಲ್ಯಾಣಕ್ಕೆ ಹೊರಟಿದ್ದ ವೈರಾಗ್ಯಮೂರ್ತಿ ಅಕ್ಕ ಮಹಾದೇವಿ ಇಷ್ಟಲಿಂಗ ಪೂಜೆಗೈದ ಪವಿತ್ರ ತಾಣದಲ್ಲಿ ಈ ಗುಡಿ ನಿರ್ಮಾಣವಾಗಿದೆ ಎಂದು ಐತಿಹ್ಯವಿದೆ. ಉಡುತಡಿಯನ್ನು ಬಿಟ್ಟರೆ ಪ್ರಾಚೀನವೆನಿಸುವ ಅಕ್ಕ ಮಹಾದೇವಿಯ ಗುಡಿ ಇರುವ ಸ್ಥಳ ಇದೊಂದೇ ಎಂದು ತೋರುತ್ತದೆ. ಹತ್ತಿರದಲ್ಲಿಯೇ ಹರಿಜನ ಬಸ್ತಿ, ಮಾರಮ್ಮನ ಗುಡಿ ಮೊದಲಾದವು ಗೋಚರಿಸುತ್ತವೆ.

ಉತ್ತರಕ್ಕೆ ಮಹಾಗಾಂವ್‌ನ ಧಾರ್ಮಿಕ ಹಾಗೂ ಸಾಮಾಜಿಕ ಜೀವನದಲ್ಲಿ ಮಹತ್ವವೆನಿಸುವ ಪಾತ್ರವಹಿಸಿದ ವಿರಕ್ತಮಠ ಕಣ್ಣಿಗೆ ಬೀಳುತ್ತದೆ. ಮುಂದೆ ಲಕ್ಷ್ಮೀ ಗುಡಿ, ಮಲ್ಲಿಕಾರ್ಜುನ ದೇವಾಲಯ ಮುಂತಾದ ಆಧ್ಯಾತ್ಮಿಕ ಕೇಂದ್ರಗಳಿವೆ. ಜತೆಗೆ ಪಶ್ಚಿಮದಲ್ಲಿ ಸ್ವಾತಂತ್ರ್ಯ ಪೂರ್ವದ ತರುಣರ ಚಟುವಟಿಕೆಗಳ ಕೇಂದ್ರ ಕಳ್ಳೀಮಠ ಮುಂತಾದ ಆಶ್ರಯ ತಾಣಗಳಿವೆ. ರೇವಣಸಿದ್ಧೇಶ್ವರ ಗುಡಿ, ವೀರಭದ್ರೇಶ್ವರಗುಡಿ, ಮಸೀದಿ, ಬಸವೇಶ್ವರ ದೇವಾಲಯ, ಹುಸೇನ ಸಮಾಧಿ, ಮಾಳಸಿದ್ಧ ಮತ್ತು ನಾಗನಾಥ ಗುಡಿಗಳು ಇಲ್ಲಿನ ಇನ್ನಿತರ ಪ್ರಮುಖ ಆಧ್ಯಾತ್ಮಿಕ ತಾಣಗಳು. ಚಂದ್ರನಗರ (ಚಂದ್ರಶೇಖರ ಪಾಟೀಲ ನಗರ) ಮತ್ತು ವಾಡಿ ತಾಂಡಾಗಳೂ ಇಲ್ಲಿವೆ.

ಇಂದು ಸಮಗ್ರ ಕರ್ನಾಟಕದ ಅವಿಭಾಜ್ಯ ಅಂಗವಾಗಿರುವ ಬೀದರ್, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ಅಂದು ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದವು. 136 ಹಳ್ಳಿಗಳನ್ನು ಹೊಂದಿದ್ದ ಗುಲಬರ್ಗಾ ತಾಲೂಕಿನ ಒಂದು ಪ್ರಮುಖ ಹಳ್ಳಿಯಾಗಿತ್ತು ಮಹಾಗಾಂವ್.

ಈ ಪ್ರಶಸ್ತ ಗ್ರಾಮದಲ್ಲೇ ಚಂದ್ರಶೇಖರ ಪಾಟೀಲರ ಜನನ.– 1918ರ ಜನವರಿ ತಿಂಗಳ 25ನೇ ತಾರೀಖಿನಂದು. ಈ ತಾಣ ಮುಂದೊಂದು ದಿನ ಹೈದರಾಬಾದ್ ಕರ್ನಾಟಕ ಪ್ರದೇಶದ, ಅಷ್ಟೇ ಏಕೆ?, ಅಖಿಲ ಕರ್ನಾಟಕದ ಜನತೆಯ ಪ್ರೀತಿಯ ಮಡಿಲಾಗಬಹುದೆಂದು ಅಂದು ಯಾರೂ ಎಣಿಸಿರಲಿಲ್ಲ. ಎಳೆಯ ಚಂದ್ರಶೇಖರರು ಓಡಿ ಆಡಿ ಬೆಳೆದು ದೊಡ್ಡವರಾಗಿ, ಸಂಸ್ಕಾರಗೊಂಡು ಸ್ವಾತಂತ್ರ್ಯದ, ಸಹೋದರತೆಯ ಭಾವನೆಗಳನ್ನು ಮೈಗೂಡಿಸಿಕೊಂಡ ಪರಿಸರವಿದು.

## ಗಣ್ಯರ ಅನಿಸಿಕೆಗಳು

"ಬೇಕು ಎನ್ನುವವನು ಸಣ್ಣವನೆನಿಸುತ್ತಾನೆ. ಸಾಕು ಎನ್ನುವವನು ದೊಡ್ಡವನೆನಿಸುತ್ತಾನೆ.

"ವೇದಿಕೆಯ ಮೇಲೆ ವೀರೇಂದ್ರ ಪಾಟೀಲರು ಕಾಣಿಸಿದ್ದರೆ, ಅದಕ್ಕೆ ಚಂದ್ರಶೇಖರ ಪಾಟೀಲರು ತಾವೇ ಹಿಂದೆ ಸರಿದು, ವೀರೇಂದ್ರ ಪಾಟೀಲರನ್ನು ಮುಂದೆ ತಳ್ಳಿದುದೇ ಕಾರಣವಾಗಿತ್ತು."
ಮಾನವೀಯ ಅಂತಃಕರಣದ ಮಾತುಗಳನ್ನು ಆಡಿದವರು ಕನ್ನಡದ ಕಟ್ಟಾಳು, ಪ್ರಖ್ಯಾತ ಪತ್ರಕರ್ತರಾದ ಹಿರಿಯ ಚೇತನ ಡಾ. ಪಾಟೀಲ ಪುಟ್ಟಪ್ಪನವರು.

–ಹೀಗಂತ ಚಂದ್ರಶೇಖರ ಪಾಟೀಲರ ಬಗೆಗೆ

"ನಾನು ಅವರಲ್ಲಿ ಒಬ್ಬ ದೇಶಭಕ್ತ, ಒಬ್ಬ ಶ್ರಧ್ಧಾವಂತ ರಾಷ್ಟ್ರೀಯನನ್ನು ಕಾಣುವುದರ ಜೊತೆಗೆ ತನ್ನ ಜನತೆಗೆ ಉಪಯುಕ್ತವಾದ ಯೋಜನೆಗಳನ್ನು ಕಾರ್ಯಗತಗೊಳಿಸುವುದರಲ್ಲಿ ಎಂತಹ ಪ್ರಸಂಗಗಳನ್ನೂ ಧೈರ್ಯದಿಂದ ಎದುರಿಸಬಲ್ಲ ನಿಷ್ಠಾವಂತ ಸತ್ಯವಾದಿಯನ್ನು ಗುರುತಿಸಿದ್ದೆ....."

*–ಮೆಹದಿ ನವಾಜ್ ಜಂಗ್*

"ಸ್ವಾತಂತ್ರ್ಯ ಪೂರ್ವದ ಕಾಲದಲ್ಲಿಯ ಶ್ರೀ ಪಾಟೀಲರು, ಬಹಳ ಚಾತುರ್ಯ ಮತ್ತು ಕುಶಲಮತಿಯಿಂದ ಸಮಾಜ ವಿಕಾಸದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಅವರ ಪ್ರದೇಶದ ಸರ್ವತೋಮುಖ ಅಭಿವೃದ್ಧಿಯಿಂದಾಗಿ ಪಾಟೀಲರು ಸದಾ ಸಾರ್ವಜನಿಕರ ಸ್ಮರಣೆಯಲ್ಲಿ ಅಚ್ಚಳಿಯದೆ ಉಳಿದಿದ್ದಾರೆ."

*–ಸ್ವಾಮಿ ರಮಾನಂದ ತೀರ್ಥರು*

"ಅವರು ಸ್ಪಷ್ಟ ಮತ್ತು ನೇರವಾದ ನಡೆನುಡಿಗಳಿಂದ ವ್ಯವಹರಿಸುತ್ತಿದ್ದರು. ಸದಾ ಹಸನ್ಮುಖರಾಗಿ ಇತರರಿಗೆ ಯಾವುದೇ ಸಂದರ್ಭದಲ್ಲಾದರೂ ಸಹಾಯ

ನೀಡಲು ಸಿದ್ಧರಿರುತ್ತಿದ್ದರು. ಅವರ ಸೃಜನಾತ್ಮಕ ರೀತಿಯ ಸಹಾಯ ಪಡೆಯದ ಯಾವುದೇ ಸಾರ್ವಜನಿಕ ಸಂಸ್ಥೆ ಗುಲಬರ್ಗಾದಲ್ಲಿ ಇರಲಿಲ್ಲವೆಂದೇ ಹೇಳಬಹುದು...."

*–ಕೆ.ವಿ.ರಂಗಾರೆಡ್ಡಿ*

"ವಿಶೇಷವಾದ ಯಾವುದೇ ರೀತಿಯ ತರಬೇತಿ ಇಲ್ಲದಿದ್ದರೂ ಕೇವಲ ತಮ್ಮ ನಿಷ್ಠೆ, ಕಾರ್ಯತತ್ಪರತೆ ಮತ್ತು ಸೇವಾ ಮನೋಭಾವಗಳಿಂದ ಅವರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದುದಲ್ಲದೆ ಬೇರೆ ಬೇರೆ ಮನೋವೃತ್ತಿಯ ಜನಗಳನ್ನು ಒಂದೇ ಒಂದು ಕ್ರಮ ಶಿಸ್ತುಗಳಿಗೆ ಆಧೀನವಾಗಿ ಸಂಯೋಜಿಸುವಲ್ಲಿ, ಅಂಥವರನ್ನು ಸಂಸ್ಥೆಯ ನಿಷ್ಠಾವಂತ ಕಾರ್ಯಕರ್ತರನ್ನಾಗಿ ರೂಪಿಸುವಲ್ಲಿ ಅದ್ವಿತೀಯರಾಗಿದ್ದರು."

*–ಡಾ। ರಫೀಕ್ ಜಕಾರಿಯಾ*

"ಅವರ ಉದಾತ್ತ ವಿಚಾರಗಳು, ಭವ್ಯ ಕ್ರಿಯಾಶಿಲತೆ, ನಿರ್ಭೀತಿ ಸೇವಾ ಪ್ರವೃತ್ತಿ– ಇವೆಲ್ಲವುಗಳ ಹಿನ್ನೆಲೆಯಲ್ಲಿ ಅವರೊಬ್ಬ ಭಾರತದ ಸುಪುತ್ರರು. ರಾಷ್ಟ್ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ತೋರಿದ ತ್ಯಾಗ, ಪಟ್ಟ ಕಷ್ಟಕಾರ್ಪಣ್ಯಗಳು ತೋರಿದ ಧೈರ್ಯ ಸಾಹಸಗಳು ಈ ನಾಡಿನ ಯಾವ ಜನಾಂಗಕ್ಕೂ ನಿರಂತರವಾದ ಉಜ್ವಲ ಉದಾಹರಣೆಯಾಗಿದೆ."

*–ಎಸ್. ನಿಜಲಿಂಗಪ್ಪ*

"ಗೌಡರ ಮನಸ್ಸು ಗುಲಾಬಿ, ಚಮೇಲಿ ಇದ್ದಾಂಗ ಇತ್ತು..."

*– ಶಂಕರ್ ರಾವ್ ಮಜ್ಜಿಗೆ*

"ಶಹೀದೋಂಕೆ ಚಿತಾಪರ್ ಹರ್ ಬರಸ್ ಲಗೇಗಿ ಮೇಲೆ; ಬಾಕಿ ನಿಶಾಂ ಯಹೀ ರಹೇಗಾ... ಹರಿಜನರನ್ನು ಮುಟ್ಟಿದರ ಮನಿಗೆ ಬಂದು ಜಳಕಾ ಮಾಡೂ ಕಾಲದಾಗ ಪಟೇಲರು ಅವರ ಉದ್ಧಾರಕ್ಕೆ ನಿಂತರು. ನಮ್ಮ ಪಾಲಿಗೆ ಅವರು ನೆಹರು...."

*–ರಾಮಚಂದ್ರ ವೀರಪ್ಪ*

"ವಕೀಲಿ ವೃತ್ತಿ ಆರಂಭಿಸಿದ ನಾನು ಜಿಲ್ಲೆಗೇ ದೊಡ್ಡ ವಕೀಲನಾಗಿ ಭಾರೀ ಹೆಸರು ಮಾಡಬೇಕೆಂದುಕೊಂಡಿದ್ದರೂ ಚಂದ್ರಶೇಖರ ಪಾಟೀಲರ ಸಹವಾಸದಿಂದಾಗಿ ನನ್ನ ಬದುಕು ಬೇರೆಯೇ ತಿರುವನ್ನು ಪಡೆದುಕೊಂಡಿತು. ನಾನು ನನ್ನ ರಾಜಕೀಯ ಜೀವನದುದ್ದಕ್ಕೂ ಅವರನ್ನು ಸ್ಮರಿಸಿಕೊಂಡಿದ್ದೇನೆ."

*–ವೀರೇಂದ್ರ ಪಾಟೀಲ್*

"ಅವನ ಕೂದಲು ಕೊಂಕಿಸುವ ಶಕ್ತಿ ನಮಗಿರಲಿಲ್ಲ; ಆತನನ್ನು ಟೀಕಿಸಿ ಮಾತಾಡಿದರ ಪರಿಣಾಮ ಆಗಿ ಜನ ಸೇರುತಿದ್ದರು."

*– ಶಂಭುಲಿಂಗಪ್ಪ ಗೌಡರು*

" ಪಟೇಲರ ಆವಾಜದಾಗ ಹುಕುಮತ್ ಇತ್ತು..."

*– ರೇವಣಸಿದ್ಧಪ್ಪ ಬಸಂತಿ*

"..ನನ್ನ ಕರದು ತಾಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷನನ್ನಾಗಿ ಮಾಡಿದರು. ಅವರು ನನ್ನ ರಾಜಕೀಯ ಗುರು. ಅವರದು ನಿಷ್ಕಳಂಕ ಚಾರಿತ್ರ್ಯ. ಕೆಲಸವೇ ದೇವರು ಅಂತ ನಂಬಿದವರು. ಅವರು ಬದುಕಿದ ರೀತಿ ನಮಗ ದಾರಿ ತೋರಿಸಬೇಕು."

*–ಅಣ್ಣಾರಾವ್ ಪಾಟೀಲ (ಕೊರಳ್ಳಿ)*

"....ಎಷ್ಟು ತಾರೀಫು ಮಾಡಿದರೂ ಕಡಿಮೆ;.... ದುನಿಯಾ ಝುಕಾಸೂ ಹಂಗಾ ಇದ್ದರು. ಪಾರ್ಟಿದೂ ಮಜಬೂತ ಕೆಲಸಾ ಮಾಡವ್ರು. ಯಾಂವ ಹ್ಯಾಂಗ, ಯಾರು ಮತಲಬೀ, ಯಾರು ಕೆಲಸಾ ಮಾಡುವರು, ಯಾರ್ನ ಎಲ್ಲಿಡಬೇಕು, ಇದ್ನೆಲ್ಲಾ ತಿಳಕೊಂಡು ಬರೋಬ್ಬರಿ ಸ್ಕ್ರೂ ತಿರುಗಿಸುವರು. ಹೊಂಟರ ಹುಲಿ ಹೊಂಟ್ಹಾಂಗ; ಎರಡ ದಾರೀಯವರ್ನ ಕಂಡರ ಮುದ್ದೀ ಮಾಡಿ ಬಿಡತಿದ್ರು. ಹೊರಗ ಹೊಂಟರ ಹಿಂದ ನೂರ ದೋಶನೇ ಮಂದಿ ಇರಬೇಕು. ಉಳದವ್ರೆಲ್ಲಾ ಏನ್ರೀ ಸ್ವಾರ್ಥದ ಮಂದಿ. ಬಡೂರ ಹಿತ ಅಂತ ಬರೇ ಮಾತಾಡವ್ರು."

*–ರುಕ್ನುದ್ದೀನ್ (ಸೇವಕ)*

"ಬಹಳ ಅಪರೂಪದ ವ್ಯಕ್ತಿತ್ವ ಚಂದ್ರಶೇಖರ ಪಾಟೀಲ್ ಅವರದ್ದು. ಅವ್ರನ್ನ ನೋಡಿದ ತಕ್ಷಣವೇ ನನಗೆ ಒಂಥರದ ಆಶ್ಚರ್ಯ, ಒಂಥರದ ಸಂತೋಷ, ಒಂಥರದ ಆತ್ಮೀಯ ಭಾವನೆ- ಇವೆಲ್ಲ ಒಟ್ಟಿಗೆ ಬರ್ತಿತ್ತು."

*–ದಿ।ರಾಮಕೃಷ್ಣ ಹೆಗಡೆ*

"ನಿರಪೇಕ್ಷ ಮತ್ತು ಸಮರ್ಪಣಾ ಭಾವದ ಸೇವೆಯ ವಿಷಯದಲ್ಲಿ ಅವರು ಮಹಾರಾಷ್ಟ್ರದ ಭೀಮರಾವ್ ಸಾವನೀಕರ್ ಅವರ ಪ್ರತಿಬಿಂಬದಂತಿದ್ದರು."

*–ಡಾ। ಎಂ.ಚೆನ್ನಾ ರೆಡ್ಡಿ*

## ತಂದೆ ಸಂಗಶೆಟ್ಟಿ ಪೊಲೀಸ್ ಪಾಟೀಲ್

ಚಂದ್ರಶೇಖರರ ತಂದೆಯ ಹೆಸರು ಸಂಗಶೆಟ್ಟಿ. ತಾಯಿ ವೀರಮ್ಮನವರು. ಸಂಗಶೆಟ್ಟಿ ಪಾಟೀಲರು ಬೆಳೆದು ದೊಡ್ಡವರಾದದ್ದು ಅವರ ಮಾವನವರಾದ ಕೆಸರಟಗಿಯ ಶ್ರೀ ಸಿದ್ಧಪ್ಪ ಶ್ರೀಮಂತರ ಮನೆಯಲ್ಲಿ.



ಅವರಿಗೆ ಹಿರಿಯ ಮಗಳು ಮೈನಾಬಾಯಿ, ಅನಂತರ ರುದ್ರಶೆಟ್ಟಿ ಹುಟ್ಟಿದರು. ಆಮೇಲೆ ಚಂದ್ರಶೇಖರರು ಜನಿಸಿದಾಗ ಹಳ್ಳಿಯ ವಾತಾವರಣ ಸಂಘರ್ಷದ ಸ್ಥಿತಿಯಲ್ಲಿತ್ತು. ಸಂಗಶೆಟ್ಟಿಯವರದ್ದು ವಾಡೆಯಂಥ ದೊಡ್ಡ ಮನೆ. ಹರವಾದ ಪ್ರವೇಶದ್ವಾರದ ಮೇಲೆ ಕಮಾನು ದ್ವಾರದ ಇಬ್ಬದಿಗಳಲ್ಲಿ ಎತ್ತರವಾದ ಕಟ್ಟೆಗಳು. ದ್ವಾರದಿಂದ ಒಳಗೆ ಪ್ರವೇಶಿಸಿದರೆ ಅಲ್ಲೊಂದು ವಿಶಾಲ ಅಂಗಳ. ಅದನ್ನು ದಾಟಿ ಇನ್ನೊಂದು ಪ್ರವೇಶದ್ವಾರದಿಂದ ಮುನ್ನಡೆದರೆ ದೊಡ್ಡ ಮನೆ ಕಣ್ಣಿಗೆ ಬೀಳುತ್ತದೆ. ನಡುವೆ

ಚೌಕಾಕಾರದ ಅಂಗಳ. ಅದರ ಮೂರು ಬದಿಗಳಲ್ಲಿ ಎದ್ದು ನಿಂತ ಹಳೆಯ ಕಾಲದ ಮನೆ. ಇದುವೆ ಊರಿನ ಪಟೇಲರಾದ (ಪಟೇಲ, ಪಾಟೀಲ, ಗೌಡರು- ಇವೆಲ್ಲ ಸಮಾನಾರ್ಥಕ ಪದಗಳು) ಸಂಗಶೆಟ್ಟಿಯವರ ಮನೆ.

ಸಂಗಶೆಟ್ಟಿ ಪಾಟೀಲರು ನಿಜಾಮ ಸರಕಾರದಿಂದ ನಿಯುಕ್ತಿಗೊಂಡ ಊರಿನ ಪೊಲೀಸ್ ಪಾಟೀಲರಾಗಿದ್ದರು. ಅವರು ಊರ ಗೌಡರೂ, ಪಟೇಲರೂ ಹೌದು. ಸಂಸ್ಥಾನದ ಆಡಳಿತ ಯಂತ್ರದಲ್ಲಿ ಅವರ ಸ್ಥಾನ ಚಿಕ್ಕದಾಗಿದ್ದರೂ ಗ್ರಾಮದ ಮಟ್ಟಿಗೆ ಅವರದ್ದು ದೊಡ್ಡ ಹೊಣೆಗಾರಿಕೆಯ ಸ್ಥಾನ. ದಿವಾಣಿ ಮತ್ತು ಫೌಜುದಾರಿ ಅಧಿಕಾರಗಳನ್ನು ಹೊಂದಿದ್ದ ಪಟೇಲರು ಸರಕಾರದ ಪ್ರತಿನಿಧಿಯಾಗಿ ಕೆಲಸ ಮಾಡಬೇಕಾಗುತ್ತಿತ್ತು.

ಕುಟುಂಬವೊಂದಕ್ಕೆ ಹಿರಿಯರಿದ್ದಂತೆ ಸಂಗಶೆಟ್ಟಿಯವರು ಊರಿಗೇ ಹಿರಿಯರಾಗಿದ್ದುದರಿಂದ ಅವರ ಹೊಣೆಗಾರಿಕೆ ವಿಶೇಷವಾಗಿತ್ತು. ವಿಭಿನ್ನ ವರ್ಗ, ಪಂಗಡ ಮತ್ತು ಧಾರ್ಮಿಕ ಶ್ರದ್ಧೆಗಳನ್ನು ಅನುಸರಿಸುತ್ತಿದ್ದ ಒಂದು ಸಮಾಜದ ಹಿರಿತನವನ್ನು ಸಮದರ್ಶಿಭಾವದಿಂದ ತೂಗಿಸಿಕೊಂಡು ಹೋಗುವುದು ಕಠಿಣವಾದ ಕೆಲಸವೇ ಸರಿ. ಸಂಗಶೆಟ್ಟಿಯವರು ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದ ನಾಡನ್ನು ಸಮತೂಕದಿಂದ ಮುಂದೊಯ್ಯುವ ಶಕ್ತಿಯನ್ನು ಹೊಂದಿದ್ದರು.

## ಬಾಲಕ ಚಂದ್ರಶೇಖರ

ಸಂಗಶೆಟ್ಟರು ತಮ್ಮ ಮಗ ಚಂದ್ರಶೇಖರರನ್ನು 1925ರ ಆಗಸ್ಟ್ ತಿಂಗಳಲ್ಲಿ ಶಾಲೆಗೆ ಕಳುಹಿಸಿದರು. ಆಗ ಚಂದ್ರಶೇಖರನಿಗೆ ಏಳು ವರ್ಷ ಪ್ರಾಯ. ನಿರ್ದಿಷ್ಟ ಅಭ್ಯಾಸ ಕ್ರಮದ ಮತ್ತು ಹಲವಾರು ನಿಯಮ ನಿಬಂಧನೆಗಳ ಕಟ್ಟಿನಲ್ಲಿದ್ದ ಔಪಚಾರಿಕ ಶಿಕ್ಷಣ ಆತನಿಗೆ ರುಚಿಸಲಿಲ್ಲವೆಂದು ತೋರುತ್ತದೆ. ಶುದ್ಧಬರಹ ತೀಡುವುದು, ವಾಚನಗಳಲ್ಲಿ ಲವಲವಿಕೆ ಕಂಡುಬಂದರೂ ಉಳಿದ ವಿಷಯಗಳಲ್ಲಿ ಆಸಕ್ತಿ ಇರಲಿಲ್ಲ. ಆದರೂ ತನ್ನ ಸಹಪಾಠಿಗಳೊಂದಿಗೆ ಚಂದ್ರಶೇಖರ 'ಓಂನಾಮ ಸಿದ್ಧಂ' ತಿದ್ದಲು ಕಲಿತ.

ಬಾಲಕ ಚಂದ್ರಶೇಖರನಿಗೆ ಪ್ರಮುಖವಾಗಿ ಸೆಳೆದ ವಿಷಯವೆಂದರೆ ಇತಿಹಾಸ. ಅದರಲ್ಲೂ, ಪ್ರಾಚೀನ ಕಾಲದ ದೈವೀಪುರುಷರ, ಜ್ಞಾನವೇತ್ತರ, ಪವಾಡಪುರುಷರ ಹಾಗೂ ಪರಾಕ್ರಮಿಗಳ ಚರಿತ್ರೆಗಳನ್ನು ಮನನ ಮಾಡುವುದೆಂದರೆ ಎಲ್ಲಿಲ್ಲದ ಉತ್ಸಾಹ. ಓದುತ್ತಿದ್ದಂತೆ ಪರವಶಗೊಂಡು ಮೈಮರೆಯುತ್ತಿದ್ದ. ಹಾಗಾಗಿ ಜೀವಕ್ಕೆ ಹಿಡಿಸದ ಶಾಲೆ ಒಂದು ಬಂಧನವಾಗಿ ಅವನಿಗೆ ಪರಿಣಮಿಸಿತು. ಶಾಲೆ ಬಿಟ್ಟು ಹೊರಬಂದನೆಂದರೆ ಸರ್ವತಂತ್ರ ಸ್ವತಂತ್ರನಾಗಿ ಹಕ್ಕಿಯಂತೆ ಹಾರುತ್ತಿದ್ದ. ವಿರಾಮ ಸಿಕ್ಕೊಡನೆ ಎಲ್ಲ ಸ್ನೇಹಿತರನ್ನು ಕೂಡಿಕೊಂಡು ಒಂದೆಡೆ ಬಯಲಿನಲ್ಲಿ ಕೂಡಿಸಿ ಅವರಿಗೆ ಶಿಸ್ತಿನ ಪಾಠ ಕಲಿಸುತ್ತಿದ್ದ. ಅಂತೆಯೇ ಸಹಜವಾಗಿ ಗೆಳೆಯರ ಗುಂಪೊಂದು ಸಿದ್ಧವಾಯಿತು. ಅದರ ನಾಯಕನೂ ಆದ. ಗೆಳೆಯರನ್ನು ಅವರ ಸಾಮಾಜಿಕ ಅಥವಾ ಆರ್ಥಿಕ ಸ್ಥಾನಮಾನದಿಂದ ನೋಡದೆ, ಸಮಭಾವದಿಂದ ಎಲ್ಲರೊಡನೆ ಬೆರೆಯುತ್ತಿದ್ದ ಚಂದ್ರಶೇಖರ ತಾನೊಬ್ಬ ವತನದಾರ ಮನೆತನದ, ಪೊಲೀಸ್ ಪಾಟೀಲರ ಮಗನೆಂಬ ಜಂಭವಾಗಲೀ ಅಹಂಕಾರವಾಗಲೀ ಆತನಲ್ಲಿ ಇದ್ದಿರಲಿಲ್ಲ. ಮನೆಯಿಂದ ತಂದ ತಿಂಡಿತಿನಿಸುಗಳನ್ನು ತನ್ನ ಗೆಳೆಯರೊಂದಿಗೆ ಸಮಭಾವದಿಂದ ಹಂಚಿಕೊಳ್ಳುತ್ತಿದ್ದ. ಯಾವ ಕೆಲಸವಾದರೂ ಗೆಳೆಯರೆಲ್ಲ ಇರಲೇಬೇಕು. ಮುಂದಾಳ್ತನದ ಗುಣ ಬಾಲ್ಯದಲ್ಲೇ ಕಂಡು ಬಂದದ್ದು ಎಂಬುದರಲ್ಲಿ ಸಂದೇಹವಿಲ್ಲ.

ನಾಗರಪಂಚಮಿಯಲ್ಲಿ ಉಯ್ಯಾಲೆ ಕಟ್ಟಿ ಆಡುವುದು, ಗೆಳೆಯರ ಸಂಗದಲ್ಲಿ ಸ್ವಯಂಸೇವಕರ ತಂಡ ರಚಿಸಿ ಉತ್ಸವ, ಜಾತ್ರೆಗಳಲ್ಲಿ ಗದ್ದಲ ಗಲಿಬಿಲಿಯಾಗದಂತೆ ಶಿಸ್ತಿನ ಅಚ್ಚುಕಟ್ಟುತನವನ್ನು ಏರ್ಪಡಿಸುವುದು ಚಂದ್ರಶೇಖರರ ಬಾಲ್ಯದ ಕಸುಬು. ಇಂತಹ ಕಾರ್ಯಚಟುವಟಿಕೆಗಳಲ್ಲಿ ಅವನ ಬಳಿ ದಣಿವೆಂಬುದು ಯಾವತ್ತೂ ಸುಳಿಯುತ್ತಿರಲಿಲ್ಲ.

ಶ್ರಾವಣ ಬಂತೆಂದರೆ ಮಹಾಗಾಂವ್ ಊರಿಗೆ ದೊಡ್ಡ ಹಬ್ಬ. ಶ್ರಾವಣದಲ್ಲಿ ಸೋದರ ಮಾವ ಕಾವ್ಯಶ್ರೀ ಶರಣಬಸವೇಶ್ವರರ ಪುರಾಣ ಪ್ರವಚನ ನಡೆಸಿದರೆ, ಆ ಕಥೆಗಳನ್ನು ಕೇಳುವ ಉತ್ಸಾಹ ಚಂದ್ರಶೇಖರನಿಗೆ. ಕಲ್ಯಾಣ ನಾಡಿನಲ್ಲಿ ಕ್ರಾಂತಿಯ

ಕಹಳೆಯೂದಿದ ಬಸವೇಶ್ವರರ ಧೀರೋದ್ಧಾತ ಧೀಮಂತ ವ್ಯಕ್ತಿತ್ವ ಚಂದ್ರಶೇಖರರನ್ನು ಅತಿಯಾಗಿ ಆಕರ್ಷಿಸಿದ್ದು ಈ ಬಗೆಯ ಪುರಾಣ ಪ್ರವಚನ ಸಂಕೀರ್ತನೆಗಳಿಂದ.

ಆಲಮಟ್ಟಿಯ ವಿದ್ಯಾಲಯದಿಂದ ಐತಿಹಾಸಿಕ ಪ್ರವಾಸಕ್ಕಾಗಿ ಕಲ್ಯಾಣ ಮಾರ್ಗವಾಗಿ ಹೊರಟಿದ್ದ ಹರ್ಡೀಕರ್ ಮಂಜಪ್ಪನವರು, ಮಹಾಗಾಂವ್‌ಗೆ ಬಂದಾಗ, ಅವರೊಂದಿಗೆ ಇತರರಂತೆ ಚಂದ್ರಶೇಖರ ಗೌರವ, ನಯ ವಿನಯದೊಂದಿಗೆ ಕಳೆದ ಕ್ಷಣಗಳು ಮರೆಯಲಾಗದ ಘಟನೆ.

ತಾಯಿ ವೀರಮ್ಮನವರ ಧಾರ್ಮಿಕ ಶ್ರದ್ಧೆಯ ಬದುಕು ಚಂದ್ರಶೇಖರರ ಮನಸ್ಸಿನಲ್ಲಿ ಧರ್ಮ, ರಾಷ್ಟ್ರಾಭಿಮಾನಗಳು ಉದ್ದೀಪನಗೊಳ್ಳುವಂತೆ ಸಹಕಾರಿಯಾದರೂ, ಚಂದ್ರಶೇಖರರ ಮನಸ್ಸು ಓದು ಬರಹದಲ್ಲಿ ತೊಡಗಿಸುವಂತೆ ಹಿರಿಯರು ಮಾಡುತ್ತಿದ್ದ ಪ್ರಯತ್ನಗಳೆಲ್ಲ ವಿಫಲಗೊಳ್ಳಲಾರಂಭಿಸಿದವು. ಓದಿಗೆ ಬದಲಾಗಿ ಆಟ-ಚಟುವಟಿಕೆ ಸಂಘಟನೆಗಳಲ್ಲಿಯೇ ಹೆಚ್ಚು ಕಾಲ ಕಳೆಯುತ್ತಿದ್ದುದು ಸಂಗಶೆಟ್ಟರನ್ನು ಚಿಂತೆಗೀಡುಮಾಡಿತು.

## ತುಂಟರಲ್ಲಿ ತುಂಟ

ಒಂದು ಸಲ ಹಾರಕೋಡದ ಶಿವಶರಣಪ್ಪನವರು ಮಹಾಗಾಂವ್‌ಗೆ ಬಂದರು. ಸಂಗಶೆಟ್ಟರ ಆಶ್ರಯದಲ್ಲಿ ಬೆಳೆದು ಇದೀಗ ನಿಜಾಮಾಬಾದಿನಲ್ಲಿ ಶಿಕ್ಷಕ ವೃತ್ತಿಯನ್ನು ಆರಂಭಿಸಿದ್ದ ಶಿವಶರಣಪ್ಪನವರ ಮೇಲ್ವಿಚಾರಣೆಯಲ್ಲಿ ಚಂದ್ರಶೇಖರರ ವಿದ್ಯಾಭ್ಯಾಸ ಸಾಂಗವಾಗಿ ಸಾಗಬಹುದೆಂದು ಬಗೆದು ಮಗನನ್ನು ಅವರ ಜತೆಗೆ ಕಳುಹಿಸುವ ಪ್ರಸ್ತಾಪ ಮಾಡಿದರು.

ಶಿವಶರಣಪ್ಪನವರು ಚಂದ್ರಶೇಖರರನ್ನು ತಮ್ಮೊಂದಿಗೆ ಕರೆದೊಯ್ದರು. ನಿಜಾಮಾಬಾದಿನಲ್ಲಿ ನಾಲ್ಕನೆಯ ತರಗತಿಯಲ್ಲಿ ಚಂದ್ರಶೇಖರರು ಓದಲು ಪ್ರಾರಂಭಿಸಿದ. ಊರು ಪರಿಸರ ಹೊಸದು. ಬಾಲ್ಯದಿಂದಲೂ ಹೆಣೆದುಕೊಂಡು ಬಂದ ಗೆಳೆಯರ ಸಂಗ ಇದ್ದಕ್ಕಿದ್ದಂತೆ ಮುರಿದು ಬಿದ್ದುದರಿಂದ, ಹೊಸ ಊರು

ಪರಿಸರದಲ್ಲಿ ಚಂದ್ರಶೇಖರನಿಗೆ ಒಬ್ಬಂಟಿಯಾಗಿ ಇರುವುದೆಂದರೆ ದುಸ್ಸಹವೆನಿಸಿತು. ಊರು, ಮನೆ, ಗೆಳೆಯರ ನೆನಪು ಸದಾ ಕಾಡುತ್ತಿತ್ತು.

ಸ್ವಲ್ಪ ಸಮಯದ ಬಳಿಕ ಹೊಸ ಪರಿಸರಕ್ಕೆ ಹೊಂದಿಕೊಂಡ ಚಂದ್ರಶೇಖರ, ಅಲ್ಲಿಯೂ ಒಂದು ಗೆಳೆಯರ ಗುಂಪನ್ನು ಹುಟ್ಟುಹಾಕಿದ. ಆದರೆ, ಶಾಲೆಯ ಪಾಠ ವಿಷಯಗಳಲ್ಲಿ ಮಾತ್ರ ಮನಸ್ಸು ನಿಲ್ಲದಾಯಿತು.

ಶಿವಶರಣಪ್ಪನವರು ಚಂದ್ರಶೇಖರನಿಗೆ ಆಗಾಗ ಗದರಿಸಿ ತಿದ್ದಿ ಬುದ್ಧಿ ಹೇಳುತ್ತಿದ್ದರು. ಶಿವಶರಣಪ್ಪನವರು ಈಗ ಬರಿಯ ಶಿಕ್ಷಕರಾಗಿರಲಿಲ್ಲ. ಚಂದ್ರಶೇಖರರ ವಿದ್ಯಾಭ್ಯಾಸದ ಮೇಲ್ವಿಚಾರಕರು ಮಾತ್ರವಲ್ಲ, ಅವರ ಪಾಲಕರೂ ಆಗಿದ್ದರು.

ಆದರೆ ಚಂದ್ರಶೇಖರನ ವಿದ್ಯಾಭ್ಯಾಸದ ಮಟ್ಟಿನ ಅಭಿವೃದ್ಧಿ ಅಷ್ಟಕ್ಕಷ್ಟೇ ಎಂಬುದು ಶವಶರಣಪ್ಪನವರಿಗೆ ವೇದ್ಯವಾಗಲು ಹೆಚ್ಚು ಸಮಯ ಹಿಡಿಯಲಿಲ್ಲ.

ಕೆಲ ಸಮಯದಲ್ಲೇ ಶಿವಶರಣಪ್ಪನವರಿಗೆ ನಿಜಾಮಾಬಾದ್‌ನಿಂದ ಕೊಹೀರ್‌ಗೆ ವರ್ಗವಾಯಿತು. ಗುರುಗಳ ಹಿಂದೆ ಶಿಷ್ಯನೂ ಕೊಹೀರ್‌ಗೆ ಬಂದ. ಅಲ್ಲಿಯೂ ಚಂದ್ರಶೇಖರನ ತುಂಟತನ ನಿಲ್ಲಲಿಲ್ಲ; ಎದ್ದುಕಾಣುವ ಬದಲಾವಣೆ ಹುಡುಗನ ವಿದ್ಯಾರ್ಥಿ ಜೀವನದಲ್ಲಿ ಕಂಡು ಬರಲಿಲ್ಲ.

ಒಂದು ಸಲ ಜಾತ್ರೆಗೆ ಬಂದ ಅಂಗಡಿಕಾರರ ಚಕ್ಕಡಿಯ ಬೆನ್ನು ಹತ್ತಿ ಚಂದ್ರಶೇಖರ ಎರಡು ಮೂರು ದಿನ ಎಲ್ಲಿಗೋ ಹೋಗಿಬಿಟ್ಟ. ತಾವೆಷ್ಟು ಹದ್ದುಬಸ್ತಿನಲ್ಲಿಟ್ಟರೂ ಹುಡುಗ ಕೈಮೀರುತ್ತಿರುವ ಚಿಂತೆ ಶಿವಶರಣಪ್ಪನವರಿಗೆ ಕಾಡಹತ್ತಿತು. ಶಿವಶರಣಪ್ಪನವರು ಸಿಟ್ಟಿಗೆದ್ದು ಆ ದಿನ ಚಂದ್ರಶೇಖರನನ್ನು ದಂಡಿಸಿದರು. ಚಂದ್ರಶೇಖರ ಹೇಳದೇ ಕೇಳದೇ ಕೊಹೀರ್‌ನಿಂದ ಕಾಲುಕಿತ್ತ.

ಮಹಾಗಾಂವ್‌ಗೆ ಬಂದ ಚಂದ್ರಶೇಖರನನ್ನು ಕಂಡ ಮನೆಯವರಿಗೆಲ್ಲ ಆಶ್ಚರ್ಯ. ಒಂದು ತೆರನಾದ ಆತಂಕ. ನಡೆದುದೆಲ್ಲವನ್ನೂ ವಿವರಿಸಿ, ತಾನಿನ್ನು

ಮತ್ತೆ ಅಲ್ಲಿಗೆ ಹೋಗಲಾರೆನೆಂದು ಹಠತೊಟ್ಟ. ಊರಲ್ಲೇ ಉಳಿದುಬಿಟ್ಟ. ಯಾರು ಎಷ್ಟೇ ಮನವೊಲಿಸಲು ಪ್ರಯತ್ನಿಸಿದರೂ ಅದು ಪ್ರಯೋಜನಕಾರಿಯಾಗಲಿಲ್ಲ.

ತನ್ನ ಭವಿಷ್ಯವನ್ನು ಕುರಿತು ಗಂಭೀರವಾರವಾಗಿ ಆಲೋಚಿಸಿ ಒಂದು ನಿಶ್ಚಿತ ವಿಚಾರ ಹರಳುಗಟ್ಟುವ ವಯಸ್ಸು ಆತನಿಗಿನ್ನೂ ಬಂದಿರಲಿಲ್ಲ.

ಈಗ ಮತ್ತೆ ತನ್ನ ಗೆಳೆಯರ ಗುಂಪಿನಲ್ಲಿ ಹೊಸ ಚೈತನ್ಯ ಮೂಡಿಸಿದ. ಕಳೆದು ಹೋದ ಯಾವುದೋ ನಿಧಿ ಮತ್ತೆ ಮರಳಿ ಬಂದಂತಾಯಿತು ಅವನಿಗೆ. ಮಹಾಗಾಂವ್‌ನ ಹಳ್ಳದ ದಂಡೆಯ ಬಾಳೆಯ ತೋಟ ಮರುಜೀವ ಪಡೆಯಿತು. ಶಿವಲಿಂಗ ಮಂಟಪದ ಹಿಂದಿನ ಹುಣಿಸೇ ಮರದ ನೆರಳು ಅವರ ಚಟುವಟಿಕೆಗಳ ಕೇಂದ್ರವಾಯಿತು.

## ನೀರ ಬಿಟ್ಟ ಮೀನು

ತನ್ನ ಭವಿಷ್ಯವನ್ನು ಕುರಿತು ಗಂಭೀರವಾಗಿ ಆಲೋಚಿಸಿ ಒಂದು ನಿಶ್ಚಿತ ವಿಚಾರ ಹರಳುಗಟ್ಟುವ ವಯಸ್ಸು ಅದಾಗಿರಲಿಲ್ಲ. ಡೋಲಾಯಮಾನವಾಗಿ ಹತ್ತು ಹಲವು ವಿಷಯಗಳಲ್ಲಿ ಹರಿದು ಹಂಚಿಹೋಗುವ ಹದಿ ವಯಸ್ಸು ಎಂದರೂ ತಪ್ಪಾಗದು. ಚಂದ್ರಶೇಖರನ ಹದಿಹರೆಯದ ಮನಸ್ಸು ಹತ್ತು ಹಲವು ಉತ್ಸಾಹ ಉಲ್ಲಾಸಗಳಿಂದ ಹಾಡತೊಡಗಿತು. ಗೆಳೆಯರ ಗುಂಪುಕಟ್ಟಿ ತಮ್ಮ ಮೇಲೆ ನಡೆಯುತ್ತಿದ್ದ ಅನ್ಯಾಯ ಅತ್ಯಾಚಾರಗಳನ್ನು ಪ್ರತಿಭಟಿಸಲು ಹವಣಿಸತೊಡಗಿದ ಚಂದ್ರಶೇಖರ. ಊರಲ್ಲೇ ಉಳಿದರೆ ಅವನ ಭವಿಷ್ಯ ಹಾಳಾಗುವುದೆಂದು ಸಂಗಶೆಟ್ಟರು ಮಗನನ್ನು ಕರೆತಂದು ಗುಲಬರ್ಗಾದ ಫೌಕಾನಿ ಉಸ್ಮಾನಿಯಾ ಶಾಲೆಗೆ ಸೇರಿಸಿದರು. ನಾಡಿನಾದ್ಯಂತ ನಡೆಯುತ್ತಿದ್ದ ವಿದ್ಯಮಾನಗಳು ಚಂದ್ರಶೇಖರನಿಗೆ ತನ್ನ ಹೊಸ ಸಹಪಾಟಿಗಳು ಮತ್ತು ಶಿಕ್ಷಕರ ಮುಖೇನ ತಿಳಿದುಬರುತ್ತಿದ್ದವು.

ಕಟ್ಟಾ ಶಿಸ್ತು ನಿಯಮಗಳಿಗೆ ಹೆಸರಾದ ಅಬ್ದುಲ್ ಸತ್ತಾರ್ ಹಕ್ಕಾನಿ ಮತ್ತು ಮಹಾಗಾಂವ್‌ನ ಗೋಪಾಲರಾಯರ ಗರಡಿಯಲ್ಲಿ ಚಂದ್ರಶೇಖರ ಸಂಗಶೆಟ್ಟಿಯವರ ಮನವಿಯಂತೆ ಪಳಗತೊಡಗಿದ. ಅಂತೆಯೇ ಮಹಾಗಾಂವ್‌ನ ಬಸವಂತರಾವ್ ವಕೀಲರು ಸಂಗಶೆಟ್ಟಿಯವರ ಮಕ್ಕಳ ವಿದ್ಯಾಭ್ಯಾಸದ ಹೊಣೆ ವಹಿಸಿಕೊಂಡರು.

ಚಂದ್ರಶೇಖರ ಅಣ್ಣ ರುದ್ರಶೆಟ್ಟಿಯವರೊಂದಿಗೆ ಶಾಲೆಯ ಸಮೀಪದ ಚಿಂತಾಮಣಿಯವರ ಮನೆಯಲ್ಲಿ ಉಳಿದುಕೊಂಡು ಓದಲಾರಂಭಿಸಿದ. ಸ್ನೇಹಜೀವಿಯಾದ ಚಂದ್ರಶೇಖರನಿಗೆ ಸ್ನೇಹಿತರನ್ನು ಬಿಟ್ಟು ಬಂದ ವಿರಹವೇದನೆ ಏಕಾಕಿಯನ್ನಾಗಿಸಿತು.

ಮನಸ್ಸು ಕೇಳದೆ ಊರಿನಿಂದ ಗೆಳೆಯ ವಿರೂಪಾಕ್ಷನನ್ನು ಕರೆಸಿಕೊಂಡ. ಕೆಲಸವೇನೂ ದೊರಕದ್ದರಿಂದ ಗೆಳೆಯ ವಿರೂಪಾಕ್ಷ ತಿಂಡಿ ತಿನಿಸುಗಳನ್ನು ಮಾಡಿ ಮಾರಾಟ ಮಾಡುತ್ತ ಕಾಲಕಳೆಯ ತೊಡಗಿದ. ಮಿಠಾಯಿಯನ್ನು ಸಾಲಕ್ಕೆ ಪಡೆದು ದುಡ್ಡುಕೊಡದೆ ಕೆಲವು ಕಿಲಾಡಿಗಳು ವಿರೂಪಾಕ್ಷನನ್ನು ಪೀಡಿಸತೊಡಗಿದರು. ಅವನ ಪರವಾಗಿ ವಕಾಲತ್ತು ವಹಿಸಬಂದ ಚಂದ್ರಶೇಖರನನ್ನು ಹಿಡಿದು ದಂಡಿಸಿದರು. ಪೊಲೀಸರಿಗೆ ತಿಳಿಸಿದರೆ ತಿರುಗೇಟಾಯಿತು. ಇವರನ್ನೇ ಅಪರಾಧಿಗಳೆಂದು ಥಳಿಸಿ ದಂಡಿಸಿ ಕಳುಹಿಸಿಕೊಟ್ಟರು. ಯಾಕಂದರೆ ಅವರೂ ಆ ಕಿಲಾಡಿಗಳ ಪಕ್ಷವನ್ನೇ ವಹಿಸಿದವರಾಗಿದ್ದರು.

## ಸಾಹಸಪ್ರಿಯ

ಚಂದ್ರಶೇಖರ ಇಂತಹ ಅನ್ಯಾಯ ಅತ್ಯಾಚಾರ ಅನಾಗರಿಕ ನೀತಿಗಳನ್ನು ಖಂಡಿಸುವ ಪ್ರಯುಕ್ತ ಅಣ್ಣ ರುದ್ರಶೆಟ್ಟಿಯ ಸಲಹೆ ಕೇಳಿದ. ಹೆಸರು ರುದ್ರಶೆಟ್ಟಿಯಾದರೆ ಸ್ವಭಾವದಲ್ಲಿ ಅತ್ಯಂತ ಸಾಧು ಪ್ರವೃತ್ತಿಯ ಪ್ರಸಂಗಾವಧಾನಿ ಗಂಭೀರ ಸ್ವಭಾವದ ರುದ್ರಶೆಟ್ಟಿ ತಮ್ಮನಿಗೆ ಮಾರ್ಗದರ್ಶನ ನೀಡುತ್ತ ಬಂದರು–

"ಚಂದ್ರಣ್ಣ, ಪಾಶ್ಚಾತ್ಯ ರಾಷ್ಟ್ರದವರಂಗ ನಮ್ಮ ಜನಾನೂ
ಸಾಹಸ ಪ್ರಿಯರಾಗಬೇಕು. ನಮ್ಮ ಹೇಡಿತನವನ್ನು ಹೊಡೆದೋಡಿಸಬೇಕು.
ನಾವು ಕೂಳಿಗಾಗಿ ಹುಟ್ಟಿದವರು ಅನ್ನೋ ವಿಚಾರ ಬಿಟ್ಟುಬಿಡಬೇಕು.
ನಮ್ಮಲ್ಲಿ ಮುಂದಾಳಾಗುವ ಧೈರ್ಯ ಮೂಡಬೇಕು.
ಅನುಯಾಯಿಯಾಗುವ ಬುದ್ಧಿಯಾದರೂ ಬೆಳೆಯಬೇಕು.
ನಮ್ಮ ಶಿಸ್ತು ಬೆಳೀಬೇಕು. ಸಂಘಟನಾ ಶಕ್ತಿ ಕುದುರಬೇಕು..."

–ಎಂದು ಸ್ಫೂರ್ತಿಯನ್ನು ತಮ್ಮನಲ್ಲಿ ತುಂಬಿದರು. ಚಂದ್ರಣ್ಣನ ಹೃದಯಕ್ಕೆ ಮಿಂಚು ಆವೇಶಗಳ ಶಕ್ತಿಯ ಸ್ಪರ್ಶನೀಡಿದರು.

ವಿರೂಪಾಕ್ಷ ಗುಲಬರ್ಗಾವನ್ನು ಬಿಟ್ಟು ಮಹಾಗಾಂವ್‌ಗೆ ಮರಳಿಬಂದ. ತಮ್ಮ ರುದ್ರಶೆಟ್ಟಿಯನ್ನು ಅಕ್ಕ ಮೈನಾಬಾಯಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೈದರಾಬಾದ್‌ಗೆ ಕರೆಸಿಕೊಂಡಳು. ಚಂದ್ರಶೇಖರ ಹಾಗೂ ಹೀಗೂ 5ನೇ ತರಗತಿಯನ್ನು ಮುಗಿಸಿ ತೇರ್ಗಡೆಯಾದಾಗ ತಂದೆ ತಾಯಿಗಳಿಗೆ ಅತೀವ ಸಂತಸವಾಯಿತು.; ನೆಮ್ಮದಿಯ ಉಸಿರು ಬಿಟ್ಟರು.

## ಶಾಲೆಗೆ ತಿಲಾಂಜಲಿ

ಎಳೆಯ ವಯಸ್ಸಿನಲ್ಲೆ ಚರಿತ್ರೆಯ ಪುಸ್ತಕಗಳು ಪ್ರಿಯವೆನಿಸಿದರೂ, ಶಾಲೆಯ ಓದು ಚಂದ್ರಶೇಖರನಿಗೆ ರುಚಿಸಲೇ ಇಲ್ಲ. ಸ್ವತಃ ಕನ್ನಡ ಉರ್ದು ಸಾಹಿತ್ಯವನ್ನು ಅಭ್ಯಾಸ ಮಾಡಲು ತೊಡಗಿದ ಚಂದ್ರಶೇಖರನಿಗೆ, ಅಣ್ಣನ ಮಾತುಗಳ ಅಂತರಾರ್ಥದ ಅರಿವು ಲಭಿಸತೊಡಗಿದ್ದು ಈ ಸಮಯದಲ್ಲೇ. ನಾವೆಲ್ಲ ಒಂದಾಗಬೇಕು, ಸಂಘಟಿತರಾಗಬೇಕು, ಸ್ನೇಹದೊಂದಿಗೆ ಇದ್ದಾಗ ಏನನ್ನೂ ಗೆಲ್ಲಲು ಸಾಧ್ಯ ಎಂಬುದೇ ಅಂದಿನ ಧ್ಯೇಯವಾಕ್ಯವಾಗಿತ್ತು. ಆದರೆ ತಂದೆ ಸಂಗಶೆಟ್ಟಿಯವರ ಮನಸ್ಸಲ್ಲಿ ಮೂಡಿದ್ದು ಬೇರೆಯೇ– 'ಸಂಗದೋಷದಿಂದ ಮಗ

ಕೆಟ್ಟುಹೋಗಿದ್ದಾನೆ!' ಎಂಬುದೇ ಅವರ ಅಭಿಪ್ರಾಯವಾಗಿತ್ತು. ತಂದೆ, ಚಂದ್ರಶೇಖರನನ್ನು 'ಸಾಕು ಮಗಾ ಬಾ, ಭಾಳಾ ಕಲ್ತಿ, ಈಗ ಕಲ್ತಿದ್ದೇ ಸಾಕು' ಎಂದು ಮರಳಿ ಮಹಾಗಾಂವ್‌ಗೆ ಕರೆಸಿಕೊಂಡರು. ಬರೀ ಆರನೇ ತರಗತಿಗೆ ಅವರ ವಿದ್ಯಾಭ್ಯಾಸ ಮುಗಿದುಹೋಯಿತು. ಆರನೇ ತರಗತಿಯವರೆಗೆ ಮಾತ್ರ ಶಿಕ್ಷಣವನ್ನು ಪಡೆಯುವುದಕ್ಕೆ ಸಾಧ್ಯವಾದುದಕ್ಕೆ ಅಂದಿನ ಅವರ ಎಳೆಯ ಮನಸ್ಥಿತಿಯ ಕೆಲವೊಂದು ಕಾರಣಗಳನ್ನು ಕೊಡಬಹುದಾಗಿದೆ:

ಮೊದಲನೆಯ ಕಾರಣ, ನಿಜಾಮ ಸರಕಾರದ ದೌರ್ಜನ್ಯ ಭರಿತ ಆಡಳಿತ. ಸರಕಾರ ನಡೆಸುತ್ತಿದ್ದ ಮುಗ್ಧ ಜನತೆಯ ಮೇಲಿನ ದರ್ಪ, ದೌರ್ಜನ್ಯ, ಕಿರುಕುಳ ಮತ್ತು ಅವರ ಮೇಲೆ ಹೊರಿಸಲಾದ ಕಟ್ಟುಪಾಡುಗಳು– ಇವೆಲ್ಲವನ್ನು ನಿಕಟದಲ್ಲಿ ಗಮನಿಸುತ್ತಿದ್ದ ಚಂದ್ರಶೇಖರ, ನಿರುಪದ್ರವಿ, ನಿರಪರಾಧಿ ಜನತೆಯ ಮೇಲಾಗುತ್ತಿದ್ದ ನಿರಂತರ ಶೋಷಣೆಯನ್ನು ನೀಗಿಸುವ ನಿಟ್ಟಿನಲ್ಲಿ ಹೋರಾಟಕ್ಕೆ ಕಟಿಬದ್ಧರಾದುದು.

ಆಗ ಹಿಂದೂ ಮಹಾಸಭಾ ಮತ್ತು ಆರ್ಯಸಮಾಜದ ಕಾರ್ಯಚಟುವಟಿಕೆಗಳು ಚಂದ್ರಶೇಖರರನ್ನು ಆಕರ್ಷಿಸಿದವು. ನಾಯಕತ್ವದ ಗುಣ ರಕ್ತಗತವಾಗಿಯೇ ಬಂದಿದ್ದರಿಂದ, ಗುಲಬರ್ಗಾದಲ್ಲಿ ಶ್ರೀ ಕಲ್ಯಾಣಪ್ಪ ಸಜ್ಜನಶೆಟ್ಟಿಯವರು ಅಧ್ಯಕ್ಷರಾಗಿದ್ದ ತರುಣ ಸಂಘಕ್ಕೆ ಸೇರಿ ಧರ್ಮ ಸಂಸ್ಕೃತಿಯ ಜತೆಗೆ ಜನತೆಯ ಹಿತರಕ್ಷಣೆಗಾಗಿ ದುಡಿದು, ಸಾಮಾಜಿಕ ಕಾರ್ಯಗಳಲ್ಲಿ ಪ್ರವೃತ್ತರಾಗುವ ಆಕರ್ಷಣೆ ಒದಗಿಬಂದಿತು. ಇದು ಎರಡನೆಯ ಕಾರಣ. ಹೀಗಾಗಿ, ಅನ್ಯ ಕಾರ್ಯ ಚಟುವಟಿಕೆಗಳತ್ತ ಮನಸ್ಸು ಹರಿದು, ವಿದ್ಯೆಯ ಕಡೆಗೆ ಹೆಚ್ಚು ಗಮನಕೊಡುವ ಅಥವಾ ಆಸಕ್ತಿ ತಾಳುವ ಸನ್ನಿವೇಶ ಒದಗಲಿಲ್ಲ.

ಶಾಲೆ ತೊರೆದ ಬಳಿಕ ಸಮಾನ ಮನಸ್ಕ ಗೆಳೆಯರ ಗುಂಪುಕಟ್ಟಿಕೊಂಡು ಹೋರಾಟ ನಡೆಸುವ ಮನಸ್ಸು ಮಾಡಿದರು ಚಂದ್ರಶೇಖರರು. ನಿಜಾಮನ ಅಧಿಕಾರಿಗಳ ವಿರುದ್ಧ, ಅಂದರೆ ಮುಖ್ಯವಾಗಿ ರಜಾಕಾರರ ವಿರುದ್ಧದ ಹೋರಾಟದ ಕಥೆ ಇದು.

ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟ ಗುಲಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಉರ್ದು ಭಾಷೆಯದೇ ಮೇಲುಗೈಯಾಗಿ, ಶಿಕ್ಷಣವೆಲ್ಲ ಉರ್ದು ಭಾಷೆಯಲ್ಲಿಯೇ ಸಾಗುತ್ತಿದ್ದ ದಿನಗಳವು. ಕನ್ನಡ ಭಾಷೆ, ವಚನ-ಗಾಯನ, ಪುರಾಣ-ಪ್ರವಚನಗಳಿಗೆ ಮಾತ್ರ ಸೀಮಿತವಾಗಿರುತ್ತಿದ್ದ ಕಾಲದಲ್ಲಿ, ಮಾತೃಭಾಷೆ ಕನ್ನಡವಾಗಿದ್ದವರು ಮನೆಯಲ್ಲಷ್ಟೇ ಬಳಸುತ್ತಿದ್ದುದು ವಾಡಿಕೆಯಾಗಿತ್ತು. ಚಂದ್ರಶೇಖರರು, ಎರಡೂ ಭಾಷೆಗಳಲ್ಲಿ ಪ್ರಭುತ್ವ ಸಾಧಿಸಿದರು. ಕನ್ನಡ, ಉರ್ದು ಭಾಷೆಗಳಲ್ಲಿನ ರಾಷ್ಟ್ರೀಯ ಭಾವನೆಯ ಸಾಹಿತ್ಯ ಮನನ ಮಾಡಿಕೊಂಡು, ಜೀವನಾನುಭವವನ್ನು ಪಡೆಯುವುದಕ್ಕೆ ರಹದಾರಿಯಾದುದು ಇದೇ ಕಾಲದಲ್ಲಿ.

ವಿದ್ಯಾಭ್ಯಾಸಕ್ಕಾಗಿ ಗುಲಬರ್ಗಾಕ್ಕೆ ತೆರಳಿ ಚಂದ್ರಶೇಖರ ಊರಿಗೆ ಮರಳಿದ ಬಳಿಕ ಆತನ ಜೀವನದ ಗತಿಯೇ ಬದಲಾಗಿ ಮುಂದೆ ಕೆಲವೇ ವರ್ಷಗಳಲ್ಲಿ ಆತ ಹಂತ ಹಂತವಾಗಿ, ಧಾರ್ಮಿಕ ಸಾಮಾಜಿಕ ನ್ಯಾಯ ಮತ್ತು ರಾಜಕೀಯ ಹಕ್ಕು ಬಾಧ್ಯತೆಗಳಿಗಾಗಿ ಹೋರಾಟಕ್ಕೆ ಇಳಿದು ನಿಜಾಮಶಾಯಿಯ ದಬ್ಬಾಳಿಕೆಯ ವಿರುದ್ಧ ಧ್ವನಿಯೆತ್ತಿದ ವಿದ್ಯಮಾನವನ್ನು ಅವಲೋಕಿಸುವಂಥದ್ದು ಅನಿವಾರ್ಯವೆನಿಸುತ್ತದೆ.

## ತರುಣ ಸಂಘ



ಅದಾಗಲೇ ತರುಣ ಸಂಘದ ಸ್ಥಾಪನೆಯಾಗಿತ್ತು. ಅದರ ಅಧ್ಯಕ್ಷರಾಗಿದ್ದ ಕಲ್ಯಾಣಪ್ಪ ಸಜ್ಜನ ಶೆಟ್ಟಿ ಶರಣಗೌಡರು ಮತ್ತು ಶರಣಪ್ಪ ಭೇರಜಿಯವರು ತಮ್ಮ ತರುಣ ಸಂಘಕ್ಕೆ ಅದಾಗಲೇ ತಾರುಣ್ಯಕ್ಕೆ ಕಾಲಿಡುತ್ತಿದ್ದ ಚಂದ್ರಶೇಖರನನ್ನು ಸೇರಿಸಿಕೊಂಡರು. ಅದಮ್ಯ ಉತ್ಸಾಹ, ಚೈತನ್ಯದಿಂದ ಪುಟಿಯುತ್ತಿದ್ದ ಚಂದ್ರಶೇಖರನಿಗೆ ಇದೊಂದು ಮಹತ್ವದ ಮಜಲಾಯಿತು. ತರುಣ ಸಂಘ ಅದೊಂದು ಜನಪ್ರಿಯ ಘಟಕವಾಗಿ ಕಾರ್ಯ

ನಿರ್ವಹಿಸಲು ತೊಡಗಿದ್ದು ಆಗಲೇ. ನಮ್ಮ ಜನ, ಧರ್ಮಗಳನ್ನು ಆತ್ಮಪೂರ್ವಕವಾಗಿ ರಕ್ಷಿಸಿಕೊಳ್ಳುವ ಸಂಕಲ್ಪವನ್ನು ಮಾಡಿದ್ದು, ಸಾರ್ವಜನಿಕ ಸೇವೆಯಾಗಿ ಶಿಸ್ತು, ಸ್ವಚ್ಛತೆಯನ್ನು ಕಾಪಾಡುವ ಪ್ರಯತ್ನ ತರುಣ ಸಂಘದಿಂದ ಪ್ರಾರಂಭವಾದದ್ದೂ ಆಗಲೇ.

## ಮಾತೆಯಿಂದ ಮನೋಬಲ

ಚಂದ್ರಶೇಖರ ಮನೆಗೆ ಮರಳಿದರು. ತಾಯಿ ವೀರಮ್ಮಾಜಿಯವರ ಅಕ್ಕರೆಯ ತೆಕ್ಕೆ ಅವರಿಗೆ ಆಪ್ಯಾಯವಾಯಿತು. ಚಂದ್ರಶೇಖರರಿಗೆ ತಾಯಿ ಅಂದರೆ ಪ್ರಾಣಕ್ಕಿಂತಲೂ ಮಿಗಿಲಾದರು. ನಿತ್ಯವೂ ತಾಯಿಯಿಂದ ನೀತಿಪಠ ಹೇಳಿಸಿಕೊಂಡರು. ಶಿವಾಜಿ, ಚಂದ್ರಶೇಖರ ಆಜಾದ್, ಭಗತ್ ಸಿಂಗ್, ಝಾನ್ಸಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮ ಮೊದಲಾದ ಸ್ವಾತಂತ್ರ್ಯ ಕಲಿಗಳ ಬಗೆಗೆ ಕಥೆಗಳನ್ನು ಹೇಳಿಸಿಕೊಂಡ ಚಂದ್ರಶೇಖರ ಅವರಂತೆಯೇ ಕಡುಗಲಿಗಳಾಗುವ ಕನಸುಕಂಡರು.



ತಾಯಿಯ ಮೂಲಕ ಶಿವಶರಣರ ಆಧ್ಯಾತ್ಮಿಕ ಪಾಠವೂ ಅವ್ಯಾಹತವಾಗಿ ನಡೆಯಿತು. ಚಂದ್ರಶೇಖರರ ಮನೋಬಲ ವೃದ್ಧಿಸಲು ಈ ಆಧ್ಯಾತ್ಮಿಕ ಪಾಠ ಸಹಕರಿಯಾಯಿತು. ತಾಯಿ ಹೇಳಿದ ವೀರವಚನಗಳು ಅವರ ಮನಸ್ಸಿನಲ್ಲಿ ಅನುರಣಿಸಿದವು. ತಾಯಿಯ ಆಶೀರ್ವಾದದ ಹೊರತು ಅವರು ಯಾವ ಕಾಯಕಕ್ಕೂ ಇಳಿಯದಾದರು. ಅವರ ಆತ್ಮೀಯ ಸಹಚರ್ಯ ಚಂದ್ರಶೇಖರರಲ್ಲಿ ವಿಶೇಷ ವಿಚಾರ ಕ್ರಾಂತಿಯನ್ನು ಪ್ರಚೋದಿಸಿತು. ಛತ್ರಪತಿ ಶಿವಾಜಿಗೆ ಜೀಜಾಬಾಯಿ ಹೇಗೋ, ಹಾಗೆ ಚಂದ್ರಶೇಖರರಿಗೆ ವೀರಮ್ಮಾಜಿಯಾದರು.

"ನೀನು ದೊಡ್ಡಂವ ಆಗ್ಲಿಕ್ಕೆ ಹತ್ತಿದ್ಯ ಮಗಾ.. ನಾಕು ಮಂದಿಯೊಳಗ ಹೆಸ್ರುಗಳಿಸುವಂಥ ಕೆಲ್ಸ ಮಾಡ್ಬೇಕಪ್ಪಾ.. ಹಾಂಗಾದಾಗ ನನ್ನ ಜನ್ಮ ಸಾರ್ಥಕ ಆಗ್ತದ ನೋಡು. ಹಾದ್ಯಾಗ ನೀ ಹೊಂಟಿ ಅಂದ್ರ ಭಾಳಾ ಮನುಷ್ಯ ಅಂತ ಎಲ್ಲಾ ನಿನ್ಗೆ ಗುರುತು ಹಿಡೀಬ್ಯಾಕು. ಅಂಥ ಕೆಲ್ಸ ನೀ ಮಾಡ್ಕೋತಾ ಬರಬೇಕು ಕಂದಾ, ತಿಳೀತಲ್ಲ?" ಎಂದು ದಿನಾ ಬೋಧನೆ ಮಾಡುತ್ತಿದ್ದರು ತಾಯಿ.

## ನೇಗಿಲ ಯೋಗಿ

ಊರಿಗೆ ಮರಳಿದ ಚಂದ್ರಶೇಖರರ ಮನಸ್ಸು ರೈತರ ಸಂಕಷ್ಟಗಳಿಗೆ ಮಿಡಿಯತೊಡಗಿತು. ನಾಡಿನಾದ್ಯಂತ ಪಾಳುಬಿದ್ದ ಜನಸಮುದಾಯದ ಮಾನಸದಲ್ಲಿ ಸಾಗುವಳಿ ಮಾಡಿ, ಹಡಿಲು ಬಿದ್ದಿದ್ದ ಬದುಕಿನಲ್ಲಿ ಉತ್ತುಬಿತ್ತು ಹೊಸ ಬೆಳೆತೆಗೆವ ಸಂಕಲ್ಪ ಮಾಡಿದರು.

ಉದ್ದನೆಯ ತೋಳುಗಳು, ವ್ಯಾಯಾಮಪಟುವಿನ ತೊಡೆಗಳು, ಹರವಾದ ಎದೆ, ನೀಳವಾದ ಮೂಗು, ವಿಶಾಲವಾದ ಹಣೆ, ಸೆಟೆದುನಿಲ್ಲುವ ಮೃದ್ವಸ್ಥಿಯ ಕಿವಿ, ಮುಖದ ವರ್ಚಸ್ಸಿಗೆ ಇನ್ನಷ್ಟು ಮೆರುಗು ನೀಡುವ ಗಾರುಗಣ್ಣು, ಹಿಡಿದ ಪಟ್ಟು ಅಡಗಿಸಿಟ್ಟ ಗುಟ್ಟುಬಿಟ್ಟುಕೊಡೆನೆಂದು ಬಿಗಿಯಾಗಿ ಅಪ್ಪಿಕೊಳ್ಳುವ ತುಟಿಗಳು, ಅದರ ಮೇಲೆ ಎಳೆಮುಖಕ್ಕೆ ತಿಳಿನಗೆ ಮೂಡಿಸುವ ಚಿಗುರು ಮೀಸೆ– ಇದು ಅಂದಿನ ಚಂದ್ರಶೇಖರರ ಸ್ವರೂಪ. ಅಂತರಂಗ ಮತ್ತು ಬಹಿರಂಗ ಎರಡರಿಂದಲೂ ಸುಂದರ ಪುರುಷನಾಗಿ ಮೂಡಿಬಂದರು ಚಂದ್ರಶೇಖರರು.

ಹದಿನಾಲ್ಕರ ಹರೆಯದಲ್ಲೇ ಚಂದ್ರಶೇಖರರು ತಂದೆಯ ಆದೇಶದಂತೆ 'ನೇಗಿಲಯೋಗಿಯಾದರು. ಅಣ್ಣ ನಿಜಾಮಾಬಾದ್ ಬ್ಯಾಂಕ್ ಒಂದರಲ್ಲಿ ಆಡಿಟರ್ ಆಗಿ ಕೆಲಸ ಮಾಡಲು ತೊಡಗಿದರು. ಹೈದರಾಬಾದ್ ಸಂಸ್ಥಾನದಲ್ಲಿ ಒಕ್ಕಲುತನದ ಪಾಡು ಹೇಳತೀರದಷ್ಟು ಸಂಕಷ್ಟಮಯವಾಗಿತ್ತು. ದುಡಿಯುವ ರೈತನ ಕಷ್ಟಗಳನ್ನು ಕೇಳಿಸಿಕೊಳ್ಳುವ ವ್ಯವಧಾನ ಸರಕಾರಕ್ಕೆ ಇರಲಿಲ್ಲ. ಅನ್ಯಾಯ ಅತ್ಯಾಚಾರಗಳನ್ನೆಲ್ಲ ನುಂಗಿಕೊಂಡೇ ರೈತ ಬದುಕನ್ನು ನೀಗಿಸಬೇಕಾಗಿತ್ತು.

ಬೇಸಾಯದಲ್ಲಿ ಆಸಕ್ತಿ ತಳೆದ ಪಾಟೀಲರು, ತಮ್ಮ ಹೊಲದಲ್ಲಿಯೇ ಒಕ್ಕಲುತನದ ಹೊಸ ಪದ್ಧತಿಗಳನ್ನು ಯಶಸ್ವಿಯಾಗಿ ಅಳವಡಿಸಿ ಮಿಕ್ಕ ಹಿಡುವಳಿದರರಿಗೆ ನೂತನ ಪದ್ಧತಿಯ ಕುರಿತು ಮಾರ್ಗದರ್ಶನ ಮಾಡುವಂತಾದರು. ಹೀಗೆ ಆರ್ಥಿಕವಾಗಿ ಸಬಲರಾದ ರೈತರು, ಏನೇನೋ ಕಾರಣಗಳಿಂದ ಅಡವು ಮಾಡಲ್ಪಟ್ಟ ತಮ್ಮ ಜಮೀನುಗಳನ್ನು 1934ರ ಮಸಾಲಹತಾ ಬೋರ್ಡ್ ಕಾನೂನು ಪ್ರಕಾರ ಮತ್ತೆ ತಾವು ಪಡೆಯುವಂತಾದರು.

ತನ್ನ ಸ್ನೇಹಿತರಿಗೆಲ್ಲ ಒಕ್ಕಲುತನದ ಮಹತ್ವವನ್ನು ಮನಮುಟ್ಟಿಸಿದ್ದಲ್ಲದೆ, ಸ್ವತಃ ತಾನೇ ಹೊಲದಲ್ಲಿ ಮೈಮುರಿದು ದುಡಿದು ಅವರಿಗೆಲ್ಲ ಮೇಲ್ಪಂಕ್ತಿ ಹಾಕಿ ಉನ್ನತ ಆದರ್ಶ ಮೆರೆದರು ಚಂದ್ರಶೇಖರರು. ಗೆಳೆಯರ ಗುಂಪಿನಲ್ಲಿ ಅತ್ಯುತ್ಸಾಹ, ಹುರುಪು, ಚೈತನ್ಯ ಮೂಡಲಾರಂಭಿಸಿ ಎಲ್ಲರ ಆರ್ಥಿಕ ಸ್ಥಿತಿ ಸುಧಾರಿಸತೊಡಗಿತು.

## ಸಮಾಜ ಕಲ್ಯಾಣ

ಎಂಟು ಶತಮಾನಗಳಿಂದ ಗುಲಾಮಗಿರಿಯಿಂದ ಬೇಸತ್ತ ಜನತೆ ಮೊಗಲ ಆಳರಸರ, ತದನಂತರ ಬ್ರಿಟಿಷ್ ಅಧಿಕಾರ ಸತ್ತೆಯ ಕಾಲ್ತುಳಿತಕ್ಕೆ ಸಿಕ್ಕು ನರಳಿದ್ದು ಇತಿಹಾಸ. ದೇಶಾದ್ಯಂತ ಜನತೆ ಕಾಂಗ್ರೆಸ್ ನೇತೃತ್ವದಲ್ಲಿ ಬಂಡೆದ್ದಿತು. ಇದು ದೇಶದ ಮಾತಾಯಿತು. ಆದರೆ ಇಲ್ಲಿನ ಈ ಜನ ನಿಜಾಮಶಾಯಿಯ ದುರಾಡಳಿತಕ್ಕೆ ಪೀಡಿತರಾದವರು, ನೊಂದವರು, ಬೆಂದವರು, ತಲೆತಲಾಂತರದಿಂದ ನೂರೆಂಟು ಪಟ್ಟು ತಿಂದವರು.

ದಾಸ್ಯ ವಿಮೋಚನೆಗಾಗಿ ಹೋರಾಡಬೇಕೆಂಬ ದೃಢಸಂಕಲ್ಪ ಚಂದ್ರಶೇಕರರಲ್ಲಿ ಆಗ ಸ್ಪಷ್ಟವಾಗಿ ಮೂಡಿರದಿದ್ದರೂ, ಮಹಾಗಾಂವ್‌ನಲ್ಲಿ ಜನರು ನಿತ್ಯ ಅನುಭವಿಸುತ್ತಿದ್ದ ಕಿರುಕುಳ, ನುಂಗಬೇಕಾಗಿದ್ದ ಅವಮಾನ ಮತ್ತು ಸಹಿಸಬೇಕಾಗಿದ್ದ ಅನ್ಯಾಯಗಳ ವಿರುದ್ಧ ಸಂಘಟಿತರಾಗಿ ಹೋರಾಡಬೇಕೆನ್ನುವ ಭಾವನೆ ಅವರಲ್ಲಿ ಸ್ಫುರಿಸತೊಡಗಿದ್ದು ಅಂದಿನ ದಿನಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿತ್ತು.

ಜಾತೀಯ ಸಾಮರಸ್ಯ ಶತಶತಮಾನಗಳಿಂದ ರೂಢಿಗತವಾಗಿ ಬಂದಿದ್ದರೂ ಕೆಲವು ಪುಂಡಪೋಕರಿಗಳ ಉಪಟಳ ಸಾಮಾಜಿಕ ಸಾಮರಸ್ಯವನ್ನು ಕದಡುವ ಹಂತಕ್ಕೆ ತಲುಪುತಿತ್ತು. ದಿನಬೆಳಗಾದರೆ ಒಂದಿಲ್ಲೊಂದು ಅಪ್ರಿಯ ಘಟನೆಗಳು ನಡೆಯುತ್ತಿದ್ದರೂ ಅದಕ್ಕೆ ಉತ್ತರವಾಗಿ ನಡೆಯುತ್ತಿದ್ದ ಪ್ರತಿಭಟನೆಗಳು ಅಪರೂಪವಾಗಿದ್ದವು. ಸ್ವಾಭಿಮಾನ ಸಿಡಿದೆದ್ದು ಏಟಿಗೆ ಏಟು ನೀಡುವ ಪ್ರವೃತ್ತಿ ಅಪರೂಪವಾಗಿ, ಕಿಡಿಗೇಡಿಗಳು ಅದನ್ನು ತಪ್ಪಾಗಿ ಅರ್ಥೈಸಿಕೊಳ್ಳುವ ಪ್ರಮೇಯ ಒದಗುತ್ತಿತ್ತು. ಇಂತಹ ಒಂದು ಸಂಧಿ ಕಾಲದಲ್ಲಿ ಚಂದ್ರಶೇಖರರ ಧೀಶಕ್ತಿ ಹೊರಹೊಮ್ಮಲು ಪ್ರಾರಂಭಿಸಿತು ಎಂದರೂ ತಪ್ಪಾಗದು.

ಅಂತಹ ಅವಸ್ಥೆಯಲ್ಲಿ, ಊರಲ್ಲಿ ತಾಂಡವವಾಡುತ್ತಿದ್ದ ಅಸ್ಪೃಶ್ಯತೆ, ವೇಶ್ಯಾವಾಟಿಕೆ, ಪುಂಡಾಟಿಕೆಗಳು ಚಂದ್ರಶೇಖರರ ಎದುರು ಸವಾಲಾಗಿ ನಿಂತವು. ನಿಜಾಮ ಸರಕಾರದ ದುರಾಡಳಿತದ ಫಲವಾಗಿ ದೊಂಬಿ ಗಲಭೆಗಳು ಅವ್ಯಾಹತವಾಗಿ ನಡೆಯುತ್ತಿದ್ದವು. ಪರಿಣಾಮವಾಗಿ ಜಾತ್ರೆ ಸಂತೆಗಳು ಸುಗಮವಾಗಿ ನಡೆಯಿತ್ತಿರಲಿಲ್ಲ. ಹೆಂಗೆಳೆಯರು ಒಂಟಿಯಾಗಿ ಯಾವುದೇ ತೊರೆಯ ಕಡೆಯಾಗಲೀ, ಊರ ಹೆಬ್ಬಾಗಿಲ ಕಡೆಯಾಗಲೀ ಹೋಗುವಂತಿರಲಿಲ್ಲ. ಜನರ ಸಹನೆಯ ಕಟ್ಟೆಯೊಡೆಯಿತು. ಹಿಂದಿನವರಂತೆ ತಾವು ಬದುಕಬಾರದು ಎಂದು ಚಂದ್ರಶೇಖರರು ಮತ್ತು ಅವರ ಸ್ನೇಹಿತರು ಹೊಸ ಬದುಕಿಗೆ ನಾಂದಿ ಹಾಡಬೇಕೆಂದು ನಿರ್ಧರಿಸಿದರು. ಚಂದ್ರಶೇಖರರು ತಮ್ಮ ಜನರ ಕಲ್ಯಾಣಕ್ಕಾಗಿ ಕಟಿಬದ್ಧರಾದರು.

## ಸಕಾಲಕ್ಕೆ ಸಪ್ತಪದಿ

ಮೊಹರಂ ಹಬ್ಬ ಆ ಸಲವೂ ಸದ್ದುಗದ್ದಲವಿಲ್ಲದೆ ಬಂದೇಬಿಟ್ಟಿತು. ಸ್ವಲ್ಪಗಲಾಟೆ ಗೌಜು ನಡೆದ ಪ್ರಯುಕ್ತ ಸಬ್‌ಇನ್‌ಸ್ಪೆಕ್ಟರ್ ಐಸಾಕ್ ಹುಸೇನರು ಗುಂಪನ್ನು ಚದುರಿಸಿ ಕೆಲವರನ್ನು ಬಂಧಿಸಿದ್ದಲ್ಲದೆ, ಪೋಲೀಸ್ ಕಸ್ಟಡಿಯಲ್ಲಿ ಕೂಡಿಹಾಕಿದರು. ಅವರಿಗೆ ತಿಳಿಹೇಳಿದರು. ಹಿಂದೂ ಮುಸ್ಲಿಮರ ಸೌಹಾರ್ದತೆಗೆ

ಹೆಸರಾದ ಮಹಾಗಾಂವ್‌ನಂಥ ಹಳ್ಳಿಯಲ್ಲಿ ಭಾವೈಕ್ಯತೆಯನ್ನು ಸಾಧಿಸಿದ್ದರು. ಮಗನ ಸಂಘಟನಾ ಚಟುವಟಿಕೆಗಳಿಂದ ಈ ಬಗೆಯ ಭಾವೈಕ್ಯಕ್ಕೆ ಕುಂದು ಬರಬಹುದೆಂದು ಭಾವಿಸಿದ ಸಂಗಶೆಟ್ಟರು ಮಗನ ಗಮನವನ್ನು ಬೇರೆಡೆಗೆ ಒಯ್ಯುವ ಸಲುವಾಗಿ ಮದುವೆ ಮಾಡಿಸುವ ಪಣತೊಟ್ಟರು. ಸಾಂಸಾರಿಕ ಜೀವನಕ್ಕೆ ತೊಡಗಿಸಿದರೆ, ಮಗನ ಈ ಹುಡುಗಾಟವೆಲ್ಲ ನಿಂತು ಜವಾಬ್ದಾರಿ ತಲೆಯ ಮೇಲೆ ಬೀಳುತ್ತದೆ ಎಂಬ ಅಭಿಪ್ರಾಯ ಅವರದ್ದಾಗಿತ್ತು. ತಮ್ಮ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದ ಚಿಟಗುಪ್ಪ ವೀರಭದ್ರಪ್ಪನವರ ಮಗಳು ಲಲಿತಾಬಾಯಿಯ ಜತೆಗೆ ಲಗ್ನ ಮಾಡಿಸುವ ಸನ್ನಾಹ ಮಾಡಿದರು. ಈ ಲಗ್ನಕ್ಕೆ ಹಿನ್ನೆಲೆಯಾಗಿ ನಡೆದ ಘಟನೆಯೊಂದು ಇಲ್ಲಿ ಅಪ್ರಸ್ತುತವೆನಿಸಲಾರದು. ಶ್ರೀಮತಿ ಲಲಿತಾಬಾಯಿಯವರೇ ಈ ಸ್ವಾರಸ್ಯಕರ ಸನ್ನಿವೇಶವನ್ನು ನಿರೂಪಿಸಿರುತ್ತಾರೆ:



–" ನನ್ನ ಮದುವೆಗಿಂತ ಮೊದಲು ನಮ್ಮ ಮುತ್ಯ ಅವರು ಒಂದು ಎತ್ತಿನ ಮ್ಯಾಲೆ ಹಣ ಹೇರಿಸಿಕೊಂಡು ಗುಲಬರ್ಗಾಕ್ಕೆ ಬಂದಿದ್ರು. ಗುಲಬರ್ಗಾದಲ್ಲಿ ವ್ಯಪರ ವಹಿವಾಟು ಮುಗಿಸಿಕೊಂಡು ಮತ್ತೆ ಚಿಟಗುಪ್ಪಾಕ್ಕೆ ಹೋಗ್‌ತಿದ್ರು. ಚಿಟಗುಪ್ಪಾ ನಮ್ ತಾಯಿ ಮನೆ. ಅವ್ರು ಹೀಂಗ್ ಮಾಡಿ ಎತ್ತಿನ ಮ್ಯಾಲೆ ಹಣ ಹೇರಿ ಕಮಲಾಪುರಕ್ಕೆ ಬಂದಾಗ, ಎತ್ತು ನಿಂದಿರ್ಸಿ ಹೊರಗೆ ಹೋದರು. ಎತ್ತು ಬಿಚ್‌ಕೊ ಡು ಮಹಾಗಾಂವ್‌ಕ್ಕೆ ಬಂತು. ಮಹಾಗಾಂವ್‌ನ ನಮ್ ಮಾವನವ್ರು ಎತ್ತನ್ನು ಕಟ್ಟಿಹಾಕಿದ್ರು. ಹಣ ಎಲ್ಲಾ ಹಾಂಗೇ ಇತ್ತು. ರೊಟ್ಟಿ ಪಾವಡೆ ಎಲ್ಲ ಹೋಗಿತ್ತು. ನಮ್ ಮುತ್ಯ ಎತ್ತು ಹುಡ್ಕೊಂಡು ಬಂದ್ರು. 'ನಿಮ್ ಹಣ ಇಲ್ಲೇ ಇದೆ. ಕೊಡ್ತೀವಿ' ಅಂದ್ರು.


"ಆ ಮಾತಿಗೆ ಒಂದು ಹೆಣ್ಣು ನಿಮ್ ಮಗನಿಗಾದ್ರೂ ತಗೋರಿ, ಇಲ್ಲ ಒಂದು ಹೆಣ್ಣು ನಮ್ ಮನೀಗಾದ್ರೂ ಕೊಡ್ರಿ ಅಂದ್ರು. ಹೀಂಗ್ ಮಾತಾಡಿ ನನಗೆ ಮಹಾಗಾಂವ್‌ಗೆ ಕೊಟ್ಟಿದ್ದು

ಚಂದ್ರಶೇಖರರ ಭಾವೀ ಮಾವ ಚಂದ್ರಶೇಖರರ ಶಕ್ತಿ ಸಾಮರ್ಥ್ಯ, ವ್ಯಕ್ತಿತ್ವಕ್ಕೆ ಮಾರುಹೋದರು. ಸಂಬಂಧಕ್ಕೆ ಒಪ್ಪಿದ್ದಲ್ಲದೇ, ಆರು ದಿನಗಳ ಪರ್ಯಂತ ಚಿಟಗುಪ್ಪದಲ್ಲಿ ಅತ್ಯಂತ ವಿಜೃಂಭಣೆಯಿಂದ ಮದುವೆಯನ್ನು ನೆರವೇರಿಸಿದರು.

## ಸಾಮಾಜಿಕ ಚಿಂತನೆ

ಹೆತ್ತವರು ಗ್ರಹಿಸಿದಂತೆ, ಮದುವೆಯಾದ ಬಳಿಕವೂ ಚಂದ್ರಶೇಖರರಲ್ಲಿ ಹೆಚ್ಚಿನ ಬದಲಾವಣೆಯಾದಂತೆ ಕಂಡುಬರಲಿಲ್ಲ. ವೈಯಕ್ತಿಕ ಜೀವನಕ್ಕಿಂತ ಅವರಿಗೆ ಸಾಮಾಜಿಕ ಚಿಂತನೆಯ ಕಡೆಗೇ ಹೆಚ್ಚಿನ ಒಲವು ಆಸಕ್ತಿಗಳನ್ನು ಕಂಡು ಚಂದ್ರಶೇಖರರ ಹೆತ್ತವರು ಮರುಗಿದರು. ಬ್ರಿಟಿಷ್ ಸರಕಾರದ ದೌರ್ಜನ್ಯ ದಬ್ಬಾಳಿಕೆ ಒಂದೆಡೆಯಾದರೆ, ನಿಜಾಮ್ ಸರಕಾರದ ಅನ್ಯಾಯ ಅತ್ಯಾಚಾರಗಳಿಂದ ಜನರು ನಲುಗಿ ಹೋಗುವಂತಿದ್ದರು – ಸಾಮಾಜಿಕ ಸಮಸ್ಯೆಯಾಗಿ ಪರಿಣಮಿಸಿದ ಈ ದುರಿತವನ್ನೂ ಚಂದ್ರಶೇಖರರು ಸೂಕ್ಷ್ಮವಾಗಿ ಗಮನಿಸುತ್ತಿದ್ದರು.

1930ನೇ ಇಸವಿ. ಗಾಂಧೀಜಿಯವರ ಐತಿಹಾಸಿಕ ಉಪ್ಪಿನ ಸತ್ಯಾಗ್ರಹದ ದಂಡೀಯಾತ್ರೆ ಭಾರತದ ಹಳ್ಳಿಹಳಿಯಲ್ಲೂ ಹೊಸ ರಾಷ್ಟ್ರೀಯ ಭಾವನೆಯನ್ನು



**ಗಾಂಧೀಜಿಯವರು ಕೈಗೊಂಡಿದ್ದ ಉಪ್ಪಿನ ಸತ್ಯಾಗ್ರಹ**

ಸ್ಫುರಿಸಿದ್ದ ಕಾಲ. ಗಾಂಧೀಜಿಯವರ ಆದರ್ಶ ಚಂದ್ರಶೇಖರರಿಗೆ ಹೊಸ ಸ್ಫೂರ್ತಿ ನೀಡಿತು. ಇದೇ ಕಾಲಕ್ಕೆ ಊರಿನ ಶರಣಯ್ಯ ಸ್ವಾಮಿಗಳೆಂಬ ದೇಶಾಭಿಮಾನಿ ಅದೇ ತಾನೇ ಗಾಂಧೀಜಿಯವರು ಕೈಗೊಂಡಿದ್ದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಮಹಾಗಾಂವ್‌ಗೆ ಹಿಂದಿರುಗಿದ್ದರು.



ಅದಾಗಲೇ 'ಬಸವ ಭೂಮಿ' ಮತ್ತು 'ಕಲ್ಯಾಣ ವಾಣಿ' ಎಂಬ ವೀರರಸ ಪೂರಿತ ಕೃತಿಗಳಿಂದ 'ಶರಣ ಕವಿ'ಗಳೆಂದೇ ಪ್ರಖ್ಯಾತರಾಗಿದ್ದ ಅವರು, ಮಹಾಗಾವ್‌ನ ಈ ತರುಣ ಗುಂಪಿನಲ್ಲಿ ಗುರುಸಮಾನರಾಗಿ, ಚೈತನ್ಯವನ್ನೂ ದೇಶಾಭಿಮಾನವನ್ನೂ ಬಿತ್ತತೊಡಗಿದ್ದರು.

**ಹರ್ಡೇಕರ್ ಮಂಜಪ್ಪನವರು**

ಗುಲಬರ್ಗಾದ 'ಕಲ್ಯಾಣ ಕರ್ನಾಟಕ' ಮುದ್ರಣಾಲಯದಲ್ಲಿ ಪಾಲುದಾರರಾಗಿದ್ದ ಅವರು ಹರ್ಡೇಕರ್ ಮಂಜಪ್ಪನವರನ್ನು ಆಗಿಂದಾಗ್ಯೆ ಸಂಪರ್ಕಿಸಿ ಭೇಟಿಯಾಗಿ, ಒಟ್ಟಂದದಲ್ಲಿ ಜನಜಾಗೃತಿಯ ಮಹೋನ್ನತ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

## ತರುಣ ಸಂಘದ ಶುಭೋದಯ

ಯುಗಾದಿಯ ಹಬ್ಬಕ್ಕಾಗಿ ಊರಿಗೆ ಬಂದಿದ್ದ ಶರಣಯ್ಯ ಸ್ವಾಮಿಗಳು ಮಹಾಗಾಂವ್‌ಗೆ ಬಂದಿದ್ದಾಗ, ಊರಲ್ಲಿ 'ತರುಣ ಸಂಘ'ವೊಂದನ್ನು ಹುಟ್ಟುಹಾಕುವ ಪ್ರಸ್ತಾಪ ಮಾಡಿದರು. ಅದೇ ಸುಮೂರ್ತದಲ್ಲಿ ತರುಣ ಸಂಘದ ಶುಭಾರಂಭವನ್ನು ನೆರವೇರಿಸಿಬಿಟ್ಟರು. ಅಷ್ಟೇ ಅಲ್ಲ ಆ ತರುಣ ಸಂಘಕ್ಕೆ ಪಾದರಸದಂತೆ ಓಡಾಡುವ ಚೈತನ್ಯದ ಚಿಲುಮೆ ಚಂದ್ರಶೇಖರರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಿದರು.



ಕಾರ್ಯದರ್ಶಿಗಳಾಗಿ ಗುರುಲಿಂಗಪ್ಪ ಹತ್ತಿಯವರು ಆಯ್ಕೆಯಾದರು. ಸಂಗಪ್ಪ ರಟಕಲ್, ಶರಣಪ್ಪ ತಡಕಲ್, ವಿರೂಪಾಕ್ಷಪ್ಪ ವೀರಶೆಟ್ಟಿ, ಸಿದ್ಧರಾಮಪ್ಪ ಹತ್ತಿ, ಗುರುಬಸಪ್ಪ ಜಂಶೆಟ್ಟಿ, ದ್ಯಾವಪ್ಪ ಮೊದಲಾದವರು ಸದಸ್ಯರಾದರು. 'ತರುಣ ಸಂಘ'ದ ಧ್ಯೇಯ ಧೋರಣೆಗಳು, ಕಾರ್ಯ ಚಟುವಟಿಕೆಗಳು ಇವೆಲ್ಲವುಗಳ ಒಂದು ಸಮಗ್ರ ರೂಪುರೇಷೆಯನ್ನು ಸದಸ್ಯರ ಮುಂದಿಟ್ಟು ಶರಣ ಕವಿಗಳು ಕಳ್ಳೀಮಠದ ಮೊದಲ ಸಮಾವೇಶದಲ್ಲಿ ತರುಣರಲ್ಲಿ ಅತೀವ ಕಳಕಳಿಯನ್ನೂ ಪ್ರೋತ್ಸಾಹವನ್ನು ಚೈತನ್ಯವನ್ನೂ ತುಂಬಿದರು. ತರುಣರೆಲ್ಲರ ಕೈಗೆ ಶಕ್ತಿ ಬಂತು. ಚೈತನ್ಯ ಮೂಡಿತು. ಅವರ ಧ್ವನಿಗಳಿಗೆ, ಭಾವನೆಗಳಿಗೆ ಮೂರ್ತರೂಪ ಬಂದಿತು. ಅವರೆಲ್ಲ ದೇಶಾಭಿಮಾನದಿಂದ ಬೀಗಿದರು. ಒಕ್ಕೊರಲಿನಿಂದ 'ಭಾರತ್ ಮಾತಾ ಕೀ ಜೈ ' ಎಂದರು.

ಚಂದ್ರಶೇಖರ ಪಾಟೀಲರಿಗೂ ಜಯಘೋಷ ಕೂಗಿದರು. ತರುಣ ಸಂಘದ ಸದಸ್ಯರಿಗೆಲ್ಲ ಈಗ ಚಂದ್ರಣ್ಣನೇ ಆರಾಧ್ಯದೈವ, ಸಮರ್ಥ ನಾಯಕ, ಅಹರ್ನಿಶಿ ಮಾರ್ಗದರ್ಶನ ನೀಡಬಲ್ಲ ಸಂಘಟಕ. ಚಂದ್ರಶೇಖರರಿಗೆ ಶರಣಯ್ಯ ಸ್ವಾಮಿಗಳ ಮಾರ್ಗದರ್ಶನ, ಸಲಹೆ ಸಹಕಾರಗಳ ಬಲ ಒಂದೆಡೆಯಾದರೆ, ರುದ್ರಾರಾಧ್ಯರ ಅನುಗ್ರಹ ಆಶೀರ್ವಾದ ಹರಕೆಗಳು ಇನ್ನೊಂದೆಡೆ. ಚಂದ್ರಶೇಖರರ ಕನಸು ಕಲ್ಪನೆಗಳು ಸಾಕಾರವಾಗುವ ಪಕ್ವವಾದ ಕಾಲ ಸನ್ನಿಹಿತವಾಗತೊಡಗಿದ್ದು ಆಗಲೇ.

## ಭಗತ್‌ಸಿಂಗ್‌ರ ಆದರ್ಶ

ಅದೇ ವರ್ಷ, ಅಂದರೆ, ಕ್ರಿ.ಶ. 1935ರ ಮಾತು.

ಗುಲಬರ್ಗಾ ಜಿಲ್ಲೆಯ ಮಹಾಗಾಂವ್ ಹಳ್ಳಿಯಲ್ಲಿ ಒಂದು ಸುಂದರ ಮುಸ್ಸಂಜೆ. ಅಲ್ಲಿನ ಶಿವಲಿಂಗ ಮಂಟಪದ ಹಿಂದಿನ ಹುಣಸೆಮರದ ಕಟ್ಟೆಯ ಮೇಲೆ ಹತ್ತಾರು ತರುಣರು ಸೇರಿದ್ದಾರೆ. ಆ ಸನ್ನಿವೇಶದ ಚಿತ್ರ ಹೀಗಿತ್ತು:



ಅವರ ನಡುವೆ ಒಂದು ಕಂದೀಲು. ತರುಣರ ಯೌವನ ತುಂಬಿ ತುಳುಕಿದತೆ ಕಂದೀಲಿನ ಜ್ವಾಲೆಯೂ ನಲಿಯುತ್ತ ಸ್ಫುರಿಸುತ್ತಿತ್ತು. ಅವರೆಲ್ಲ ದಿವ್ಯ ಚೈತನ್ಯ ಮೂರ್ತಿಗಳಾಗಿದ್ದರು. ಅವರೆಲ್ಲರ ನಡುವೆ ಕುಳಿತ ಎತ್ತರ ಕಾಯದ ಯುವಕ ಆ ಧಾಳಾಗಿ ಉರಿಯುತ್ತಿದ್ದ ಕಂದೀಲಿನ ಬೆಳಕಿನಲ್ಲಿ ಉತ್ಸವ ಮೂರ್ತಿಯಂತೆ ಬೆಳಗುತ್ತಿದ್ದ. ಆ ತರುಣ ಕುಳಿತಲ್ಲಿಂದ ಎದ್ದು ನಿಂತ. ತನ್ನ ಸುತ್ತಲೂ ನೆರೆದಿರತಕ್ಕಂಥ ತರುಣ ಮಿತ್ರರನ್ನು ಸಂಬೋಧಿಸಿ ಹೀಗೆಂದ:

"ಸ್ನೇಹಿತ್ರೇ... ದೇಶಪ್ರೇಮಿ ಭಗತ್‌ಸಿಂಗ್‌ರ ಹೆಸ್ರನ್ನ ನೀವೆಲ್ಲ
ಕೇಳೀರಿ... ಅಪ್ಪಟ ದೇಶ ಪ್ರೇಮಿಯಾಗಿದ್ದ ಅಂವ ಒಂದ್ಸಲ
ಒಂದು ಸಂಘ ಸ್ಥಾಪನೆ ಮಾಡಿದ್ದ... ಆ ಸಂಘಕ್ಕೆ ಮೆಂಬರ್
ಆಗೋಕ್ಕೆ ಒಂದು ಶರ್ತ ಹಾಕಿದ್ದ ಅಂವ. ಏನ್ ಶರ್ತ
ಹಾಕಿದ್ದ ಅಂತ ಗೊತ್ತಿದೆಯೇನು ನಿಮ್ಗೆಲ್ಲ?"

ತರುಣರೆಲ್ಲ ಒಕ್ಕೊರಲಿನಿಂದ "ಗೊತ್ತಿಲ್ಲ" "ಗೊತ್ತಿಲ್ಲ" –ಅಂತ ಅಂದ್ರು."

"ಆ ಸಂಘಕ್ಕೆ ಮೆಂಬರ್ ಆಗೋರು ಈ ಉರಿಯೋ
ದೀಪದ ಮೇಲೆ ಬೆರಳಿಡಬೇಕಾಗಿತ್ತು. ಪ್ರಮಾಣವಚನ
ಸ್ವೀಕರಿಸ್ಬೇಕಾಗಿತ್ತು. ಹಿಂಗ ಬೆಟ್ಟು ಸುಟ್ರೂ ಪಿಟ್ಟೆನ್ನೋ
ಹಂಗಿರ್ಲಿಲ್ಲ. ಆವಾಗ ಮಾತ್ರ ಅವ್ನ ಗುಂಪಿನಾಗ ಶಾಮೀಲು
ಆಗ್ಬಹುದಿತ್ತು. ಇದೆಲ್ಲಾ ಯಾಕ? ನಮ್ಮ ಭಾವನೆ ಶುದ್ಧ
ಇದೆ ಅಂತ ತೋರಿಸ್ಕೊಳ್ಳೋದಕ್ಕ. ಅದಕ್ಕ ಈವೊತ್ತು ನಮ್
ಈ ತರುಣ ಸಂಘಕ್ಕೆ ಒಂದ್ ನಿಶ್ಚಿತ ರೂಪ ಕೊಡ್ಲೇಬೇಕು.
ಯಾರ್ಯಾರು ತಯಾರಿದ್ದೀರಿ ಹೇಳ್ಬೇಕು..."

"ನಾವೆಲ್ಲಾ ತಯಾರಿದ್ದೀವಿ"

–ಒಕ್ಕೊರಲಿನಿಂದ ಮತ್ತೊಮ್ಮೆ ಧ್ವನಿ ಮೊಳಗಿತು.

## ರಕ್ತದಲ್ಲಿ ಸಹಿ

" ಊಹೂಂ... ಬರೀ ತಯಾರಿದ್ದೀವಿ ಅಂದ್ರೆ ನಾನು ಒಪ್ಪೋದಿಲ್ಲ.... ತಮ್ ತಮ್ ರಕ್ತ ತೆಗೆದು ತಮ್ ತಮ್ ಹೆಸ್ರು ಈ ಕಾಗದದ್ ಮ್ಯಾಲೆ ಬರೀಬೇಕು... ಹೀಂಗ.."

–ಎಂದು ಆ ತರುಣ ನೇತಾರ ಒಂದು ಚಾಕುವನ್ನು ಎತ್ತಿಕೊಂಡ. ತನ್ನ ಎಡ ಮುಂಗೈಯ ಮೇಲೆ ಗೀರು ಎಳೆದು ನೆತ್ತರು ಹರಿಯುವಂತೆ ಮಾಡಿ, ಅದೇ ಚಾಕುವಿಗೆ ತಗುಲಿದ ನೆತ್ತರಿನಿಂದ ಕಾಗದದ ಹಾಳೆಯ ಮೇಲೆ ಸಹಿ ಮಾಡಿ ಎಲ್ಲರಿಗೂ ತೋರಿಸಿದ. ಅಲ್ಲಿ ನೆರೆದ ಎಲ್ಲ ತರುಣರು ತಮ್ಮ ನೇತಾರನ ಧೀರೋದ್ಧಾತ ಸಾಹಸವನ್ನು ಕಂಡು ನಿಬ್ಬೆರಗಾದರು. ಸ್ಫೂರ್ತಿ ಪಡೆದರು. ಒಬ್ಬೊಬ್ಬರೂ ಆತನ ಕೈಯಿಂದ ಚಾಕುವನ್ನು ಸರದಿ ಪ್ರಕಾರ ಪಡೆದು ತಮ್ಮ ತಮ್ಮ ಎಡ ಮುಂಗೈಯಿಂದ ರಕ್ತ ತೆಗೆದು ಕಾಗದದ ಹಾಳೆಯ ಮೇಲೆ ಸಹಿ ಹಾಕಿದರು. ತಮ್ಮ ನೇತಾರನಿಗೆ ಅಚಲ ನಿಷ್ಠೆ ಪ್ರದರ್ಶಿಸಿದರು.

"ಭಾರತ್ ಮಾತಾಕೀ ಜೈ..."

"ವಂದೇ ಮಾತರಂ..."

ಮುಂತಾದ ಜಯಘೋಷಗಳು ಮುಗಿಲು ಮುಟ್ಟಿದವು.

ಮಹಾಗಾಂವ್‌ನ ಆ ಪುಟ್ಟ ಹಳ್ಳಿಯ ಮೂಲೆಯಲ್ಲಿ ಸ್ವಾತಂತ್ರ್ಯದ ಕಿಡಿ ಉರಿಯಲು ನಾಂದಿ ಹಾಡಿದ ಘಟನೆ ಇದು. ಇದು ನಡೆದದ್ದು ಕ್ರಿ.ಶ. 1935ರಲ್ಲಿ. ಮಹಾ ದೇಶ ಪ್ರೇಮಿ ಹುತಾತ್ಮ ಭಗತ್‌ಸಿಂಗ್‌ರ ಆದರ್ಶವನ್ನು ಮುಂದಿಟ್ಟುಕೊಂಡು ಹಳ್ಳಿಯ ಹತ್ತಾರು ಮಂದಿ ದೇಶ ಪ್ರೇಮಿ ಯುವಕರನ್ನು ಸೇರಿಸಿ ದೇಶಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧರಿದ್ದೇವೆ ಎಂದು ರಕ್ತಸಿಕ್ತ ಸಹಿಯಿಂದ ಪ್ರಮಾಣ ವಚನವನ್ನು ಸ್ವೀಕರಿಸಿದವರು ಬೇರಾರು ಅಲ್ಲ ಮಹಾಗಾಂವ್‌ನ ಮಹಾಚೇತನ ಚಂದ್ರಶೇಖರ

ಪಾಟೀಲರು; ಸ್ವಾತಂತ್ರ್ಯ, ಸಹೋದರತೆ ಮತ್ತು ಸಹಬಾಳ್ವೆಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟ ನಿಸ್ವಾರ್ಥ ನೇತಾರ, ದೀನ ದಲಿತರ ಬಂಧು, ಅಪ್ಪಟ ದೇಶಾಭಿಮಾನಿ, ಸ್ವಾತಂತ್ರ್ಯವೀರ ಚಂದ್ರಶೇಖರ ಪಾಟೀಲರು.

## "ಶರೀರಮಾದ್ಯಂ..."

ಚಂದ್ರಶೇಖರರು ಇದೇ ಸಕಾಲವೆಂದು ಗುಲಬರ್ಗಾದಿಂದ ವ್ಯಾಯಾಮ ಪಟು ಭೀಮಶ್ಯಾನನ್ನು ಮಹಾಗಾಂವ್‌ಗೆ ಕರೆಸಿಕೊಂಡರು. "ಶರೀರಮಾಧ್ಯಂ ಖಲು ಧರ್ಮ ಸಾಧನಂ" ಎಂಬಂತೆ ಆರೋಗ್ಯಪೂರ್ಣ ಶರೀರಕಲ್ಪವಿದ್ದಲ್ಲಿ ಎಂತಹ ಸಾಧನೆಗೂ ಸೂಕ್ತ ಅವಕಾಶ ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಂಡರು. ಚಂದ್ರಶೇಖರರು ಕಾರ್ಯಪ್ರವೃತ್ತರಾದರು. ತಮ್ಮ ಸಂಘದ ಸದಸ್ಯರ ದೇಹದಾರ್ಢ್ಯತೆಯನ್ನು ಈ ಮೂಲಕ ಬೆಳೆಸಿ ಅದೊಂದು ಸುದೃಢ ಯೋಧಗಣವನ್ನು ನಿರ್ಮಿಸಬೇಕೆಂಬುದು ಅವರ ಇಚ್ಛೆಯಾಗಿದ್ದಿತು. ವ್ಯಾಯಾಮ ಅಭ್ಯಾಸ, ಸಾಮು, ದಂಡ, ಬೈಠಕ್ ಮತ್ತು ಕುಸ್ತಿಯ ಪಟ್ಟುಗಳನ್ನು ಹೊತ್ತು ಅರಳುವ ಮುನ್ನ ಅಂತೆಯೇ ಹೊತ್ತು ಕಂತುವ ಮುನ್ನ ಕಲಿಯಲಾರಂಭಿಸಿದರು. ಲಾಠಿ ತಲವಾರು ಮುಂತಾದವುಗಳನ್ನು ತಿರುಗಿಸುವುದನ್ನೂ, ಎದುರಾಳಿಯ ಪೆಟ್ಟುಗಳನ್ನು ತಪ್ಪಿಸಿಕೊಂಡು ಅವರ ಮ,ಎಲೆ ಏರಿ ಹೋಗುವುದನ್ನೂ ಸ್ವತಃ ಕಲಿತರಲ್ಲದೆ, ತಮ್ಮತರುಣ ಸಂಘದ ಸಮಸ್ತ ಸದಸ್ಯರಿಗೂ ಕಲಿಸಿದರು. ಕುಸ್ತಿ ವ್ಯಾಯಾಮಗಳಿಂದ ಚಂದ್ರಶೇಖರರ ವ್ಯಕ್ತಿತ್ವ ಇನ್ನಷ್ಟು ಆಕರ್ಷಕವೆನಿಸಿತು.

ಅವರದ್ದು ನೀಳ ಕಾಯ, ಸುದೃಢ ದೇಹ, ಪೂರ್ತಿ ಸ್ವದೇಶಿ ಅನ್ನಬಹುದಾದ ವೇಷ ಭೂಷಣ. ಖಾದಿ ಧೋತಿ, ತುಂಬು ತೋಳಿನ ನೆಹರೂ ಷರ್ಟು, ಅದರ ಮೇಲೊಂದು ಜಾಕೀಟು., ತಲೆಗೆ ಗಾಂಧೀ ಟೋಪಿ, ಸುಂದರ ಮುಖಾರವಿಂದ. ಪ್ರಥಮ ನೋಟದಲ್ಲೇ ಎಂಥವರನ್ನೂ ಮೋಡಿಮಾಡುವ ಆಕರ್ಷಕ ವ್ಯಕ್ತಿತ್ವ ಅವರದ್ದು.

ಈಗ ಚಂದ್ರಶೇಖರರ ಮುಂದಿದ್ದದ್ದು ಒಂದೇ ಗುರಿ– ಊರಿನಲ್ಲಿ ಶಿಸ್ತು, ಶಾಂತತೆ ಮತ್ತು ಸ್ವಚ್ಛತೆಯನ್ನು ಕಾಪಾಡಿಕೊಂಡು ಬರುವುದು. ಈ ನಿಟ್ಟಿನಲ್ಲಿ ತಮ್ಮ ಸಂಘದ ಸದಸ್ಯರನ್ನು ಒಗ್ಗೂಡಿಸಿ ಕಾರ್ಯೋನ್ಮುಖರಾದರು. ಗೃಹರಕ್ಷಕ ದಳದವರಂತೆ ಸ್ವಪ್ರೇರಣೆಯಿಂದ ತಮ್ಮ ಕಾಯಕವನ್ನು ನೆರವೇರಿಸತೊಡಗಿದರು. ದಿನವಿಡೀ ದುಡಿಮೆ, ಸಂಜೆ ಮುಂಜಾವು ವ್ಯಾಯಾಮ – ಬಿಡುವು ಮಾಡಿಕೊಂಡು 'ಕ್ಷಾತ್ರತೇಜ' ಎಂಬ ಹದಿನಾಲ್ಕು ಜನ ಐತಿಹಾಸಿಕ ವ್ಯಕ್ತಿಗಳ ಚರಿತ್ರೆಯನ್ನು ಓದುವುದನ್ನು ಮಾಡಲಾರಂಭಿಸಿದರು. ಸಂಗಪ್ಪ ರಟಕಲ್, ಸಿದ್ರಾಮಪ್ಪ ಹತ್ತಿ ಇವರು ವ್ಯಾಯಾಮದ ತರಬೇತಿಯ ಜವಾಬ್ದಾರಿ ಹೊತ್ತರೆ, ಗುರುಲಿಂಗಪ್ಪ ಹತ್ತಿ ಮತ್ತು ಗುರುಲಿಂಗಪ್ಪ ಪಾರಾ ವೀರಪುರುಷರ ಪುಸ್ತಕಗಳನ್ನು ಅರ್ಥವತ್ತಾಗಿ ಮನದಟ್ಟಾಗುವಂತೆ ಓದುವ ಜವಾಬ್ದಾರಿ ವಹಿಸಿಕೊಂಡರು. ಈ ನಡುವೆ, ತಮ್ಮ ಚಟುವಟಿಕೆಗಳಿಗೆ ಇನ್ನಷ್ಟು ಸ್ಫೂರ್ತಿನೀಡುವಂತೆ "ಕಿತ್ತೂರು ರಾಣಿ ಚೆನ್ನಮ್ಮ" ನಾಟಕವನ್ನು ಅಭಿನಯಿಸಿ, ಊರ ಜನರನ್ನು ರಂಜಿಸಿದರು.

ಸ್ಥಳೀಯ ಇತರ ತರುಣರು ಸಂಘದ ಈ ಪ್ರಗತಿಶೀಲ ಚಟುವಟಿಕೆಗಳನ್ನು ಕಂಡು ಕರುಬತೊಡಗಿದರಲ್ಲದ, ಸಣ್ಣಪುಟ್ಟ ಘರ್ಷಣೆಗೂ ವಾದವಿವಾದಕ್ಕೂ ತೊಡಗುತ್ತಿದ್ದರು. ಈ ಸಂದರ್ಭದಲ್ಲಿ ಸಬ್‌ಇನ್ಸ್‌ಪೆಕ್ಟರರು ಲಾಠಿ ಪ್ರದರ್ಶನವನ್ನು ಏರ್ಪಡಿಸಿ, ಅದೇ ನೆಪದಲ್ಲಿ ಎಲ್ಲರೊಂದಿಗೆ ಐಕ್ಯಭಾವ ಮೂಡಿಸಲು ಯಶಸ್ವಿಯಾದರು.

1936ನೇ ಇಸವಿ.

ಹೈದರಾಬಾದ್ ಕರ್ನಾಟಕ ಪ್ರದೇಶ ಆಗ ನಿಜಾಮರ ನಿರಂಕುಶ ಪ್ರಭುತ್ವಕ್ಕೆ ಒಳಪಟ್ಟಿತ್ತು. ಅವರಿಂದ ನೇಮಿಸಲ್ಪಟ್ಟ ರಜಾಕಾರರಿಂದ ಊರು ತುಂಬ ಹಾವಳಿ ನಡೆಯುತ್ತಿತ್ತು. ರಜಾಕರರ ಹಾವಳಿಯಿಂದೇ ಅದು ಪ್ರಸಿದ್ಧವಾಗಿತ್ತು. ಕೆಲವೊಮ್ಮೆ

ಕೋಮು ಗಲಭೆಗೂ ಅದು ಕಾರಣವಾಗುತ್ತಿತ್ತು. ಚಂದ್ರಶೇಖರರ ಚಟುವಟಿಕೆಗಳು ನಿಜಾಮರ ದುರಾಡಳಿತದ ವಿರುದ್ಧದ ಹೋರಾಟಕ್ಕೆ ನಾಂದಿ ಹಾಡಿದ್ದು ಇದೇ ಕಾಲಕ್ಕೆ..

## 'ಓಂ' ಧ್ವಜಾರೋಹಣ

ಸ್ಥಳೀಯ ಶ್ರೀ ಬಸವೇಶ್ವರ ದೇವಾಲಯದ ಮೇಲೆ "ಓಂ" ಧ್ವಜಾರೋಹಣ ಮಾಡಿದ ಒಂದು ಘಟನೆ ಚಂದ್ರಶೇಖರರ ಬದುಕಿನಲ್ಲಿ ನಡೆದ ಒಂದು ವಿಶಿಷ್ಟ ಅವಿಸ್ಮರಣೀಯ ಸನ್ನಿವೇಶ. ಅಂದು ಬಸವ ಜಯಂತಿ. ತರುಣ ಸಂಘದ ತರುಣರೆಲ್ಲ ಈ ಧಾರ್ಮಿಕ ಕ್ರಿಯೆಗೆ ಕಟಿಬದ್ಧರಾಗಿ ತಮ್ಮ ಊರಿನ ದೇಗುಲದ ಮೇಲೆ ತಮ್ಮ ಧರ್ಮಧ್ವಜ ಹಾರಾಡಬೇಕೆಂಬ ಉತ್ಕಟ ಬಯಕೆಯನ್ನು ವ್ಯಕ್ತಪಡಿಸಿದರು. ಮಾತ್ರವಲ್ಲ, ವೈಶಾಖ ಶುದ್ಧ ರೋಹಿಣಿಯಂದು 'ಓಂ ಧ್ವಜಾರೋಹಣ'ವನ್ನು ನೆರವೇರಿಸಿಯೇ ಬಿಟ್ಟರು. ಸತ್ಯ, ಶಾಂತಿ ಮತ್ತು ಸ್ವಾತಂತ್ರ್ಯದ ಪ್ರತೀಕವಾದ ಓಂ ಧ್ವಜವನ್ನು ಹಾರಿಸುವುದು ಚಂದ್ರಶೇಖರರ ಬಳಗಕ್ಕೆ ಒಂದು ಮಹತ್ತರ ಸವಾಲು ಮತ್ತು ಜತೆಗೇನೇ ಒಂದು ಸಾಧನೆಯೂ ಆಗಿತ್ತು.

"ಹರ ಹರ ಮಹಾದೇವ್..." "ಹರ ಹರ ಮಹಾದೇವ್..." ಎಂಬ ಘೋಷಣೆಗಳು ಮುಗಿಲು ಮುಟ್ಟಿದವು. ಇದು ನಿಜವಾಗಿಯೂ ನಿಜಾಮ ಸರಕಾರದ ದಮನೀಯ ನೀತಿಯ ವಿರುದ್ಧದ ಒಂದು ಸಾಂಕೇತಿಕ ಪ್ರಕ್ರಿಯೆಯೂ ಆಗಿತ್ತು ಎಂಬುದರಲ್ಲಿ ಸಂದೇಹವಿರಲಿಲ್ಲ.

ಎತ್ತರದಲ್ಲಿ ಹಾರಾಡುತ್ತಿದ್ದ "ಓಂ" ಧ್ವಜವನ್ನು ಕಂಡ ಪರಮತೀಯರು, ಆಡಳಿತ ವರ್ಗದವರ ಬೆಂಬಲದಿಂದ ಊರಿನ ಕೆಲವು ಮುಖಂಡರನ್ನು ತಮ್ಮೊಂದಿಗೆ ಸೇರಿಸಿಕೊಂಡು ಧ್ವಜವನ್ನು ಕೆಳಗಿಳಿಸುವಂತೆ ಒತ್ತಾಯಿಸಿದರು. ಊರಲ್ಲಿ ಇದು ಕೋಮು ಭಾವನೆಯ ಪ್ರಕ್ಷುಬ್ಧ ವಾತಾವರಣಕ್ಕೂ, ರಕ್ತಪಾತಕ್ಕೂ ಕರಣವಾಗಬಹುದೆಂದು ಮನಗಂಡ ಕೆಲವರು ಊರ ಹಿರಿಯರನ್ನು ಕಂಡು

ಧ್ವಜವನ್ನು ಇಳಿಸುವಂತೆ ನಿವೇದಿಸಿಕೊಂಡರು. ಗ್ರಾಮದ ಹಿರಿಯರು ಧ್ವಜವನ್ನು ಇಳಿಸಲು ಮುಂದಾದರು. ಸ್ವಯಂ ಸೇವಕರು ಮಾಡಿಕೊಂಡ ವಿನಂತಿ ವಫಲವಾಯಿತು. ಊರ ಹಿರಿಯರು ಧ್ವಜವನ್ನು ದೇಗುಲದ ಮೇಲಿನಿಂದ ಕೆಳಗಿಳಿಸಿಯೇ ಬಿಟ್ಟರು.

## ದೇಹಕ್ಕೆ ದಂಡನೆ, ಸಮಾಜಕ್ಕೆ ಪ್ರತೀಕಾರ

ಚಂದ್ರಶೇಖರರಿಗೆ ಈ ಸುದ್ದಿ ಬಹಳ ತಡವಾಗಿ ಮುಟ್ಟಿತು. ಬಹುದಿನಗಳ ತಮ್ಮ ಬಯಕೆ ಹೀಗೆ ನಿಷ್ಫಲವಾದುದನ್ನು ಕಂಡ ಅವರು ಅತೀವವಾಗಿ ನೊಂದುಕೊಂಡರು. ಅಲ್ಲೇ ಗುಡಿಯಲ್ಲಿ ಕಣ್ಣೀರುಗರೆಯುವುದನ್ನು ಬಿಟ್ಟರೆ ಯಾವುದೇ ಘರ್ಷಣೆಗೆ ಇಳಿಯಲಿಲ್ಲ. ವಿರೂಪಾಕ್ಷಪ್ಪ ಮತ್ತು ಶಂಕರಪ್ಪ ಪಾಟೀಲರು ಅವರನ್ನು ಒತ್ತಾಯ ಪೂರ್ವಕವಾಗಿ ಮನೆಗೆ ಕರೆತರಲು ಹೋದರೆ ಚಂದ್ರಶೇಖರರು ಮುಗುಮ್ಮಾಗಿ ಅವರ ಬೇಡಿಕೆಯನ್ನು ತಿರಸ್ಕರಿಸಿದರು. ಒಂದು ಬಗೆಯ ಆತ್ಮಾವಲೋಕನ, ಒಂದು ಬಗೆಯ ದೇಹದಂಡನೆಯ ದ್ಯೋತಕವಾಗಿ ಅನ್ನ ನೀರು ಮುಟ್ಟದೆ ಎರಡು ರಾತ್ರಿ ಮೂರು ಹಗಲುಗಳನ್ನು ಈ ಘಟನೆಯ ಪ್ರತಿಭಟನೆಯ ರೂಪದಲ್ಲಿ ಕಳೆದರು.

ಸಂಗಶೆಟ್ಟರು ಒಬ್ಬಿಬ್ಬರು ಹಿರಿಯರನ್ನು ಕೂಡಿಕೊಂಡು ಮಗನನ್ನು ಸಮಾಧಾನ ಪಡಿಸಿ, ಮುಂದೆ ಇಂಥ ಪ್ರಮಾದಗಳು ಘಟಿಸದಂತೆ ಎಚ್ಚರ ವಹಿಸುವ ಭರವಸೆ ನೀಡಿ ಮಗನನ್ನು ಮನೆಗೆ ಕರೆತಂದರು. ಕಳೆದು ಹೋದ ಮಗ ಮತ್ತೆ ಬದುಕಿ ಬಂದಂತೆ ತಾಯಿ ಚಂದ್ರಶೇಖರರನ್ನು ಕಂಡು ಸಂತಸದ ಕಣ್ಣೀರಿಟ್ಟರು.

ಈ ಘಟನೆ ಚಂದ್ರಶೇಖರರಲ್ಲಿ ವಿಶೇಷ ಆತ್ಮ ಜಾಗೃತಿಯನ್ನು ಉದ್ದೀಪಿಸಿತು. ಊರಿನ ಏಳಿಗೆಯಲ್ಲಿ ಮತೀಯ ಸೌಹಾರ್ದತೆಗೆ ವಿಶೇಷ ಮಹತ್ವವಿದೆ ಎಂದು ಅವರು ಸ್ವತಃ ಕಲಿತ್ತದ್ದಲ್ಲದೆ, ಊರ ಜನರಿಗೂ ಬೋಧಿಸಿದರು.

## ರಾಷ್ಟ್ರೀಯ ಭಾವನೆ


ನಿಜಾಮರ ಸರಕಾರದಲ್ಲಿ ಪೋಲೀಸ್ ಪಾಟೀಲರಾಗಿದ್ದ ತಂದೆ ಸಂಗಶೆಟ್ಟರಿಗೆ ಮಗ ಚಂದ್ರಶೇಖರ, ನಿಜಾಮರ ವಿರುದ್ಧ ಹೋರಾಡುವುದು ಬೇಕಿರಲಿಲ್ಲ. ಆದರೆ ಮಗನನ್ನು ಸರಿದಾರಿಗೆ ತರುವ ಅವರ ಪ್ರಯತ್ನಗಳೆಲ್ಲ ವಿಫಲವಾದುವು. ಈಗ ಚಂದ್ರಶೇಖರರ ಮುಂದಿದ್ದದ್ದು ಕೇವಲ ಸೇವೆ ಮತ್ತು ಸಂಘಟನೆಯ ಧ್ಯೇಯ. ತರುಣ ಸಂಘದ ಸಕಲ ಸದಸ್ಯರ ಬೆಂಬಲದೊಂದಿಗೆ ಅವರು ಯಾವ ಕಾಯಕಕ್ಕೂ ಹಿಂದೆ ಮುಂದೆ ನೋಡದೆ ಧೀರೋದ್ರಾತವಾಗಿ ಕೈಹಾಕಬಹುದಿತ್ತು. ವ್ಯಕ್ತಿ ಶಕ್ತಿಗಿಂತ ಸಂಘಶಕ್ತಿಯಲ್ಲಿ ಅಪಾರ ಬಲವಿದೆ ಎಂಬ ವಿಚಾರ ಅವರಿಗೆ ಅದಾಗಲೇ ಮನದಟ್ಟಾಗಿತ್ತು. ಅದಕ್ಕೆ ಹಿನ್ನೆಲೆಯಾಗಿ ಶ್ರದ್ಧೆ ಸಂಯಮ ಮತ್ತು ಗುರಿಯ ಪ್ರಜ್ಞೆ ಇದ್ದಲ್ಲಿ ವಿಶೇಷ ಮೆರುಗು ಎಂಬ ವಿಷಯವೂ ತಿಳಿದಿತ್ತು. ಹೇಗೆ ತಾಯಿ ಜೀಜಾಬಾಯಿಯ ಮಾರ್ಗದರ್ಶನ ಹಾಗೂ ಗುರು ದಾದೋಜಿಯವರ ಸಲಹೆ ಸಹಕಾರ ಮತ್ತು ಆಶೀರ್ವಾದದೊಂದಿಗೆ ಛತ್ರಪತಿ ಶಿವಾಜಿ ಇತಿಹಾಸದಲ್ಲಿ ಭವ್ಯವಾಗಿ ಮೆರೆದರೋ ಅದೇ ರೀತಿಯಲ್ಲಿ ಚಂದ್ರಶೇಖರರಿಗೆ ಮಹೋನ್ನತ ಕಾರ್ಯ ಎಸಗಬೇಕೆಂಬ ಉತ್ಕಟೇಚ್ಛೆ ತಮ್ಮ ತಾಯಿಯವರ ಪ್ರೇರಣೆ ಮತ್ತು ಆಶೀರ್ವಾದದೊಂದಿಗೆ ಮುನ್ನಡೆಯಲು ಸಹಕಾರಿಯಾಯಿತು.

ಪ್ರತಿಯೊಂದು ಹಳ್ಳಿಯಲ್ಲೂ ತರುಣ ಸಂಘ ಸ್ಥಾಪನೆ ಮಾಡಿ ಅಲ್ಲಿನ ತರುಣರಿಗೆ ಸೂಕ್ತ ಮಾರ್ಗದರ್ಶನ, ಅಲ್ಲಿಯ ಜನರಿಗೆ ಇಯಮಿತ ಸೇವೆಯನ್ನು ಮಾಡಬೇಕೆಂಬ ಕನಸನ್ನು ಕಂಡರು.


ಜತೆಜತೆಗೆನೇ ಚಂದ್ರಶೇಖರರ ಆಸಕ್ತಿ ರಾಷ್ಟ್ರೀಯ ಪ್ರಜ್ಞೆಯ ಕಡೆ ಹೊರಳಿತು. ಹರ್ಡೇಕರ್ ಮಂಜಪ್ಪನವರ "ಶರಣ ಸಂದೇಶ", ಸಹೀಬುಲ್ಲಾ ಖಾನ್ ಅವರ "ಇಂಬ್ರೋಸ್" ವಿ.ಎಚ್.ದೇಸಾಯಿಯವರ "ಡೆಮೋಕ್ರೇಟ್" ಪತ್ರಿಕೆಗಳು ಚಂದ್ರಶೇಖರರ ಸ್ಫೂರ್ತಿಯ ಸೆಲೆಯಾದವು. ಸುಭಾಸ್ ಚಂದ್ರ ಬೋಸ್ ಮತ್ತು ಬಾಲಗಂಗಾಧರ ತಿಲಕರ ಸಂದೇಶಗಳು ಚಂದ್ರಶೇಖರರಲ್ಲಿ ವಿಶೇಷ ರಾಷ್ಟ್ರೀಯ ಭಾವನೆಗಳನ್ನು ಮೂಡಿಸಿದವು.

# ಸ್ವಾಮಿ ರಮಾನಂದರ ಆದರ್ಶ

ಹೈದರಾಬಾದ್‌ನ್ನು ಆಳಿದ ನಿಜಾಮರಲ್ಲಿ ನವಾಬ್ ಮೀರ್ ಉಸ್ಮಾನ್ ಅಲೀಖನನೇ ಕೊನೆಯವನು. ಆತನ ಆಡಳಿತ ಕಾಲದಲ್ಲಿ ಪ್ರಧಾನಮಂತ್ರಿಯಾಗಿದ್ದ ಮೀರ್ ಲೇಕ್ ಅಲಿ ಮತ್ತು ಇತ್ತೆಹಾಕ್ ಸಂಸ್ಥೆಯ ದುರೀಣ ಖಾಸಿಂ ರಿಜ್ವಿಯವರದೇ ಮೇಲುಗೈಯಾಗಿತ್ತು. ನಿಜಾಮರ ಆಡಳಿತವನ್ನು ಕಿತ್ತೆಸೆದು ಹೈದರಾಬಾದ್ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೆ ಆರ್ಯ ಸಮಾಜ ಮುಂಚೂಣಿಯಲ್ಲಿ ನಿಂತು ಹೋರಾಟ ಪ್ರಾರಂಭಿಸಿತ್ತು. ಸ್ವಾಮಿ ದಯಾನಂದ ಸರಸ್ವತಿಯವರು ಸ್ಥಾಪಿಸಿದ್ದ ಆರ್ಯ ಸಮಾಜಕ್ಕೆ ರಾಜಕೀಯ ಸಂತ ಎಂದೇ ಕರೆಯಲ್ಪಡುತ್ತಿದ್ದ ಸ್ವಾಮಿ ರಮಾನಂದ ತೀರ್ಥರು ನಾಯಕತ್ವ ವಹಿಸಿದ್ದರು. ಆರ್ಯ ಸಮಾಜದಲ್ಲಿ ಚಂದ್ರಶೇಖರರು ವಹಿಸಿದ್ದ ಪಾತ್ರವನ್ನು ರಾಜಕೀಯ ಮುತ್ಸದ್ದಿ ಶ್ರೀ ನಿಜಲಿಂಗಪ್ಪನವರು ಸ್ಮರಿಸಿಕೊಂಡಿದ್ದು ಹೀಗೆ:



ಸ್ವಾಮಿ ರಮಾನಂದ ತೀರ್ಥರು (ಭಾರತ ಸರಕಾರ ಬಿಡುಗಡೆ ಮಾಡಿದ ಅಂಚೆ ಚೀಟಿ)



"ಹೈದರಾಬಾದ್‌ನಲ್ಲಿ ಜವಾಬ್ದಾರೀ ಸರಕಾರ ಅಥವಾ ಸ್ವತಂತ್ರ ಸರಕಾರಕ್ಕಾಗಿ ಹೋರಾಟ ನಡೆದಾಗ ಈ ಹೋರಾಟದ ಮುಖಂಡತ್ವ ವಹಿಸಿದವರಲ್ಲಿ ಚಂದ್ರಶೇಖರರು ಒಬ್ಬರು. ಹೈದರಾಬಾದ್ ಸರಕಾರ ಅಂದ್ರೆ ಅದು ಪ್ರತಿಗಾಮಿ ಸರಕಾರ. ಸ್ವಾಮಿ ರಮಾನಂದ ತೀರ್ಥರ ಮುಖಂಡತ್ವದಲ್ಲಿ ಚಳುವಳಿ ಆದಾಗ

ಗುಲಬರ್ಗಾ ರಾಯಚೂರು, ಬೀದರ್– ಈ ಮೂರು ಕರ್ನಾಟಕದ ಜಿಲ್ಲೆಗಳ ಅನೇಕರು ಅವರ ಹಿಂಬಾಲಕರಾದರು. ಆ ಚಳುವಳಿಯಲ್ಲಿ ಭಾಗವಹಿಸಿದವರಲ್ಲಿ ಚಂದ್ರಶೇಖರರು ಪ್ರಮುಖರು. ಆ ಸಂದರ್ಭದಲ್ಲಿ ಅವರ ನಿಕಟ ಸಹಚರ್ಯವೂ, ಸ್ನೇಹವೂ ನನಗಾಯಿತು. ಸ್ವಾಮಿ ರಮಾನಂದ ತೀರ್ಥರಿಗೆ ಭಾಳ ಬೇಕಾದ ಶಿಷ್ಯರು ಅವರಾಗಿದ್ದರು..."


## ಹೋರಾಟದ ಕರೆ

ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭಾದ ಕಾರ್ಯ ಚಟುವಟಿಕೆಗಳಲ್ಲೂ ಚಂದ್ರಶೇಖರರು ಸಕ್ರಿಯವಾಗಿ ಭಾಗವಹಿಸಿದರು. 1938ನೇ ಇಸವಿಯಲ್ಲಿ ನಿಜಾಮ ರಾಜ್ಯದಲ್ಲಿ ನಿಷೇಧಿತವಾಗಿದ್ದ "ವಂದೇ ಮಾತರಂ" ಚಳುವಳಿಯಲ್ಲೂ ಚಂದ್ರಶೇಖರರು ಮತ್ತು ಅವರ ಸಹಚರರೆಲ್ಲ ಭಾಗವಹಿಸಿದ್ದರು.

ಪುಣೆಯಲ್ಲಿ ನಡೆದ ಸತ್ಯಾಗ್ರಹ ಕ್ಯಾಂಪಿನ ಬಗ್ಗೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವಿ.ಪ. ದೇವೂಳ್ ಗಾಂವಕರ್ ಹೇಳಿದ್ದು ಹೀಗೆ:

" ಆರ್ಯ ಸಮಾಜದವ್ರು ಮತ್ತು ಹಿಂದೂ ಮಹಾಸಭಾದವರು ದೊಡ್ಡ ಪ್ರಮಾಣದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಒಂದು ಹೋರಾಟ ಪ್ರಾರಂಭ ಮಾಡಿದ್ರು... ಆ ಹೋರಾಟದಲ್ಲಿ ಪಲ್‌ಗೊಳ್‌ಬೇಕಂತ ಚಂದ್ರಶೇಖರರಿಗೆ ಮನಸ್ಸಲ್ಲಿ ಹುಟ್ತು. ಆದ್ರೆ ಮನೆಯಲ್ಲಿ ಬಿಡುವ ಹಾಂಗಿಲ್ಲ. ತಂದೆಯವ್ರು ಪೋಲೀಸ್ ಪಾಟೀಲ್ರು, ಹ್ಯಾಂಗ್ ಹೋಗ್ತಾರೆ? ಏನೋ ಗದ್ಲ ಮಾಡ್‌ಕೊಂಡು, ರಾತ್ರೋರತ್ರಿ ಮನೆಬಿಟ್ಟು ಹೋಗಿ ಎಲ್ಲೋ ಏನೋ ನಡ್ಕೊಂಡು ಬಂದು ಈ ಕುರಿಗುಂಟಕ್ಕೆ ಬಂದ್ರು. ಇಲ್ಲಿ ಟ್ರಕ್ ಒಳ್ಗೆ ಬಂದ್ರು. ಆ ಟ್ರಟಕ್‌ನವ್ರಿಗೆ ಹೇಳ್‌ಕೊಂಡು ಬಿಟ್‌ಬಿಟ್ರು.... ಏನಾರ ಆಯ್ತು. ಗುಲಬರ್ಗಾ ರೇಲ್ವೇ ಸ್ಟೇಶನ್‌ಗೆ ಬಂದ್ರು. ಅಲ್ಲಿಂದ ಪುಣೆಗೆ ಸವಾರಿ... ಅಲ್ಲಿ ಪರಿಚಯಸ್ತ್ರು ಸಿಕ್ಕಿ ಎಲ್ಲ ಔರಂಗಾಬಾದ್‌ಗೆ ಹೋದ್ರು. ಔರಂಗಾಬಾದ್ ಜಿಲ್ಲೇಲಿ ಸತ್ಯಾಗ್ರಹ ಮಡಿದ್ರು. ಅಲ್ಲಿಂದ ವೈಜಾಪುರ ಜೈಲಿನಾಗೆ ಅವ್ರನ್ನ ಇಟ್ಟಿದ್ರು.

ಅಲ್ಲಿ ಪರಿಸ್ಥಿತಿ ಭಾಳಾ ಕೆಟ್ಟಿದ್ದಿತ್ತು.... ಆ ಪರಿಸ್ಥಿತಿ ವಿರುದ್ದಾನೂ ಹೋರಟ ಮಾಡಿದ್ರು. ಸುಮ್ ಕೂಡಾ ಮನಸಾ ಇದ್ದಿದ್ದಿಲ್ಲ ಅಂವ.




ಅಲ್ಲೀನೂ ಹೋರಾಟ ಮಾಡಿದ್ರು... ಉಪವಾಸ ಕೂತ್ರು.. ಸ್ವಲ್ಪ ಸುಧಾರಣೆ ಆಯ್ತು... ಇಂವ ಭಾಳಾ ತಂಟೆ ಮಾಡ್ತಾನಂತ ಔರಂಗಾಬಾದ್ ಜೈಲಿಗೆ ಕಳಿಸಿದ್ರು. ಅಲ್ಲಿ ಪುನಃ ಹೋರಾಟ. ಅಲ್ಲಿಂದ ಹೈದರಾಬಾದ್‌ಗೆ ಕಳಿಸದ್ರು. ಹೈದರಾಬಾದ್‌ನಿಂದ ಪರವಣಿ ಜೈಲ್. ಹೀಗ್ ಮೂರ್ನಾಲ್ಕು ಜೈಲ್‌ಗಳಿಗೆ ಅವ್ರನ್ನ ಕಳಿಸಿದ್ರು."




"ವಂದೇ ಮಾತರಂ" ಧ್ವಜ

"ವಂದೇ ಮಾತರಂ" ಚಳುವಳಿಯಲ್ಲಿ ಭಾಗವಹಿಸಬೇಕೆಂಬ ಉತ್ಕಟೇಚ್ಛೆಯಿಂದ ಹೊರಟ ಚಂದ್ರಶೇಖರರ ಪಾಡು ಹೇಳತೀರದು. ಎಲ್ಲಿಗೆ ಹೋಗಬೇಕು, ಯಾರನ್ನು ಕಾಣಬೇಕು ಸತ್ಯಾಗ್ರಹ ಕಾರ್ಯಕ್ರಮಗಳೇನು? ಸತ್ಯಾಗ್ರಹಿಗಳೆಲ್ಲ ಎಲ್ಲಿ ಸೇರುತ್ತಾರೆ ಎಂಬುದರ ಕೂಲಂಕಷ ಪರಿಜ್ಞಾನ ಅವರಿಗೆ ಇರಲಿಲ್ಲ. ಸ್ನೇಹಿತನೂ ಆದ ಬಲಗುಂದಿ ಬಸವಣ್ಣನನ್ನು ಅವರು ಕಳುಹಿಸಿದ್ದರು. ಆತ ಗುಲಬರ್ಗಾಕ್ಕೆ ಬಂದು ಸಂಘಟಕರನ್ನು ಕಂಡು, ವಿಷಯ ತಿಳಿದು ಚಂದ್ರಶೇಖರರಿಗೆ ವಿಷಯ ತಿಳಿಸಿದರು. ಸತ್ಯಾಗ್ರಹಿಗಳಿಗೆ ಸೋಲಾಪುರದ ವರೆಗೆ ದಾರಿವೆಚ್ಚಕೊಟ್ಟು ಮುಂದೆ ಅವರು ಪೂಣೆಗೆ ತೆರಳಬೇಕೆಂದೂ ಅಲ್ಲಿಂದ ಯೋಜನೆ ರೂಪಿಸಲಾಗುತ್ತೆ ಎಂದೂ ಮಾಹಿತಿ ತಿಳಿಯಿತು. ಚಂದ್ರಶೇಖರರು ಮತ್ತು ಅವರ ಆಪ್ತರು ಗುಲಬರ್ಗಾ ರೇಲ್ವೇ ನಿಲ್ದಾಣದಲ್ಲಿರಬೇಕೆಂದೂ, ಸಂಘಟಕರಿಂದ ದಾರಿವೆಚ್ಚ ಪಡೆದು ಬಸವಣ್ಣಪ್ಪ ಅವರನ್ನು ಸೇರಿಕೊಂಡು ಮುಂದೆ ಎಲ್ಲರೂ ಸೋಲಾಪುರಕ್ಕೆ

ತೆರಳಬೇಕೆಂದೂ ರಹಸ್ಯವಾಗಿ ಒಪ್ಪಂದವಾಗಿತ್ತು. ತನ್ನ ಊರಿಗೆ ತೆರಳುವುದೆಂದು ಬಸವಣ್ಣಪ್ಪ ಮುಂದಾಗಿ ಮಹಾಗಾಂವ್‌ನಿಂದ ತೆರಳುವುದೆಂದು ಸಾರಲಾಯಿತು.

ಎಷ್ಟು ಗುಟ್ಟಾಗಿ ಒಪ್ಪಂದ ಮಾಡಿಕೊಂಡರೂ ಊರಲ್ಲಿ ಈ ವಿಷಯ ಒಬ್ಬರ ಕಿವಿಯಿಂದ ಇನ್ನೊಬ್ಬರ ಕಿವಿಗೆ ಬಿದ್ದು ಎಲ್ಲರಿಗೂ ತಿಳಿದುಹೋಯಿತು. ಚಂದ್ರಶೇಖರ ಪಾಟೀಲರ ನಾಯಕತ್ವದಲ್ಲಿ ಕೆಲವು ತರುಣರು ಸತ್ಯಾಗ್ರಹದಲ್ಲಿ ಭಾಗವಹಿಸುತ್ತಾರೆ ಎಂಬ ಸುದ್ದಿ ಹಿರಿಯರ ಕಿವಿಗೂ ಮುಟ್ಟಿತು. ದಿನರಾತ್ರಿ ಅವರನ್ನು ಕಾಯುವ ಪ್ರಸಂಗ ಎದುರಾಯಿತು. ಮುಂದಿನ ಮೂರು ದಿನಗಳ ಪರ್ಯಂತ ಹಿರಿಯರ ಕಣ್ಣಿಗೆ ಮಣ್ಣೆರಚಿ ಊರಲ್ಲಿ ಉಳಿಯುವುದೆಂದರೆ, ಚಂದ್ರಶೇಖರರಿಗೆ ಕಷ್ಟವೆನಿಸತೊಡಗಿತು. ಅಂದೇ ಅವರು ಗೆಳೆಯರಾದ ಕಲ್ಯಾಣಿ ಶಿವಶರಣಪ್ಪ ಮತ್ತು ಸಿದ್ರಾಮಪ್ಪ ಹತ್ತಿಯವರನ್ನು ಕೂಡಿಕೊಂಡು ತೋಟದ ಬಾವಿಯ ಹತ್ತಿರ ಸೇರಿ ಸಮಾಲೋಚನೆ ಮಾಡಿಕೊಂಡರು. ತಕ್ಷಣವೇ ಗುಲಬರ್ಗಾಕ್ಕೆ ಹೊರಡುವುದೆಂದೂ, ಮೂವರೂ ಮನೆಯವರ ಕಣ್ಣುತಪ್ಪಿಸಿಕೊಂಡೇ ಪಲಾಯನ ಮಾಡಬೇಕೆಂದೂ ತೀರ್ಮಾನವಾಯಿತು. ದಾರಿಯಲ್ಲಿ ಭೇಟಿಯಾದವರನ್ನು ಏನೇನೋ ಸಬೂಬು ಹೇಳಿ ತಪ್ಪಿಸಿಕೊಂಡರು. ಹೀಗೆ ತಲೆ ತಪ್ಪಿಸಿಕೊಂಡು ಕುರಿಕೋಟಾದವರೆಗೆ ಬಂದದ್ದಾಇತು. ಬಸ್ ಹತ್ತಿದರೆ ಪರಿಚಿತರಿಗೆ ತಮ್ಮ ಯೋಜನೆಯ ಗುಟ್ಟುರಟ್ಟಾಗಬಹುದೆಂದು ಅರಿತು, ಬೇರೆ ದಾರಿಯಿಂದ ಸಾಗುವ ಸನ್ನಾಹ ಮಾಡಿದರು. ಅಷ್ಟರಲ್ಲಿ ಒಂದು ಟ್ರಕ್ ಬಂತು. ಟ್ರಕ್ ಚಾಲಕ ಬೇಡವೆಂದರೂ, ಮೂವರೂ ಟ್ರಕ್ ಏರಿ ಚಾಲಕ ಕ್ಲೀನರ್ ಜತೆಗೆ ವಾದ ವಿವಾದ ಮಾಡುತ್ತಲೇ ಗುಲಬರ್ಗಾ ರೇಲ್ವೇ ನಿಲ್ದಾಣವನ್ನು ಹೇಗಾದರೂ ತಲುಪಿದರು. ನೇರವಾಗಿ ಪುಣೆಯನ್ನು ತಲುಪಿದರು.

## ಸತ್ಯಾಗ್ರಹ

ಒಪ್ಪಂದದಂತೆ, ಮೂರುದಿನಗಳ ನಂತರ ಬಸವಣ್ಣಪ್ಪ ಗುಲಬರ್ಗಾ ರೇಲ್ವೇ ನಿಲ್ದಾಣಕ್ಕೆ ಬಂದರೆ ಈ ಮೂವರ ಪತ್ತೆಯಿಲ್ಲ. ತಾವೂ ಹೇಗಾದರೂ ಸತ್ಯಾಗ್ರಹಿಗಳನ್ನು ಸೇರಿಕೊಳ್ಳಬೇಕೆಂಬ ಇರಾದೆಯಿಂದ ಬಸವಣ್ಣಪ್ಪ ತಮ್ಮ ಸಂಗಡ ಶಿವಲಿಂಗಯ್ಯ ಕನಾಳಿ, ಜಮಶೆಟ್ಟಿ ಗುರುಬಸಪ್ಪ ಎಣಗೂರು, ಸುರಗಾಳಿ



ರೇವಣಸಿದ್ಧಪ್ಪ ಮೊದಲಾದವರನ್ನು ಸೇರಿಕೊಂಡು ಹನುಮಜಯಂತಿಯ ನೆಪ ಹೇಳಿಕೊಂಡು ಸೋಲಾಪುಕ್ಕೆ ಜಿಗಿದರು. ಅಲ್ಲಿ ಸತ್ಯಾಗ್ರಹಿಗಳನದ್ನಿ ಸೇರಿಕೊಂಡರು.

## ಅನಪೇಕ್ಷಿತ ಸೆರೆವಾಸ

ಈ ಕಡೆ ಪುಣೆ ತಲುಪಿದ ಚಂದ್ರಶೇಖರರ ಬಳಗ ಸತ್ಯಾಗ್ರಹಿಗಳ ತಂಡವನ್ನು ಸೇರಿಕೊಂಡರು. ಪೂರ್ವಯೋಜಿತ ಕಾರ್ಯಕ್ರಮದಂತೆ ಸತ್ಯಾಗ್ರಹಿಗಳ ಗುಂಪುಗಳು ಬೇರೆ ಬೇರೆ ನಿಟ್ಟಿನಿಂದ ಹೈದರಾಬಾದ್ ಸಂಸ್ಥಾನದ ಗಡಿಯೊಳಗೆ ಪ್ರವೇಶ ನಡೆಯತೊಡಗಿದವು. ಬ್ರಿಟಿಷ್ ಸಾಮ್ರಾಜ್ಯದ ಪ್ರಾಂತಗಳಾದ ಮಹಾರಾಷ್ಟ್ರ, ಗುಜರಾತ, ಉತ್ತರ ಪ್ರದೇಶ, ಪಂಜಾಬ್ ಮತ್ತು ಅಸ್ಸಾಂಗಳಿಂದ ಹೆಚ್ಚುಕಡಿಮೆ 25,000 ಸತ್ಯಾಗ್ರಹಿಗಳಿಗೆ ಕಡಿಮೆ ಇಲ್ಲದಂತೆ ಇಲ್ಲಿ ಜಮಾಗೊಂಡಿದ್ದರು. ಅವರಿಗೆಲ್ಲ ಮಾರ್ಗದರ್ಶನ ನೀಡುತ್ತಿದ್ದುದು ನಾರಾಯಣ ಸ್ವಾಮಿ, ಚಾಂದಕರಣ ಶಾರದಾಸ್ವಾಮಿ ಸ್ವತಂತ್ರಾನಂದ, ಸೇನಾಪತಿ ಬಾಪಟ ಮೊದಲಾದ ಪ್ರಮುಖರು. ಚಂದ್ರಶೇಖರರ

ತಂಡ ಮುಂಬೈ ಪ್ರಾಂತದ ಗಡಿಯನ್ನು ದಾಟಿ ಹೈದರಾಬದ್ ಸಂಸ್ಥಾನದ ತಾಲ್ಲೂಕು ಸ್ಥಳವಾದ ವೈಜಾಪುರಕ್ಕೆ ಬಂದಿತು. ಭಾರತದ ಪರವಾದ , ನಿಜಾಮರ ನಿರಂಕುಶ ಆಡಳಿತದ ವಿರುದ್ಧವಾದ 'ವಂದೇ ಮಾತರಂ' ಘೋಷಣೆ ಮುಗಿಲು ಮುಟ್ಟಿದವು. ಪೋಲೀಸರು ಸತ್ಯಾಗ್ರಹಿಗಳನ್ನು ಸೆರೆಹಿಡಿದು ಜೈಲುಗಳಿಗೆ ಸೇರಿಸ ತೊಡಗಿದರು. ಮೊತ್ತಮೊದಲಿಗೆ ವೈಜಾಪುರ ಜೈಲಿಗೆ ಸೇರಿಸಲ್ಪಟ್ಟ ಚಂದ್ರಶೇಖರರ ಅನುಭವ ಅತೀವ ಸಂಕಟಮಯವಾಗಿತ್ತು. ದಿನದಿಂದ ದಿನಕ್ಕೆ ಬಂಧಿತರ ಸಂಖ್ಯೆ ಏರತೊಡಗಿದ್ದರಿಂದ ವೈಜಾಪುರ ಜೈಲಿನಲ್ಲಿ ಜಾಗ ಸಾಲದಾಗಿ, ಚಂದ್ರಶೇಖರರನ್ನು ಔರಂಗಾಬಾದ್ ಜೈಲಿಗೆ ಸ್ಥಳಾಂತರಿಸಲಾಯಿತು. ಈ ಸಂದರ್ಭದಲ್ಲಿ ದೇಶದ ಅನೇಕ ನೇತಾರರ ಪರಿಚಯ ಸ್ನೇಹ ಚಂದ್ರಶೇಖರರಿಗೆ ಉಂಟಾಯಿತು. ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ದೇಶದ ಇತರ ಭಗಗಳಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳು ಜನತೆಯ ಸಹಭಾಗಿತ್ವ, ಕಾರ್ಯಕರ್ತರ ಸಂಘಟನೆಯ ಸ್ವರೂಪ – ಇವೇ ಮುಂತಾದ ವಿಚಾರಗಳು ಚಂದ್ರಶೇಖರರಿಗೆ ಲಭ್ಯವಾಗಿದ್ದು ಈ ಸಂದರ್ಭದಲ್ಲೇ. ದೇಶದ ಅನೇಕ ಮುಖಂಡರ ನಿಕಟ ಪರಿಚಯವಾದದ್ದಲ್ಲದೇ ಅವರ ಅನುಭವಗಳೂ ಅವರಿಗೆ ವೇದ್ಯವಾದುವು.

## ಅಮಾನುಷ ಅನಾಚಾರ

ಅನಿರ್ದಿಷ್ಟ ಕಾಲದ ಜೈಲುವಾಸವಾದ್ದರಿಂದ, 2 ತಿಂಗಳು ಕಳೆದುಹೋದವು. ಈ ಮಧ್ಯೆ ಸತಾರಾ ಜೇಲಿನಿಂದ ನೂರಾರು ಕೈದಿಗಳನ್ನು ಔರಂಗಾಬಾದ್‌ಗೆ ಕಳುಹಿಸಿದರು. ಸೆರೆಮನೆಯಲ್ಲಿ ಜಾಗ ಸಾಲದಾಯಿತು. ಜೇಲಿನ ಅಧಿಕಾರಿಗಳ ದರ್ಪ, ಅವರ ಒರಟು ವರ್ತನೆ, ಹೃದಯಹೀನ ನಡವಳಿಕೆಗಳಿಂದ ಸತ್ಯಾಗ್ರಹಿಗಳು ರೋಸಿಹೋದರು.ಉದ್ಧೇಶಪೂರ್ವಕವಾಗಿಯೇ ಸತ್ಯಾಗ್ರಹಿಗಳಿಗೆ ಮಣ್ಣು ಸೇರಿಸಿದ ಹಿಟ್ಟಿನ ಅರೆಬೆಂದ ರೊಟ್ಟಿ, ಉಸುಕು ಮಿಶ್ರಿತ ಅನ್ನ, ಊಟಕ್ಕೆ ಕಬ್ಬಿಣದ ತಟ್ಟೆ, ಕುಡಿಯಲೋಸುಗ ಕಬ್ಬಿಣದಿಂದ ನಿರ್ಮಿಸಿದ ಲೋಟ ಹೀಗೆ ನಿತ್ಯವೂ ಸಂಕಟಮಯ ಜೀವನ ಅವರದಾಯಿತು. ಅವರಿಗೆಲ್ಲ ಸರಿಯಾದ ರೀತಿಯ ಹಾಸಿಗೆ ಹೊದಿಕೆಗಳೂ ಪೂರೈಕೆಯಾಗಲಿಲ್ಲ. ತಮ್ಮನ್ನು ಮನುಷ್ಯರಂತೆ ನಡೆಸಿಕೊಳ್ಳಬೇಕೆಂಬ ಅವರೆಲ್ಲರ ಮನವಿಗಳು ನಿರರ್ಥಕವಾದವು.

ಈ ಸಂದರ್ಭದಲ್ಲಿ ಚಂದ್ರಶೇಖರರು ಒಂಟಿಯಾಗಿ ಸೆಟೆದು ನಿಂತರಲ್ಲದೆ ಆಡಳಿತದ ವಿರುದ್ಧ ಹೋರಾಟ ಪ್ರಾರಂಭಿಸಿದರು. ಪ್ರತಿಭಟನೆ, ಅವಿಧೇಯತೆಗಳನ್ನು ಕಂಡ ಜೇಲಧಿಕಾರಿಗಳೂ, ಚಂದ್ರಶೇಖರರಿಗೆ ಇನ್ನಷ್ಟು ಶಿಕ್ಷೆ ವಿಧಿಸುವ ಪಣ ತೊಟ್ಟರು. ಬೇತಿನ ಸಜಾ, ಅಂದರೆ, ಬೆತ್ತದೇಟಿನ ಶಿಕ್ಷೆ ವಿಧಿಸಿದರು. ಉಳಿದೆಲ್ಲ ಕೈದಿಗಳಿಗೂ ಅದೇ ಶಿಕ್ಷೆ ವಿಧಿಸುವ ಸನ್ನಾಹ ನಡೆಸಿದರು. ವಾತವರಣ ಪ್ರಕ್ಷುಬ್ಧವಾಯಿತು. ಸೆರೆಯಾಳುಗಳೆಲ್ಲ ಪೋಲೀಸರ ಮೇಲೆ ಏರಿಹೋದರು. ಪೋಲೀಸರು ಮಾಳಿಗೆಯ ಕಿಂಡಿಗಳಿಂದ ಉರಿವಕೊಳ್ಳಿಗಳನ್ನು ಎಸೆದು ಹಿಂಸಿಸ ತೊಡಗಿದರು. ಆ ಬೆಂಕಿಯ ಕೊಳ್ಳಿಗಳನ್ನು ನೀರಿನ ಪಾತ್ರೆಗಳಲ್ಲಿ ಅದ್ದಿ ನಂದಿಸುವುದೇ ಒಲಗಿನವರ ಕೆಲಸವಾಯಿತು. ಅನೇಕ ಸೆರೆಯಾಳುಗಳು ಗಾಯಗೊಂಡರು. ಕೊನೆಗೂ ಪೋಲೀಸರು ನಿರುಪಾಯದಿಂದ ಹಿಂದಿರುಗಿದರು.

ಈ ಎಲ್ಲ ವಿದ್ಯಮಾನಗಳಿಂದ ವಿಚಲಿತರಾದ ಚಂದ್ರಶೇಖರರು, ಇನ್ನು ಹೊಸದೇ ರೀತಿಯ ಪ್ರತಿಭಟನೆ ನೀಡಬೇಕೆಂದು ನಿರ್ಧರಿಸಿದರು. ಜೈಲಿನಲ್ಲಿನ ಅಮಾನವೀಯ ಪರಿಸ್ಥಿತಿಯನ್ನು ಸುಧಾರಿಸಬೇಕೆಂಬ ಕೋರಿಕೆಯನ್ನು ಮುಂದಿಟ್ಟುಕೊಂಡು ಚಂದ್ರಶೇಖರರು ಮರುದಿನವೇ ಅನಿರ್ದಿಷ್ಟಕಾಲದ ಉಪವಾಸ ಸತ್ಯಾಗ್ರಹವನ್ನು ಕೈಗೊಂಡರು. ಜೇಲಧಿಕಾರಿಗಳು ಮೆತ್ತಗಾದರು. ಸರಿದಾರಿಗೆ ಬಂದರು. ಪರಿಸ್ಥಿತಿ ಸುಧಾರಿಸತೊಡಗಿತು. ಉಪವಾಸವೂ ಮುಕ್ತಾಯದ ಹಾದಿ ಹಿಡಿಯಿತು. ಇದು ಅಧಿಕಾರಿಶಾಹಿಯ ಎದುರು ಚಂದ್ರಶೇಖರರು ಕೈಗೊಂಡ ಪ್ರತಿಭಟನೆಗೆ ಸಂದ ಮೊತ್ತಮೊದಲ ಯಶಸ್ಸು ಎಂದು ಪರಿಗಣಿಸಬಹುದಾಗಿದೆ. ಚಂದ್ರಶೇಖರರಂಥ ಉಪಟಳಗೈಯುವ ಸೆರೆಯಾಳುಗಳನ್ನು ಜೇಲಿನಲ್ಲಿ ಇರಿಸಿಕೊಂಡರೆ ಸೆರಗಿನಲ್ಲಿ ಕೆಂಡ ಸುರುವಿಕೊಂಡಂತೆ ಎಂದು ಭಾವಿಸಿದ ಆಡಳಿತ, ಅವರನ್ನೂ ಇನ್ನೂ ಕೆಲವು ಸೆರೆಯಾಳುಗಳನ್ನೂ ಕೂಡಲೇ ಪರಭಣಿ ಜೈಲುಗೆ ಸ್ಥಳಂತರಿಸಿದರು. ಮುಂದೆ ಹೈದರಬಾದ್ ಜೈಲಿಗೆ ಅಟ್ಟಿದರು. ಸರಕಾರ ಮತ್ತು ಆರ್ಯಸಮಾಜದ ಮುಖಂಡರ ನಡುವೆ ಸೌಹರ್ದಯುತ ಒಪ್ಪಂದವಾಗಿ, ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವುದೆಂದು ತೀರ್ಮಾನವಾಯಿತು.





## भागानगर निःशस्त्र-प्रतिकार

# प्रशस्तिपत्र

"ही हुत-पूजा भावी सकल हिंदु उत्थापनाचें केवळ सूतोवाच होते, ... हिंदु-संघटन-वादी ... [illegible] ... भागानगर हिंदुत्व ... सांस्कृतिक ... पुनः ... [illegible]."

सावरकर

श्रीयुत ... चंद्रशेखर पटेल ... जिल्हा गुलबर्गा (दक्षिण) यांस —

निजामी संस्थानांतील हिंदु जनतेवर ते केवळ हिंदु म्हणून होणाऱ्या अन्यायाविरुद्ध अखिल हिंदु राष्ट्राने निःशस्त्र प्रतिकाराचा संग्राम केला; त्या संग्रामांत आपण उडी घेऊन ... कारागृहवास भोगला, मारपीट सहन करून प्राणार्पणाहि ... केली नाहीं; ही गोष्ट आपणाला, आपल्या घराण्याला नि तदीय गांवकऱ्यांहि भूषणास्पद आहे. भावी कल्याण या गोष्टीचें नित्य स्मरण सर्वांना स्फूर्तिदायक व्हावें म्हणून हें प्रशस्ति-पत्र आपणाला देण्यात आलें आहे. या पुढेंहि हिंदुराष्ट्र, धर्म, संस्कृति नि समाज यांच्या उत्थापनासाठी होणाऱ्या प्रयत्नांत आपण कर्तव्य म्हणून यथाशक्ति कार्य कराल नि अशा प्रकारची बुद्धि, शक्ति नि सामर्थ्य परमेश्वर आपणांस देवो, अशी मी प्रार्थना करतो.

[illegible]

'ವಂದೇ ಮಾತರಂ' ಸತ್ಯಾಗ್ರಹದಲ್ಲಿ ಚಂದ್ರಶೇಖರರು ಭಾಗವಹಿಸಿದ ದ್ಯೋತಕವಾಗಿ ದೊರೆತ ಪ್ರಮಾಣಪತ್ರ

ಒಂಬತ್ತು ತಿಂಗಳ ಸೆರೆಮನೆ ವಾಸ ಅನುಭವಿಸಿದ ಚಂದ್ರಶೇಕರರು ತಮ್ಮ ಬದುಕಿನಲ್ಲಿ ಹೊಸ ಹುಟ್ಟು ಪಡೆದರು. ಪ್ರಪಂಚವನ್ನು ಇನ್ನಷ್ಟು ಕಂಡ ಅನುಭವದೊಂದಿಗೆ ಮಹಗಾಂವ್ ಗ್ರಾಮಕ್ಕೆ ಮರಳಿದರು.

'ವಂದೇ ಮಾತರಂ' ಸತ್ಯಾಗ್ರಹದಲ್ಲಿ ಚಂದ್ರಶೇಖರರು ಭಾಗವಹಿಸಿದ ದ್ಯೋತಕವಾಗಿ ಪ್ರಮಾಣಪತ್ರವೊಂದನ್ನು ಅವರಿಗೆ ಕೊಡಮಾಡಿದ್ದರು.

## ಮರಳಿ ಮನೆಗೆ

ಒಂಬತ್ತು ತಿಂಗಳ ಬಳಿಕ ತಮ್ಮ ಗ್ರಾಮಕ್ಕೆ ಮರಳಿದ ಚಂದ್ರಶೇಖರರ ವ್ಯಕ್ತಿತ್ವ ಪೂರ್ತಿ ಬದಲಾಗಿತ್ತು. ಹೇಳದೆ ಕೇಳದೆ ಊರುಬಿಟ್ಟು ಹೋದ ಮಗ ಮರಳಿ ಮನೆಗೆ ಬಂದಾಗ ಹೆತ್ತವರಿಗಾದ ಸಂತೋಷ ಅಷ್ಟಿಷ್ಟಲ್ಲ. ಹೊಸ ಸಮಕಲ್ಪ, ಹೊಸ ಧ್ಯೇಯ, ಹೊಸ ಆದರ್ಶಗಳೊಂದಿಗೆ ಮರಳಿದ ಮಗ ಇದೀಗ ಹೊಸದೇ ಗಾಂಭೀರ್ಯದಿಂದ ವರ್ತಿಸಲಾರಂಭಿಸಿದಾಗ, ಹೆತ್ತವರಿಗೆ ತಮ್ಮ ಜನ್ಮ ಸಾರ್ಥಕವಾಯಿತು ಎಂದನಿಸಿತು. ಒಂದೆಡೆ ತಮ್ಮ ಜನರಿಗಾಗುವ ಅನ್ಯಾಯಗಳ ವಿರುದ್ಧ ಹೋರಾಡುವ ಪ್ರವೃತ್ತಿ, ಇದೀಗ ಬ್ರಿಟಿಷ್ ಸಮ್ರಾಜ್ಯಶಾಹಿ ಮತ್ತು ನಿಜಾಮರ ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಟ – ಇವೆಲ್ಲ ಚಂದ್ರಶೇಖರರ ಕಡೆಗೆ ಊರ ಮಹನೀಯರ ಶ್ರದ್ಧೆ ದ್ವಿಗುಣಗೊಳ್ಳಲು ಕಾರಣವಾದವು. ಅಂದಿನ ಹುಡುಗಾಟದ ಚಂದ್ರಶೇಖರ ಎಲ್ಲಿ, ಇಂದಿನ ಗಂಭೀರ ಮನೋಭಾವದ ಚಂದ್ರಶೇಖರ ಎಲ್ಲಿ? ಎಲ್ಲರಲ್ಲೂ ಗೌರವಯುತ ಪೂಜ್ಯ ಭಾವನೆ ಮೂಡಿಸುವಲ್ಲಿ ಚಂದ್ರಶೇಖರರು ಕಾಯ, ವಾಚಾ, ಮನಸಾ ಶ್ರಮಿಸಿದ್ದರು ಎಂಬುದನ್ನು ನಾವು ಮನಗಾಣಬೇಕು.

ಗಾಂಧೀಜಿಯವರ ಅಹಿಂಸಾತ್ಮಕ ಚಳುವಳಿಯಲ್ಲಿ ಚಂದ್ರಶೇಖರರು ಅಚಲನಿಷ್ಠೆಯುಳ್ಳವರಾಗಿದ್ದರು. ಚಂದ್ರಶೇಖರರು ಅಪ್ರಚೋದಿತ ಹಿಂಸೆ, ಆಕ್ರಮಣ ಮತ್ತು ವಿವಿಧ ತೆರನದ ಕ್ರೌರ್ಯ ಕೃತ್ಯಗಳನ್ನು ಪ್ರತೀಕಾರವಿಲ್ಲದೆ ಮೌನವಾಗಿ

ಸಹಿಸಿಕೊಂಡು ಬಾಗಿ ನಡೆಯುವವರಾಗಿದ್ದಿರಲಿಲ್ಲ. ತಾವೇ ಯಾರ ಮೇಲೂ ಎತ್ತಿ ಹೋಗುವವರಲ್ಲ. ಆದರೆ ವಿನಾ ಕಾರಣ ತಮ್ಮ ಮೇಲೆ ಏರಿ ಬಂದವರನ್ನು ಸುಮ್ಮನೆ ಬಿಡುತ್ತಿರಲಿಲ್ಲ. ಆತ್ಮರಕ್ಷಣೆಗಾಗಿ ಒಂದು ಗುಂಪಿನ ಮೇಲೆ ನಡೆಯುವ ಅತ್ಯಾಚಾರ ಹಿಂಸಾಚಾರ ದೌರ್ಜನ್ಯಗಳನ್ನು ಕಣ್ಣಾರೆ ಕಂಡು, ಅಂತಹ ಸಮಾಜ ಕಂಟಕರನ್ನು ನಿಗ್ರಹಿಸುವ ಛಲ ಅವರಲ್ಲಿದ್ದಿತು. ಪೆಟ್ಟಿಗೆ ಪ್ರತಿ ಪೆಟ್ಟು, ಹಿಂಸೆಗೆ ಪ್ರತಿ ಹಿಂಸೆ ಪಾಪವಲ್ಲವೆಂದು ಭಾವಿಸಿದ್ದ ಅವರು ಅಂದಿನ ಅವರ ಈ ಧೋರಣೆಯು ಅನಿವಾರ್ಯ ಪರಿಸ್ಥಿತಿಯಾಗಿತ್ತು ಎನ್ನುತ್ತಿದ್ದರು.

## ಧರ್ಮಶ್ರದ್ಧೆಗೆ ಇಂಬು

ಜನರು ಪರಂಪರಾಗತವಾಗಿ ಆಚರಿಸುವಂಥ ಧಾರ್ಮಿಕ ಕಟ್ಟುಕಟ್ಟಳೆಗಳನ್ನು ನಿರಾತಂಕವಾಗಿ ಏಬ್ಬಿಸುವಂಥ ವಾತಾವರಣ ಸೃಷ್ಟಿಯಾದರೆ ಅದರಿಂದ ಸಮಾಜಕ್ಕೇ ಕ್ಷೇಮವೆಂದು ಅವರು ಭಾವಿಸಿದ್ದರು. ಧರ್ಮಶ್ರದ್ಧೆಯ ಮುಖಾಂತರ ಜನರಲ್ಲಿ ರಾಷ್ಟ್ರಾಭಿಮಾನ ಮತ್ತು ಸ್ವಾತಂತ್ರ್ಯದ ಅರಿವನ್ನು ಮೂಡಿಸಬಹುದೆಂದು ಅವರು ಅರಿತಿದ್ದರು. ಅಂತಹ ಒಂದು ಪ್ರಸಂಗ 1939ರಲ್ಲಿ ನಡೆಯಿತು.

ಮಹಗಾಂವ್‌ನಲ್ಲಿ ಅಕ್ಕಮಹಾದೇವಿಯವರ ಪಲ್ಲಕ್ಕಿ ಮಹೋತ್ಸವ ಸಂದರ್ಭದಲ್ಲಿ ಧಾರವಾಡ ನವಕಲ್ಯಾಣ ಮಠದ ಕುಮಾರ ಸ್ವಾಮಿಗಳ ಧಾರ್ಮಿಕ ಪ್ರವಚನ ಸಪ್ತಾಹವನ್ನು ಏರ್ಪಡಿಸಬೇಕೆಂಬ ಉತ್ಕಟೇಚ್ಛೆ ಅವರದ್ದಾಗಿತ್ತು. ಈ ಸುದ್ದಿ ಅಧಿಕಾರಿಗಳ ಕಿವಿಗೆ ಬಿತ್ತು. ಸರಕಾರ ಅಂತಹ ಕಾರ್ಯಕ್ರಮ ಏರ್ಪಡಿಸಬಾರದೆಂದು ಚಂದ್ರಶೇಖರರಿಗೆ ಪ್ರತಿಬಂಧಿಸಿ ಆಜ್ಞೆ ಹೊರಡಿಸಿತು. ಛಲಗಾರರಾದ ಚಂದ್ರಶೇಖರರು ಸೀದಾ ಜಿಲ್ಲಾಧಿಕಾರಿಗಳನ್ನೇ ಭೇಟಿ ಮಾಡಿ ವಸ್ತುಸ್ಥಿತಿಯನ್ನು ಅವರಿಗೆ ಮನದಟ್ಟುಮಾಡಿದರು. ತಾವು ಹಮ್ಮಿಕೊಂಡ ಕಾರ್ಯಕ್ರಮ ಅಪ್ಪಟವಾಗಿ ಧಾರ್ಮಿಕ ಸ್ವರೂಪದ್ದು, ಅದಕ್ಕೆ ರಾಜಕೀಯ ಸೋಂಕು ಎಳ್ಳಷ್ಟೂ ಇಲ್ಲ ಎಂಬ ಅಂಶವನ್ನು ಅವರಿಗೆ ಮನದಟ್ಟು ಮಾಡಿದರು ಚಂದ್ರಶೇಖರರು. ಅನುಮತಿ ದೊರೆಯಿತು. ಕುಮಾರ ಸ್ವಾಮಿಗಳ ಪ್ರವಚನ

ನಿರಾತಂಕವಗಿ ನೆರವೇರಿತು. ಧೈರ್ಯ, ದೃಢ ಸಂಕಲ್ಪ ಮತ್ತು ಪ್ರಾಂಜಲ ಮನಸ್ಸಿನಿಂದ ಕೈಗೊಂಡ ಯಾವುದೇ ಕಾರ್ಯಕ್ಕೂ ದೈವಬಲವಿರುತ್ತದೆ. ಮತ್ತು ಅಂತಹ ಕಾರ್ಯಕ್ರಮಗಳಿಗೆ ಸಾಮಾಜಿಕ ಸ್ವಾತಂತ್ರ್ಯದ ಹಕ್ಕು ಬಾಧತೆಗಳಿರುತ್ತವೆ ಎಂದು ಅವರು ಸರ್ವ ಜನತೆಗೆ ತೋರಿಸಿಕೊಟ್ಟರು. ಜನರಲ್ಲಿ ಅಪರ ಆತ್ಮ ವಿಶ್ವಾಸವನ್ನು ಮೂಡಿಸುವಲ್ಲಿ ಈ ಕಾರ್ಯಕ್ರಮ ಫಲಪ್ರದವಾಯಿತು.

## ರಜಾಕಾರರ ಹಾವಳಿ

ಈ ಸಂಧಿಕಾಲದಲ್ಲಿ ರಜಾಕಾರರ ಹಾವಳಿ ವಿಪರೀತವಾಗಿ ಬೆಳೆದಿತ್ತು. ಹಿಂದೂಗಳ ಸಾರ್ವಜನಿಕ ಉತ್ಸವಾದಿಗಳು ರಜಾಕರರ ದೆಸೆಯಿಂದಾಗಿ ಅಡೆತಡೆಗಳನ್ನು ಅನುಭವಿಸುತ್ತಿದ್ದವು. ಕಿಡಿಗೇಡಿಗಳು ಇಂತಹ ಸಂದರ್ಭಕ್ಕಾಗಿಯೇ ಹೊಂಚುಹಾಕಿ ಸಮಯದ ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಇಂತಹ ಸಂಕ್ರಮಣ ಕಾಲದಲ್ಲಿ ಚಂದ್ರಶೇಖರರಿಗೆ ಸವಾಲೊಂದನ್ನು ಎದುರಿಸುವ ಪ್ರಸಂಗ ಒದಗಿ ಬಂತು. ಪ್ರತಿ ವರ್ಷದಂತೆ ಮಕರ ಸಂಕ್ರಮಣ ದಿನದಿಂದ ಸುಮಾರು ಎರಡು ವಾರಗಳ ಪರ್ಯಂತ ಜರಗುವ ಹುಮನಾಬಾದ್ ಇತಿಹಾಸ ಪ್ರಸಿದ್ಧ ವೀರಭದ್ರೇಶ್ವರ ಜಾತ್ರಾಮಹೋತ್ಸವ ಸನ್ನಿಹಿತವಾಯಿತು. ಹುಮನಾಬಾದ್ ಪ್ರಂತ್ಯದ ಹತ್ತು ಹಲವಾರು ಹರದಾರಿ ದೂರದಿಂದಲೂ ಭಕ್ತಸಮೂಹ ನೆರೆಯುವ ಈ ಜಾತ್ರೆಗೆ ಒಂದು ವಿಶಿಷ್ಟವಾದ ಧಾರ್ಮಿಕ ನೆಲೆಯಿತ್ತು. ನಾಡಿನ ಲಕ್ಷಾಂತರ ಜನ ಸೇರುವ ಈ ವಿಜೃಂಭಣೆಯ ಉತ್ಸವ ರಜಾಕರರಿಂದ ತೊಂದರೆಗೆ ಈಡಾಗುವ ಸಂಭವವೇ ಹೆಚ್ಚು ಎಂದು ಭಾವಿಸಿದರು ಚಂದ್ರಶೇಖರರು. ಜಾತ್ರೆಯಲ್ಲಿ ಪಾಲ್ಗೊಂಡ ಜನರು ಸುರಕ್ಷಿತವಾಗಿ ತಮ್ಮ ತಾವನ್ನು ಸೇರುವುದು ಪ್ರಶ್ನಾರ್ಥವಾಗಿತ್ತು. ಈ ಸಂಬಂಧವಾಗಿ ಉತ್ಸವ ಸಮಿತಿ ಚಂದ್ರಶೇಖರರ ಅಭಿಪ್ರಾಯವನ್ನೂ ಸಲಹೆಯನ್ನೂ ಕೇಳಿತು. ಸಾರ್ವಜನಿಕ ಸೇವೆಗೆ ಇಂತಹ ಸದವಕಾಶ ಬೇರೊಂದಿಲ್ಲವೆಂದು ಮನಗಂಡ ಚಂದ್ರಶೇಖರರು ತಮ್ಮ ಸಂಗಡ ಇತರ ಗೆಳೆಯರನ್ನು ಒಗ್ಗೂಡಿಸಿ ಹುಮನಾಬಾದ್‌ಗೆ ತೆರಳಿದರು.

ಚಂದ್ರಶೇಖರರ ಬಳಗ ಹುಮನಬಾದ್ ತಲಪುವ ಸಮಯಕ್ಕೆ 'ಅಗ್ನಿ ಹಾಯುವ ಕಾರ್ಯಕ್ರಮ ಪ್ರಾರಂಭವಾಗಿತ್ತು. ಪವಿತ್ರಾಗ್ನಿಯಲ್ಲಿ ಹಾಯಲು ಬೇಡಿಕೊಂಡ ಭಾವುಕ ಭಕ್ತರು ಪಲ್ಲಕ್ಕಿಯ ಹಿಂದೆ ಸಾಗಿದ್ದರು. ಉತ್ಸವದ ಅಂದವನ್ನು ಕೆಡಿಸಲೆಂದೇ ಪಣತೊಟ್ಟು ಬಂದಿದ್ದ ಕಿಡಿಗೇಡಿಗಳು ಇದೇ ತಕ್ಕ ಸಮಯವೆಂದು ಕಲ್ಲು ತೂರತೊಡಗಿದರು. ಜನಜಂಗುಳಿಯಲ್ಲಿ ಸೇರಿಹೋಗಿದ್ದ ಭಕ್ತಾದಿಗಳಿಗೆ ಇದೊಂದು ಅನಿರೀಕ್ಷಿತ ವಿದ್ಯಮಾನ. ಒಟ್ಟು ಪರಿಸರದಲ್ಲಿ ಗೊಂದಲ ಏರ್ಪಟ್ಟು ಅವರೆಲ್ಲ ಅತ್ತಿತ್ತ ದಿಕ್ಕಾಪಾಲಾಗಿ ಓಡಲಾರಂಭಿಸಿದರು. ವಿಶ್ವನಾಥ ವಕೀಲರಿಗೆ ಕಲ್ಲೇಟು ಬಿದ್ದು ಅಲ್ಲೇ ಸ್ಮೃತಿ ತಪ್ಪಿ ಬಿದ್ದುಬಿಟ್ಟರು. ವಾತಾವರಣ ಉದ್ರಿಕ್ತವಾಗಿ, ಜನ ಅಸಹಾಯಕರಾಗಿ ಓಡತೊಡಗಿದರೂ, ಪೊಲೀಸರು ಮೂಕಪ್ರೇಕ್ಷಕರಾಗಿ ನಿಂತು ನೋಡುತ್ತಿದ್ದರು. ಚಂದ್ರಶೇಖರರು ಪೊಲೀಸರ ಜಾಯಮಾನ ತಿಳಿದು ತಕ್ಷಣ ಅವರು ಕಾರ್ಯಪ್ರವೃತ್ತರಾಗದಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ ಎಂದು ಅವರನ್ನು ಜರೆದರು. ಆತ್ಮರಕ್ಷಣೆಗಾಗಿ ತಮ್ಮ ಬಳಗ ಸದಾ ಕಾಡುವುದೆಂದೂ ಅವರಿಗೆ ಮನವರಿಕೆ ಮಾಡಿಕೊಟ್ಟರು. ಚಂದ್ರಶೇಖರರ ಮಾತನ್ನು ಆಲಿಸಿದ ಕಿಡಿಗೇಡಿಗಳು ತಾವಾಗಿಯೇ ಹಿಂದೇಟುಹಾಕಿ ಅಲ್ಲಿಂದ ಪಲಾಯನಗೈದರು. 'ಅಗ್ನಿಹಾಯುವ' ಕಾರ್ಯಕ್ರಮ ನಿರಾತಂಕವಾಗಿ ನೆರವೇರಿತು.

ಮರುದಿನದ ರಥೋತ್ಸವ ಕಾರ್ಯಕ್ರಮಕ್ಕೂ ಮುನ್ನಿನ ದಿನದ್ದೇ ಅವಸ್ಥೆ ಎದುರಾದಾಗಬಹುದೆಂದು ಭಾವಿಸಿದ ಚಂದ್ರಶೇಖರರು ಸೀದಾ ಊರಿಗೆ ಬಂದು, ಅಕ್ಕಪಕ್ಕದ ಹಳ್ಳಿಗಳಲ್ಲಿನ ಸ್ವಯಂ ಸೇವಕರನ್ನು ಕಳುಹಿಸಿ ಸಹಕರಿಸಬೇಕೆಂದು ಅಲ್ಲಿನ ಮುಖಂಡರಿಗೆ ಮನವಿ ಮಾಡಿಕೊಂಡರು. ಅವರ ನಿರೀಕ್ಷೆಯಂತೆ ಆಸುಪಾಸಿನ ಹಳ್ಳಿಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಸ್ವಯಂ ಸೇವಕರು ಜಾತ್ರಾಮಹೋತ್ಸವಕ್ಕೆ ಆಗಮಿಸಿದರು. ವೀರಭದ್ರೇಶ್ವರನ ಜಾತ್ರೆ ಸಾಂಗವಾಗಿ ನೆರವೇರುವಂತೆ ಚಂದ್ರಶೇಖರರ ಮುಂದಾಳ್ತನದಲ್ಲಿ ಅವರೆಲ್ಲ ಸನ್ನದ್ಧರಾದರು. ಈ ಸನ್ನಾಹದ ಸುದ್ದಿ ಕೇಳಿ ತಿಳಿಗೇಡಿ ಪುಂಡರು ತಮ್ಮ ಕಾಲುಗಳಿಗೆ ಬುದ್ದಿ ಹೇಳಿದರು. ಅಲ್ಲಿಂದ ಪಲಾಯನಗೈದರು. ಸ್ವಯಂ ಸೇವಕರ ಶಿಸ್ತಿನ ಮೇಲ್ವಿಚಾರಣೆಯಲ್ಲಿ ವೀರಭದ್ರೇಶ್ವರ ಜಾತ್ರೆ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಚಂದ್ರಶೇಖರ ಪಾಟೀಲರ ಬದುಕಿನಲ್ಲಿ ಇನ್ನೊಂದು ಮರೆಯಲಾಗದ ಘಟನೆ. ಅದೊಂದು ರವಿವಾರದ ದಿನ ಪುಂಡರ ಒಂದು ಗುಂಪು ಮಹಾಗಾಂವ್‌ನ ದಲಿತ ನಾಯಕ ದ್ಯಾವಪ್ಪನ ಮನೆಗೆ ನುಗ್ಗಿ ಅಲ್ಲಿನ ದವಸಧಾನ್ಯಗಳನ್ನು ಲೂಟಿಮಾಡಿ ಸೂರೆಗೊಂಡರು. ಕೇರಿಯಲ್ಲಿದ್ದ ಎಲ್ಲರು ಅಸಹಾಯಕರಾಗಿ ಈ ವಿದ್ಯಮಾನವನ್ನು ನೋಡುತ್ತ ನಿಂತರು. ಅದೇ ಪುಂಡರ ಗುಂಪು ಮದೋನ್ಮತ್ತರಾಗಿ ಗಲ್ಲಿಗಲ್ಲಿಗಳಲ್ಲಿ ಮನಸ್ಸಿಗೆ ಬಂದಂತೆ ಲೂಟಿಮಾಡುತ್ತ ಹುಯ್ಲೆಬ್ಬಿಸುತ್ತ ಸಾಗಿತು. ವಿನಾಕಾರಣ ಹರಿಜನನೊಬ್ಬನ ತಂಟೆಗೆ ಬಂದು ಊರಿಡೀ ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಿಸಿಬಿಟ್ಟಿದ್ದರು. ವಿಷಯ ತಿಳಿದಿದ್ದರೂ ಪೊಲೀಸರು ತೆಪ್ಪಗೆ ಕುಳಿತು ಸನ್ನಿವೇಶದ ಲಾಭ ಉಡಾಯಿಸಿದರು. ಇಂತಹ ಅನಪೇಕ್ಷಿತ , ದೌರ್ಜನ್ಯ, ಪೊಲೀಸರ ಉದ್ದೇಶಪೂರ್ವಕವಾದ ಉದಾಸೀನತೆ ಚಂದ್ರಶೇಖರರನ್ನು ರೊಚ್ಚಿಗೆಬ್ಬಿಸಿತು. ಸಾರ್ವಜನಿಕ ಬದುಕನ್ನು ಹೀಗೆ ಅನ್ಯಾಯಕ್ಕೆ ಒಡ್ಡಬೇಕಾದ ಪ್ರಸಂಗಗಳನ್ನು ಅವರು ಎಂದೂ ಸಹಿಸಿದವರಲ್ಲ. ಇಂತಹ ಸಂದರ್ಭಗಳಲ್ಲಿ ಪ್ರತಿಭಟನೆಯನ್ನು ಮಾಡದೇ ಹೋದರೆ ಪ್ರಾಯಶಃ ಊರಜನರ ಬಾಳ್ವೆ ದುಸ್ತರವಾದೀತೆಂದು ಬಗೆದ ಚಂದ್ರಶೇಖರರು ಮರುದಿನವೇ ತಮ್ಮ ಬಳಗವನ್ನು ಸಂಘಟಿಸಿ ಪ್ರತಿಭಟನೆಯನ್ನು ವ್ಯಕ್ತಪಡಿಸುವ ಸಲುವಾಗಿ ಸಾರ್ವಜನಿಕ ಮೆರವಣಿಗೆಯೊಂದನ್ನು ಹೊರಡಿಸಿದರು.

ಅಂದು ಊರಲ್ಲಿ ಸೋಮವಾರ ಸಂತೆ. ಆಸುಪಾಸಿನ ನೂರಾರು ಜನರು ನೆರೆದಿದ್ದರು. ಸಂಜೆಯ ಸುಮಾರಿಗೆ ಚಂದ್ರಶೇಖರರ ಮುಂದಾಳ್ತನದಲ್ಲಿ ಪ್ರತಿಭಟನೆಯ ಮೆರವಣಿಗೆ ಜಂಗಿನಮಠ, ಬಸವಣ್ಣನ ಗುಡಿಯ ಮುಂದೆ ಹಾಯ್ದು, ಪೊಲೀಸ್ ಠಾಣೆಗೆ ಹೋಗಲು ಅಣಿಯಾಯಿತು. ಭಾರತಮಾತೆ ಮತ್ತು ಮಹಾತ್ಮಾಗಾಧೀಜಿಯವರ ಕುರಿತಂತೆ ಜಯಘೋಷಗಳು ಮುಗಿಲು ಮುಟ್ಟಿದವು. ರಜಾಕಾರರ ವಿರುದ್ಧದ ಘೋಷಣೆಗಳು ಕೇಳಿಬಂದವು. ಮೆರವಣಿಗೆ ಸುಸೂತ್ರವಾಗಿ ಸಾಗಿದರೆ ತಮಗೆ ಅವಮಾನವೆಂದು ಬಗೆದ ಪುಂಡರು ಅದನ್ನು ತಡೆಗಟ್ಟಲು ಸಾಲಾಗಿ ನಿಂತರು. ಸಂತೆಯಲ್ಲಿ ಸೇರಿದ ಜನರ ಮೇಲೆ ಕಲ್ಲುತೂರಾಟ ನಡೆಸಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗುವಂತೆ ಏರ್ಪಡಿಸಿದರು. ಮೆರವಣಿಗೆಯಲ್ಲಿ

ಪಾಲ್ಗೊಂಡ ಜನರ ಮೇಲೆ ಕಲ್ಲುಗಳನ್ನು ಎಸೆದರು. ಗಡಿಬಿಡಿಯಿಂದ ಜನರೆಲ್ಲ ದಿಕ್ಕಾಪಾಲಾಗಿ ಓಡಲಾರಂಭಿಸಿದರು. ಎರಡೂ ಗುಂಪುಗಳ ನಡುವೆ ಮಾರಾಮಾರಿಯಾಯಿತು. ಉದ್ರಿಕ್ತವಾದ ಗುಂಪುಗಳು ಹಿಂಸಾಚಾರಕ್ಕೆ ಮೊದಲು ಮಾಡಿದಾಗ ಪೊಲೀಸರ ಆಗಮನವಾಯಿತು. ಜನಜಂಗುಳಿಯನ್ನು ಓಡಿಸಿ ಬಡಿದಾಟಕ್ಕೆ ಕರಣರಾದವರನ್ನು ಬಂಧಿಸುವ ನೆಪವೊಡ್ಡಿ ಚಂದ್ರಶೇಖರರನ್ನೂ ಅವರ ನಿಕಟವರ್ತಿಗಳಾದ ಹತ್ತಿ ಬಂಧುಗಳನ್ನೂ, ವಿರೂಪಾಕ್ಷ ವೀರಶೆಟ್ಟಿ, ದ್ಯಾವಪ್ಪ ಹರಿಜನ ಉಚ್ಛೇದ ಶಿವಶರಣಪ್ಪ ಮೊದಲಾದವರನ್ನೂ ಬಂಧಿಸಿ ಗುಲಬರ್ಗಾ ಜೈಲಿಗೆ ಒಯ್ದರು. ಗಲಭೆಗೆ ಕಾರಣರಾದವರನ್ನು ಮಾತ್ರ ಬಂಧಿಸಲಿಲ್ಲ.

## ಅನಂತ ಆತ್ಮಾಭಿಮಾನಿ

ಅದೇ ಕಾಲಕ್ಕೆ ಚಂದ್ರಶೇಖರರ ತಮ್ಮ ನೀಲಕಂಠರ ಮದುವೆ ನಿಶ್ಚಯವಾಗಿತ್ತು. ಮದುವೆ ಕೋಲಾಪುರದಲ್ಲಿ ನಡೆಯುವುದೆಂದು ತಿಳಿಯಲಾಗಿತ್ತು. ಚಂದ್ರಶೇಖರರು ಮದುವೆಯಲ್ಲಿ ಭಾಗವಹಿಸುವಂತೆ 'ಜಮಾನತ್' ಮೇಲೆ ನಾಲ್ಕಾರು ದಿನಗಳ ಮಟ್ಟಿಗೆ ಬಿಡುಗಡೆ ಮಾಡಬೇಕೆಂಬ ವಕೀಲ ರಾಮ್‌ಕಿಶನ್ ರಾವ್ ಮನವಿ ಫಲಕರಿಯಾಗದೇ ಹೋಯಿತು. ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲವೆಂದು ಲಿಖಿತ ಭರವಸೆ ಕೊಟ್ಟಾಗ ಮಾತ್ರವೇ 'ಜಮಾನತ್' ಮೇಲೆ ಬಿಡುಗಡೆಮಾಡಲಾಗುವುದೆಂಬ ಆದೇಶ ಸರಕರದಿಂದ ಬಂತು. ತಮ್ಮ ಆತ್ಮಾಭಿಮಾನ ಮತ್ತು ಆತ್ಮಗೌರವದಲ್ಲಿ ಅಚಲ ವಿಶ್ವಾಸವಿಟ್ಟಿದ್ದ ಚಂದ್ರಶೇಖರರು, ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲಾರೆನೆಂದು ಎಂದಾದರೂ ಲಿಖಿತ ಹೇಳಿಕೆ ನೀಡಲಾದೀತೇ? ತಮ್ಮನ ಮದುವೆಯ ನಿಶ್ಚಿತಾರ್ಥವಾದಂತೆ ಸುಗಮವಾಗಿ ನೆರವೇರಲೆಂದು ಅಲ್ಲಿಂದಲೇ ತಮ್ಮ ಹಾರೈಕೆಯನ್ನು ಕಳುಹಿಸಿದರು.

## ವಿನಾಕಾರಣ ಚಿತ್ರಹಿಂಸೆ

ಅಂದಿನ ಸರಕಾರ 'ಕೊಡಲಿ ಬರಾಮತ್' ಎಂಬ ಹೊಸ ಆಜ್ಞೆಯನ್ನು ಹೊರಡಿಸಿತು. ನಾಗರಿಕರು ಶಸ್ತ್ರಾಸ್ತ್ರಗಳನ್ನು ಹೊಂದಿರುವುದು ಕಾನೂನು ಪ್ರಕಾರ

ಶಿಕ್ಷಾರ್ಹವೆನ್ನುವ ಈ ಕಾನೂನು ಚಂದ್ರಶೇಖರ ಪಾಟೀಲರ ವಿರುದ್ಧವೇ ಹೊರಡಿಸಲಾಗಿತ್ತೋ ಎನ್ನುವಷ್ಟರ ಮಟ್ಟಿಗೆ ಪ್ರಬಲವಾಗಿತ್ತು. ಚಂದ್ರಶೇಖರರು ತಮ್ಮ ಮಹಾಗಾಂವ್‌ನ ಮನೆಯಲ್ಲಿ ಅಕ್ರಮವಾಗಿ ಕೊಡಲಿಯನ್ನು ಇಟ್ಟುಕೊಂಡಿದ್ದಾರೆ ಎಂಬ ನೆಪವೊಡ್ಡಿ ಅವರನ್ನು ಗುಲಬರ್ಗಾದಿಂದ ಮಹಾಗಾಂವ್‌ಗೆ ಪಹರೆಯಲ್ಲಿ ಒಯ್ಯುವ ಸಂದಿಗ್ಧ ಪರಿಸ್ಥಿತಿಯನ್ನು ಹುಟ್ಟುಹಾಕಲಾಯಿತು. ಕೈಕಾಲುಗಳಿಗೆ ಭಾರವಾದ ಬೇಡಿ ತೊಡಿಸಿ ಕಾಲ್ನಡಿಗೆಯಲ್ಲಿ ಕರೆದೊಯ್ಯಲಾಯಿತು. ಇದು ಅವರ ಆತ್ಮಗೌರವಕ್ಕೆ ಕುಂದು ನೀಡುವಂಥ ಪ್ರಸಂಗವೇ ಆಯಿತು. ವಸ್ತುಶಃ ಅವರನ್ನು ಬೀದಿಯಲ್ಲಿ ಕೋಳ ತೊಡಿಸಿ ಮೆರವಣಿಗೆಯನ್ನೇ ಮಾಡಿದಂತಾಗಿತ್ತು. ಇಂತಹ ಅನೇಕ ಚಿತ್ರಹಿಂಸೆಯ ಪ್ರಕರಣಗಳು ಅವರಿಗೆ ಎದುರಾದವು. ನಿಜ ಹೇಳಬೇಕಂದರೆ, ಕಟ್ಟಾ ದೇಶಾಭಿಮಾನಿ ಚಂದ್ರಶೇಖರರನ್ನು ಬೇಡಿತೊಡಿಸಿ ಬಹಿರಂಗವಾಗಿ ರಸ್ತೆಯಲ್ಲಿ ಒಯ್ದರೆ ಅದನ್ನು ಕಂಡ ಜನರು ಮುಂದೆ ಅವರಂತೆ ಸರಕಾರದ ವಿರುದ್ಧ ಹೋರಾಡಲಾರರೆಂಬುದು ಅಧಿಕಾರಿಗಳ ಆಶಯವಾಗಿದ್ದಿತು. ಜತೆಗೆ ಚಂದ್ರಶೇಖರರನ್ನು ಹೀಗೆ ಮೆರವಣಿಗೆ ಮಾಡಿ ಅಪಮಾನ ಮಾಡಬೇಕೆಂಬ ಉದ್ದೇಶವೂ ಅವರಲ್ಲಿತ್ತು.

ತಮ್ಮ ಮನೆಯಲ್ಲಿ ಬಚ್ಚಿಟ್ಟಿದ್ದ 'ಪರಶುಗೊಡಲಿ'ಯನ್ನು ಅವರು ಕೊಡಲೊಪ್ಪಲಿಲ್ಲ. ಹಾಗೊಮ್ಮೆ ಅವರು ಅದನ್ನು ಕೊಟ್ಟಿದ್ದರೆ ತಾವು ಇಂತಹ ನೀತಿಗೆ ಶರಣಾಗಿ ಸೋತಂತೆ ಎಂದು ಅವರು ಭಾವಿಸಿದ್ದರು. ಮನೆಯ ಜಪ್ತಿ ಮಾಡಿದ ಪೊಲೀಸರು ತಮ್ಮ ಮರ್ಯಾದೆಯ ಮುಖವುಳಿಸಿಕೊಳ್ಳುವ ಸಲುವಾಗಿ ಅಲ್ಲಿಯೇ ಅಂಗಳದಲ್ಲಿ ಬಿದ್ದಿದ್ದ ಒಕ್ಕಲುತನಕ್ಕೆ ಬಳಸುವ ಕೊಡಲಿಯೊಂದನ್ನು ಎತ್ತಿಕೊಂಡು ಹೋದರಂತೆ. ಈ ಕುರಿತು ತಮ್ಮ ಪ್ರತ್ಯಕ್ಷ ಸಾಕ್ಷಿಯನ್ನು ಅವರ ಪತ್ನಿ ಲಲಿತಾಬಾಯಿಯವರು ಗದ್ಗದಿತರಾಗಿ ಉಸುರಿದ್ದು ಹೀಗೆ:

"ಹಿಂದೆ ರಜಾಕಾರರ ಕಾಲ್ದಾಗ, ಇಲ್ಲಿ ಗುಲಬರ್ಗಾ ಜೇಲಿನಾಗ ಅವರನ್ನ ಇಟ್ಟಿದ್ರು... ರಜಾಕಾರರ ಆಳ್ವಿಕೆಯಾಗ ಭಾಳಾ ಕಷ್ಟ.. ಬಹಳಷ್ಟು ತ್ರಾಸ ...ಕಾಲ್ಯಾಗ ಬೇಡಿ, ಕೈಯಾಗ್ ಬೇಡಿ ಎಲ್ಲಾ ಹಾಕಿದ್ರು..."

## ಸಂಘಟನಾ ಕರಾಮತ್ತು

ಚಂದ್ರಶೇಖರ ಪಾಟೀಲರು ಗುಲಬರ್ಗಾ ಜೇಲಿನಿಂದ ಬಿಡುಗಡೆ ಆದ ಮೇಲೆ ರಜಾಕಾರರ ವಿರುದ್ಧ ತೀವ್ರವಾಗಿ ಹೋರಾಡುವ ಪಣತೊಟ್ಟರು. ಭರ್ಚಿ, ಬಂದೂಕು ಮುಂತಾದ ಶಸ್ತ್ರಾಸ್ತ್ರಗಳ ಶೇಖರಣೆಗೂ ಅವರು ಹಿಂಜರಿಯಲಿಲ್ಲ. ಹೈದರಾಬಾದ್ ಪ್ರಾಂತ್ಯದಲ್ಲಿ ಶ್ರೀ ಅಣ್ಣಾರಾವ್ ಗುಣಮುಖಿ, ಸ್ವಾಮಿ ರಮಾನಂದ ತೀರ್ಥ ಮೊದಲಾದವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ವ್ಯಾಪಕವಾದ ಸ್ವಾತಂತ್ರ್ಯ ಸಂಗ್ರಾಮವನ್ನು ಆರಂಭಿಸಿತ್ತು. ಮತ್ತೆ ಮತ್ತೆ ಬಂಧನಕ್ಕೆ ಒಳಗಾಗಿದ್ದ ಚಂದ್ರಶೇಖರ ಪಾಟೀಲರು ಉದ್ವಿಗ್ನಗೊಂಡಿದ್ದರು. ಊರಿಗೆ ಮರಳಿದ ತಕ್ಷಣ ತಮ್ಮ ಸಂಘಟನಾ ಕಾರ್ಯಕ್ರಮಕ್ಕೆ ಮತ್ತೆ ಚಾಲನೆ ನೀಡಿದರು. ರಜಾಕಾರರಿಗೆ ಪಾಟೀಲರ ಸಂಘಟನಾ ಕರಾಮತ್ತು ತಿಳಿಯಲು ಹೆಚ್ಚು ಸಮಯ ಹಿಡಿಯಲಿಲ್ಲ. ಅವರನ್ನು ಹಿಡಿದು ಕೊಂದು ಹಾಕಬೇಕೆಂದೇ ಅವರು ಸಂಚು ಹೂಡಿದರು. ಆದರೆ ಅವರ ಲೆಕ್ಕಾಚಾರಗಳೆಲ್ಲ ಬುಡಮೇಲಾದವು. ಸುತ್ತಮುತ್ತಲ ಹಳ್ಳಿಗಳಿಗೆ ಮಾರ್ಗದರ್ಶಕರಂತಿದ್ದ ಚಂದ್ರಶೇಖರರನ್ನೂ ಅವರ ನಿಕಟವರ್ತಿಗಳನ್ನೂ ಅವರವರ ಮನೆಗಳಲ್ಲೇ ಸೀಮೆ ಎಣ್ಣೆ ಸುರಿದು ಸುಟ್ಟುಬಿಡಬೇಕೆಂಬ ಮಸಲತ್ತು ಮಾಡಿ ರಜಾಕಾರರು ಮಹಾಗಾಂವ್‌ನತ್ತ ಸಾಗಿದರು. ಈ ವಿಷಯ ಅರಿತ ಊರ ಹಿರಿಯರು ಚಂದ್ರಶೇಖರ ಪಾಟೀಲರನ್ನೂ ಸಂಘದ ಸದಸ್ಯರನ್ನೂ ಊರುಬಿಟ್ಟು ದೂರಕ್ಕೆ ಹೊರಟು ಹೋಗುವಂತೆ ಪ್ರೇರೇಪಿಸಿದರು.

## ಎಲ್ಲೆಲ್ಲೂ ಹಾಹಾಕಾರ

ಅದಾಗಲೇ ರಜಾಕಾರರ ಹಾವಳಿಯಿಂದ ಕಂಗೆಟ್ಟ ಜನರು ಪ್ರಾಣಭಯದಿಂದ ಮನೆಮಠ ತೊರೆದು ನೆರೆಹೊರೆಯ ರಾಜ್ಯಗಳಿಗೆ ವಲಸೆಹೋಗಲು ಪ್ರಾರಂಭಿಸಿದ್ದರು. ಕೊಳ್ಳಿ, ಕೊಲೆ ಲೂಟಿ ನಿತ್ಯದ ಹಾಡಾಗಿದ್ದವು. ರಾಜಮಾರ್ಗಗಳು ಅಸುರಕ್ಷಿತವಾದವು. ಒಳನಾಡಿನ ರಸ್ತೆಗಳು ಇನ್ನಷ್ಟು ಗುರುತರ ಅಪಾಯಕ್ಕೆ ತೆರೆದುಕೊಂಡಿದ್ದವು. ಬೀದರ್ ಜಿಲ್ಲೆಯಲ್ಲಂತೂ ಹಿಂಸಾ ಕೃತ್ಯಗಳು

ವಿಪರೀತವಾದವು. ಗೋರಟಾ. ಹಿಲಲಪು ಮತ್ತು ಮಂಗಲಗಿ ಗ್ರಾಮಗಳಲ್ಲಿ ಹಿಂಸೆಯ ಸ್ವರೂಪ ಇನ್ನೂ ಗಂಭೀರವಾಗಿದ್ದವು. ಸ್ತ್ರೀಯರ ಅಪಹರಣ, ಮಾನಭಂಗ, ಲೂಟಿ ಕೊಲೆ ಮುಂತಾದ ರಾಕ್ಷಸೀ ಕೃತ್ಯಗಳು ಅವ್ಯಾಹತವಾಗಿ ನಡೆದವು. ಮಂಗಲಗಿ ಗ್ರಾಮ ವಸ್ತುಶಃ ಭಸ್ಮೀಭೂತವಾಯಿತು. ಜನರ ಕೈಬೆರಳುಗಳಿಗೆ ಬಟ್ಟೆ ಸುತ್ತಿ ಎಣ್ಣೆ ಸುರುವಿ ಬೆಂಕಿ ಹಚ್ಚಿದರು. ಮುಗ್ಧ ಶಿಶುಗಳನ್ನು ಬಲಿಗೊಟ್ಟರು. ಮತೀಯ ದ್ವೇಷಕ್ಕೆ ಹೆಸರಾದ ಗುಲಬರ್ಗಾದ ಆಳಂದದಲ್ಲೂ ಇವೇ ಕೃತ್ಯಗಳು ನಡೆದವು. ಗಣಪತಿ ಉತ್ಸವವಾಗಲೀ ಮೇಘಾ ಡಂಬ್ರಿ ಮೆರವಣಿಗೆಗೆಗಳಾಗಲೀ ನಿರಾತಂಕವಾಗಿ ನಡೆಯುತ್ತಲೇ ಇರಲಿಲ್ಲ. ಒಂದು ಸಂದರ್ಭದಲ್ಲಿ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವಕ್ಕಾಗಿ ಹಾಕಿದ ಚಪ್ಪರವನ್ನು ಸುಟ್ಟುಹಾಕಲಾಯಿತು. ಇನ್ನೊಂದು ಸನ್ನಿವೇಶದಲ್ಲಿ ರಜಾಕಾರರು ಹದಿನೇಳು ಜನರನ್ನು ಎಳೆದೊಯ್ದು 'ಡೋಗಿ ಬನ'ದಲ್ಲಿ ಗುಂಡಿಕ್ಕಿ ಸಾಯಿಸಿದರು. ಬೀದರ್ ಜಿಲ್ಲೆಯಲ್ಲಿ ನಡೆದ ಹತ್ಯಾಕಾಂಡ ಮಿತಿ ಮೀರಿ ದೇಶಾದ್ಯಂತ ಸುದ್ದಿ ಮುಟ್ಟಿಸಿದಲ್ಲದೆ ವಿನೋಬ ಭಾವೆಯವರಂಥ ರಾಷ್ಟ್ರೀಯ ನೇತಾರರು ಗೋರಟಾ ಗ್ರಾಮಕ್ಕೆ ಭೇಟಿ ನೀಡಿ ಜನರನ್ನು ಸಂತೈಸುವವರೆಗೆ ಮುಂದುವರಿಯಿತು. ಜಹಗೀರಲ್ಲಿ ಕೆಲಸಮಡುತ್ತಿದ್ದ ಪೋಲೀಸರನೇಕರು ನಿಷ್ಕ್ರಿಯರಾದರೂ ಅವರಲ್ಲಿನ ಪೋಲೀಸ್ ಅಧಿಕಾರಿ ಫತ್ತೇ ಅಲಿ ಎಂಬುವರು ಹಿಂದೂ ಜನರ ಸಂಕಷ್ಟಕ್ಕೆ ನೆರವಾದುದಲ್ಲದೆ ಅವರಿಗೆ ರಕ್ಷಣೆ ಕೊಡುವ ಕುರಿತು ಸರಕಾರಕ್ಕೆ ವರದಿ ಸಲ್ಲಿಸಿದರು. ಇದರಿಂದ ರೊಚ್ಚಿಗೆದ್ದ ಮುಸಲ್ಮಾನರು ಫತ್ತೇಅಲಿಯನ್ನು ಗುಂಡಿಕ್ಕಿ ಕೊಂದರು. ಬೀದರ್ ಜಿಲ್ಲೆಯಲ್ಲಿ ನಡೆದ ಅಮಾನುಷ ಕೃತ್ಯಗಳು ಚಂದ್ರಶೇಖರರಿಗೆ ಮತ್ತಷ್ಟು ಸ್ಥಾಯೀ ಸರಕಾರದ ವಿರುದ್ಧ ಸಿಡಿದೇಳುವಂತೆ ಪ್ರಚೋದಿಸಿತು.

## ಕುಟುಂಬ ಸಹಿತ ವಲಸೆ

ರಜಾಕಾರರ ಒಂದು ಕಣ್ಣು ಚಂದ್ರಶೇಖರರ ಮೇಲೆಯೇ ಕೇಂದ್ರೀಕೃತವಾಗಿತ್ತು. ಸಮಯ ಸನ್ನಿವೇಶ ಒದಗಿದಾಗ ಅವರನ್ನು ಬಲಿಗೊಡಬೇಕೆಂಬ ರಜಾಕಾರರು ತಮ್ಮ ಯಾದಿಯಲ್ಲಿ ಸೂಚಿಸಿಕೊಂಡಿದ್ದರು. ಇದೇ ವೇಳೆ ಊರ ಹಿರಿಯರು ಚಂದ್ರಶೇಖರರು ಊರಲ್ಲಿ ಉಳಿಯಬಾರದೆಂಬ

ತೀರ್ಮಾನಕ್ಕೆ ಬಂದರು. ಕೊನೆಗೂ ಚಂದ್ರಶೇಖರರು ತಮ್ಮ ಕುಟುಂಬ ಸಮೇತರಾಗಿ ಸೊಲ್ಲಾಪುರಕ್ಕೆ ವಲಸೆಹೋದರು.

ಮಹಾಗಾಂವ್‌ನಂತೆ ಸುತ್ತಮುತ್ತಲ ಅನೇಕ ಹಳ್ಳಿಗಳು ನಿರ್ಜನವಾಗತೊಡಗಿದವು. ಜೀವವುಳಿಸಿಕೊಳ್ಳುವ ಒಂದೇ ಒಂದು ಆಸೆಯಿಂದ ಜನರೆಲ್ಲ ಇದ್ದುದನ್ನೆಲ್ಲ ಅಲ್ಲಲ್ಲೆ ಬಿಟ್ಟು ಉಟ್ಟಬಟ್ಟೆಯಲ್ಲೆ ತೆರಳಿದರು. ಊರು ಬಿಟ್ಟವರು ಗಡಿಯಾಚೆಗಿನ ತಮ್ಮ ಸಂಬಂಧಿಕರ ಮನೆಗಳಲ್ಲೋ, ಗಡಿಭಾಗಗಳಲ್ಲಿ ತೆರೆಯಲಾಗಿದ್ದ ನಿರಾಶ್ರಿತರ ಶಿಬಿರಗಳಲ್ಲೋ ವಾಸ್ತವ್ಯ ಹೂಡಲು ಅಣಿಯಾದರು. ಮನೆಯಲ್ಲಿ ಕೂಡಿಟ್ಟ ಧವಸ ಧಾನ್ಯ, ಬೆಲೆಬಾಳುವ ವಸ್ತುಗಳು ಎಲ್ಲವೂ ರಜಾಕಾರರ ಪಾಲಾದವು. ಚಂದ್ರಶೇಖರರ ಕುಟುಂಬ ಸೊಲ್ಲಾಪುರದ ಮಂಗಳವಾರ ಪೇಟೆಯಲ್ಲಿ ಪ್ರಸಿದ್ಧ ವ್ಯಾಪಾರಿಗಳಾದ ಬಿರಾದಾರ ಬಂಧುಗಳ ನಿಕಟ ಸಂಪರ್ಕದಲ್ಲಿ ತಮ್ಮ ಆಶ್ರಯ ಕಂಡಿತು.




ವಲಸೆಗೆ ತುತ್ತಾದ ಚಂದ್ರಶೇಖರ ಪಾಟೀಲರು


ವಲಸೆ ಬಂದ ಜನತೆಯ ನೆರವಿಗೆ 'ಹೈದರಾಬಾದ್ ನಿರ್ವಸಿತ ಸಹಾಯಕ ಸಮಿತಿ'ಯೊಂದನ್ನು ಶ್ರೀಮತಿ ಬಾಬಾಸಾಹೇಬ ವಾರದ ಅವರ ಅಧ್ಯಕ್ಷತೆಯಲ್ಲಿ ತೆರೆಯಲಾಗಿತ್ತು. ಚಂದ್ರಶೇಖರರು ಸಮಿತಿಯ ಸಂಪರ್ಕದಲ್ಲಿ ದ್ದು ಅಲ್ಲಿ ಅವರಿಗೆ ಸಕ್ರಿಯವಾಗಿ ಕಾರ್ಯಪ್ರವೃತ್ತರಾಗಿದ್ದ ಪ್ರಭುರಾವಜಿ ಉದಗೀರ, ಬಿ.ಆರ್.ಬಿಡಪ್ಪ, ಸಿದ್ಧಪ್ಪ ಖೇಳಗಿ, ಕಲ್ಯಾಣ ರಾವ್ ಮರಗುತ್ತಿ, ವೀರೇಂದ್ರ ಪಾಟೀಲ, ಕೋಳೂರು ಮಲ್ಲಪ್ಪ ಮೊದಲಾದ ಸ್ವಾತಂತ್ರ್ಯ ಹೋರಾಟಗಾರರು ಮತ್ತು ರಾಜಕೀಯ ಕಾರ್ಯಕರ್ತರ ಸ್ನೇಹ ಸುಲಭವಾಗಿ ದೊರೆಯಿತು.

## ನಿರಾಶ್ರಿತರ ಗಡಿಶಿಬಿರ

ಚಂದ್ರಶೇಖರರು ತಮ್ಮ ಸ್ನೇಹಿತರೊಂದಿಗೆ ಮೇಲಿಂದ ಮೇಲೆ ಮ್ಯೆದರಗಿ ಶಿಬಿರಕ್ಕೆ ಭೇಟಿ ಕೊಡುತ್ತಿದ್ದರು. ಇತರ ಶಿಬಿರಗಳಿಗೂ ತೆರಳಿ ಅಲ್ಲಿನ ಪರಿಸ್ಥಿತಿಯನ್ನು ಅರಿತುಕೊಳ್ಳುತ್ತಿದ್ದರು.



ನಿರಾಶ್ರಿತರ ಗಡಿಶಿಬಿರ



ಗಡಿಶಿಬಿರದ ಸಂಘಟನೆಯಲ್ಲಿ ತಮ್ಮ ಸಂಗಡಿಗರೊಂದಿಗೆ ಪಾಟೀಲ್

ದೇಶ ಸ್ವತಂತ್ರವಾದರೂ, ಹೈದರಾಬಾದ್ ಭಾಗ ಸ್ವತಂತ್ರವಾಗದೆ ಅತಂತ್ರ ಸ್ಥಿತಿಯಲ್ಲಿದ್ದು, ಮನೆಮನೆ ತೊರೆದು ಶಿಬಿರಗಳಲ್ಲಿ ವಾಸಮಾಡುವ ಪರಿಸ್ಥಿತಿ ಬಂದೊದಗಿದ್ದನ್ನು ಕಂಡು ಚಂದ್ರಶೇಖರರು ಮರುಗಿದರು. ಮುಂದಿನ ಆರು ತಿಂಗಳು ನಿಜಾಮ್ ಪ್ರಾಂತದ ತುಂಬೆಲ್ಲ ರಜಾಕಾರರ ಅಮನುಷ ಕೃತ್ಯಗಳಿಂದ ಹಹಾಕರವೆದ್ದಿತು. ಮಲ್ಲಿಕಾರ್ಜುನ ತೋಡಕರಿಯವರಂಥ ಸಮಚಿತ್ತದ ರಾಜಕರಣಿಗಳೂ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಹೋರಾಟದ ಮುಖ್ಯ ವಾಹಿನಿಯಲ್ಲಿ ಸೇರ್ಪಡೆಗೊಂಡರು. ಇದಾದ ಮೂರು ದಿನಗಳ ನಂತರ, ಸೆಪ್ಟೆಂಬರ್ 17, 1948ರ ರಾತ್ರಿ ಸರದಾರ ವಲ್ಲಭಾಯಿ ಪಟೇಲರು ಹೈದರಾಬಾದ್ ಮತ್ತು ಪ್ರಮುಖ ಪಟ್ಟಣಗಳ ಮೇಲೆಲ್ಲ ಹಠಾತ್ತನೆ ಪೊಲೀಸ್ ಕಾರ್ಯಾಚರಣೆಯನ್ನು ಕೈಗೊಂಡರು. ಭಾರತದ ಸೇನಾಪತಿಗಳು ಜನರಲ್ ಚೌಧುರಿಯವರ ನೇತೃತ್ವದಲ್ಲಿ ಹೈದರಾಬಾದ್‌ನ್ನು ವಶಪಡಿಸಿಕೊಂಡರು. ರಜಾಕಾರರ ಸಂಘಟಕನಾಗಿದ್ದ 'ಕಾಸಿಂ ರಿಜ್ವಿ' ಕೆಲವು ನಿಕಟವರ್ತಿಗಳ ಸಹಿತ ಪಾಕಿಸ್ತಾನಕ್ಕೆ ಪಲಾಯನಗೈದ. ನಿಜಾಮ ಪ್ರಾಂತ ಭಾರತದ ಒಕ್ಕೂಟದಲ್ಲಿ ವಿಲೀನವಾಯಿತು.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಒಂದು ವರ್ಷ ಒಂದು ತಿಂಗಳು ಮತ್ತು ಒಂದು ದಿನದ ಮರುದಿನ ಹೈದರಾಬಾದ್ ಪ್ರಾಂತ್ಯ ಸ್ವತಂತ್ರವಾಯಿತು. ಈ ಭಾಗದಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಲು ಸಿದ್ಧತೆಗಳಾದವು.

ಚಂದ್ರಶೇಖರ ಪಾಟೀಲರು ಮಹಾಗಾಂವ್‌ಕ್ಕೆ ಬಂದ ನಂತರ ಬೃಹತ್ತಾದ ಸಭೆಯೊಂದನ್ನು ಕರೆದು ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಿದರು. ಆಬಾಲವೃದ್ಧರು ಈ ಸಂಭ್ರಮದಲ್ಲಿ ಪಾಲ್ಗೊಂಡರು. ಸ್ವತಂತ್ರರಾದ ಹುರುಪಿನಲ್ಲಿ, ಚಂದ್ರಶೇಖರರು ನವಚೈತನ್ಯದೊಂದಿಗೆ ಓಡಾಡಿದರು.

## ಹುತಾತ್ಮ ಅಪ್ಪಾ ರಾವ್

ಚಂದ್ರಶೇಖರ ಪಾಟೀಲರು ಮಹಗಾಂವ್‌ಗೆ ಮರಳಿದ ಬಳಿಕ ಬೃಹತ್ ಸಭೆಯೊಂದನ್ನು ಆಯೋಜಿಸಿ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಿದರು. ಆದರೆ ಅದೇ ವೇಳೆ ರಜಾಕಾರರ ಚಟುವಟಿಕೆಗಳ ಕೇಂದ್ರಗಳನ್ನು ಮಟ್ಟ ಹಾಕುವ ಇನ್ನೊಂದು ತುರ್ತಾದ ಕೆಲಸದ ನಿಮಿತ್ತ ತಮ್ಮನ್ನು ತೊಡಗಿಸಿಕೊಳ್ಳಬೇಕಾದ ಪ್ರಮೇಯ ಒದಗಿ ಬಂತು. ಗೌಡಗಾಂವ್ ಶಿಬಿರದಲ್ಲಿ ಸಾಹಸವನ್ನು ಮೆರೆದು ಈ ಭಾಗದ ಹಳ್ಳಿಗಳ ಪರಿಚಯವನ್ನು ಹೊಂದಿದ್ದ ಅಪ್ಪಾರಾವ್ ಪಟೀಲರು ಚಂದ್ರಶೇಖರ ಪಾಟೀಲರನ್ನು ಕೂಡಿಕೊಂಡು ಅವರ ನೆರವಿನ ಸೇನ ಪಡೆಗಳು 1948ರ ಅಕ್ಟೋಬರ್ 10ರಂದು ಚಿತ್ತಾಪುರ ತಾಲೂಕಿನ ಚಿಂಚೋಳಿ ಗ್ರಾಮದಲ್ಲಿದ್ದ ರಜಾಕಾರರ ಮೇಲೆ ಮುತ್ತಿಗೆ ಹಾಕಿದವು. ಮೂರು ದಿನಗಳ ಪರ್ಯಂತ ಸತತವಾಗಿ ರಜಾಕಾರರ ಅಡ್ಡೆಯ ಮೇಲೆ ಮುತ್ತಿಗೆ ಹಾಕಿದರೂ ಅವರು ಶರಣಾಗತರಾಗದಿದ್ದಾಗ ಇನ್ನಷ್ಟು ಮುಂದುವರಿಯಬೇಕಾಯಿತು. ಅಂದು ರಾತ್ರಿ ನಡೆದ ಕಾರ್ಯಾಚರಣೆಯಲ್ಲಿ ರಜಾಕಾರರು ಹಾರಿಸಿದ ಗುಂಡು ಅಪ್ಪಾರಾವ್ ಪಾಟೀಲರ ಬಲಪಕ್ಕೆಯಲ್ಲಿ ಸೇರಿಕೊಂಡಿತು. ಸ್ನೇಹಿತನಿಗಾದ ಗಂಭೀರ ಪರಿಸ್ಥಿತಿಯನ್ನು ಮನಗಂಡ ಚಂದ್ರಶೇಖರರು ಕೂಡಲೇ ಅವರನ್ನು ಗುಲಬರ್ಗಾಕ್ಕೆ ಸಾಗಿಸಿದರು. ಆದರೆ ಅಪ್ಪಾರಾವ್ ಆ ಗುಂಡೇಟಿನಲ್ಲೇ ಆಹುತಿಗೊಂಡು ಹುತಾತ್ಮರಾದರು.

ಈ ಘಟನೆಯ ಪ್ರತ್ಯಕ್ಷದರ್ಶಿ ಸ್ವಾತಂತ್ರ್ಯ ಹೋರಟಗಾರ ಶ್ರೀ ಬಬಲಾದಿ ಹೇಳಿದ್ದು ಹೀಗೆ:

"ಈ ಹೆಬ್ಬಾಳ್ ಚಿಂಚೋಳಿಯಲ್ಲಿ ರಜಾಕಾರರ ವಿರುದ್ಧ ಹೋರಾಟ ಮಾಡಿದ್ವಿ... ಅವ್ರೆಲ್ಲ ಓಡಿ ಹೋದ್ರು.. ಓಡ್ ಹೋಗೋಣ ಮತ್ತ ಅಲ್ಲಿ ಜೋರಾಯ್ತು.. ಅಲ್ಲಿ ಒಂದ್ ಮೂರುಸಾವಿರ ಜನ ಬಂದ್ ಬಿಟ್ರು.. ಆ ಜನರ ಮಧ್ಯೆ ನಾವು ಹೋಗ್ ಬಿಟ್ಟು ಕೆಲವು ನೂರಾರು ಜನ್ರು, ಚಂದ್ರಶೇಖರ ಪಟೀಲ್ರು, ಅಪ್ಪಾರಾವ್ ಪಟೀಲ್ರು ಹೀಗೆ ಅವ್ರ ಸಂಗಡ ನಾವು ಸುಮಾರು ನೂರು ಜನ ಹೋಗ್ ಬಿಟ್ವಿ... ಅಲ್ಲಿಂದ ಏನಿದ, ಅವ್ರ ಬಲ್ಲಿ ಪಿಸ್ತೂಲು ಬಂದೂಕು ಎಲ್ಲ ಇತ್ತು... ಬಂದೂಕ್‌ನಿಂದ ಅಪ್ಪಾರಾವ್ ಹೋಗ್ ಬಿಟ್ರು.. ಅವ್ರು ಮುಂದಾಗಿದ್ರು.. ,ನಮ್ ಚಂದ್ರಶೇಖರ ಪಾಟೀಲ್ರು ಹಿಂದಿದ್ರು, ನಾನು ಮತ್ತು ಭಾಳಾ ಜನ ಹಿಂದಿದ್ವಿ... ಅಪ್ಪಾರಾವ್ ಪಾಟೀಲ್ರು ಅಲ್ಲೇ ಸತ್ತು ಹೋದ್ರು..."

ಅಪ್ಪಾ ರಾವ್ ಪಾಟೀಲರ ಅನಿರೀಕ್ಷಿತ ಅಕಾಲಿಕ ಮರಣ ಚಂದ್ರಶೇಖರ ಪಾಟೀಲರಿಗೆ ಅಸದಳ ವೇದನೆಯನ್ನು ತಂದಿತು. ತಮ್ಮ ಭವಿತವ್ಯದ ಸಾಧನೆಗೆ ಒಳ್ಳೆಯ ಒಡನಾಡಿಯಾಗಬಹುದೆಂದುಕೊಂಡ ಪಾಟೀಲರಿಗೆ ಅಪ್ಪಾರಾವ್ ದುರ್ಮರಣ ಅಸಾಧ್ಯ ನೋವಿನ ವಿಷಯವಾಯಿತು. ಅದಕ್ಕೆ ಪ್ರತೀಕಾರವೋ ಎಂಬಂತೆ, ರಜಾಕಾರರ ಚಟುವಟಿಕೆಗಳಿಗೆ ಕೇಂದ್ರ ಸ್ಥಾನಗಳಾಗಿದ್ದ ಗುಪ್ತ ಸ್ಥಳಗಳನ್ನು ಶೋಧಿಸಿ,ಅವರನ್ನು ದಮನಿಸುವಂತೆ ಭಾರತದ ಸೇನಾಪಡೆಗಳಿಗೆ ಪ್ರೋತ್ಸಾಹ ನೀಡಿದರು.

## ಕರ್ನಾಟಕ ಏಕೀಕರಣ ಚಳವಳಿ

ಚಂದ್ರಶೇಖರ ಪಾಟೀಲರು ಕನ್ನಡವನ್ನು ಹೆಚ್ಚು ಅಭ್ಯಾಸ ಮಾಡಿದವರಲ್ಲ. ಆದರೆ ಅವರಿಗೆ ಕನ್ನಡ ನಾಡು, ಕನ್ನಡ ಭಾಷೆಯ ಬಗೆಗೆ ಅಪಾರವಾದ

ಅಭಿಮಾನವಿತ್ತು. ಹೈದರಾಬಾದ್ ಕರ್ನಾಟಕವು ಕರ್ನಾಟಕಕ್ಕೆ ಸೇರಿಸಿಕೊಳ್ಳುವಲ್ಲಿ ಅವರು ಕೈಲಾದ ಹೋರಾಟವನ್ನು ಮಾಡಿದರು. ಉರ್ದು, ಮರಾಠಿಗಳ ಪ್ರಾಬಲ್ಯವಿದ್ದಲ್ಲೆಲ್ಲ ಕನ್ನಡ ಶಾಲೆಗಳನ್ನು ಪ್ರಾರಂಭಿಸಲು ಪ್ರಯತ್ನಪಟ್ಟರು.

ತಮ್ಮ ರಾಜಕೀಯ ಚಟುವಟಿಕೆಗಳ ಜತೆಜತೆಗೇನೇ ಅವರು ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಹೇಗೆ ಸಕ್ರಿಯವಾಗಿ ಪಾಲ್ಗೊಂಡು ವಸ್ತಿನಿಷ್ಠ ದೇಣಿಗೆಯನ್ನು ನೀಡಿದರು ಎಂಬುದನ್ನು ಗುರುತಿಸಿದವರು ಡಾ। ಮಹಾಬಳೇಶ್ವರಪ್ಪ–

"ಸ್ವಾತಂತ್ರ್ಯ ಬಂದ ನಂತ್ರ ಚಂದ್ರಶೇಖರ ಪಾಟೀಲರಿಗೆ ಪೂರ್ಣ ತೃಪ್ತಿ ಆಗ್ಲಿಲ್ಲ. ಯಾಕೇಂತ ಕೇಳಿದ್ರೆ ಕರ್ನಾಟಕದ ಸಂಸ್ಕೃತಿಯನ್ನು ಉಳಿಸ್‌ಬೇಕು ಬೆಳೆಸ್‌ಬೇಕು ಅಂತ ಒಂದು ಹಿನ್ನೆಲೆಯಲ್ಲಿ ಅವ್ರು ಏಕೀಕರಣ ಚಳವಳಿಯಲ್ಲಿ ತಮ್ಮನ್ನು ತಾವೇ ಅರ್ಪಿಸಿಕೊಂಡ್ರು. ನಿಜಲಿಂಗಪ್ಪನವರ ನಾಯಕತ್ವದಲ್ಲಿ ಈ ಸೋಲಾಪುರದಲ್ಲಿ ಜಯದೇವಿ ತಾಯಿ ಲಿಗಾಡೆಯವರ ಮಾರ್ಗದರ್ಶನದಲ್ಲಿ ಈವೊಂದು ಭಾಗದಲ್ಲೆಲ್ಲ ಹೋರಾಟ ಮಾಡಿ, ಕನ್ನಡ ಭಾಷೆ, ಕನ್ನಡ ಸಂಸ್ಕೃತಿಯ ಬಗ್ಗೆ ಜನರಲ್ಲಿ ಅಭಿಮಾನ ಮೂಡ್ಲಿ ಅನ್ನತಕ್ಕಂಥ ದೃಷ್ಟಿಯಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಕನ್ನಡ ಸಾಹಿತ್ಯ ಸಂಸ್ಕೃತಿ ಉಳೀಬೇಕಂತ ಹೋರಾಟ ಮಾಡಿ ಸ್ಮರಣೀಯರಾದ್ರು...."

ಮಹಾದಾಸೋಹಿ ಪೂಜ್ಯ ಶ್ರೀ ಶರಣಬಸವಪ್ಪ ಅಪ್ಪ ಅವರು ಈ ಬಗೆಗೆ ಪ್ರಸ್ತಾಪಿಸುತ್ತ–

"ಸ್ವಾತಂತ್ರ್ಯ ಬಂದ ಬಳಿಕ ಚಂದ್ರಶೇಖರ ಪಾಟೀಲರ ಬದುಕು ತಮ್ಮ ಜನರ ಏಳ್ಗೆಗಾಗಿ ಮುಡಿಪಾಯಿತಲ್ಲದೆ, ಕರ್ನಾಟಕ ಏಕೀಕರಣಕ್ಕೆ ಕೂಡಾ ಅವ್ರು ತುಂಬಾ ಕೆಲಸ ಮಾಡುವಂತಾಯ್ತು. ನಿಜಲಿಂಗಪ್ಪನವರಿಗೆ ಅವ್ರು ಬಲಗೈ ಅಂತ ಹೇಳಬಹುದು. ಅವ್ರು ಚೀಫ್ ಮಿನಿಷ್ಟ್ರ ಆಗ್ಲಿಕ್ಕೆ ಈ ಭಾಗದಿಂದ ಸಪೋರ್ಟ್ ಮಾಡಿದಂಥವ್ರಲ್ಲಿ ಚಂದ್ರಶೇಖರ ಪಾಟೀಲ್ರು

ಪ್ರಮುಖರು. ಬಹಳ ಒಳ್ಳೆಯ ವ್ಯಕ್ತಿತ್ವ. ನಾನು ಕರ್ನಾಟಕದಲ್ಲಿ ಅವ್ರ ನಿಲುವಿನ ವ್ಯಕ್ತಿಯನ್ನು ನೋಡಿಲ್ಲ.

"ಈ ಏಕೀಕರಣದ ಚಳವಳಿಯ ಸಂದರ್ಭದಲ್ಲಿ ಈ ಭಾಗದ ಒಂದು ವಿಶೇಷ ಸಮಸ್ಯೆ ಉದ್ಭವವಾಗಿತ್ತು. ಕೆಲವೇ ಜನಾಂಗದವ್ರು, ಅದರಲ್ಲೂ ವೀರಶೈವ ಜನಾಣಗದವ್ರು ಈ ಏಕೀಕರಣ ಚಳವಳಿಗೆ ಆಸಕ್ತಿ ತೋರ್ತಾ ಇದ್ದಾರೆ ಅನ್ನೋ ಸಂದರ್ಭದಲ್ಲಿ ನಿಜಲಿಂಗಪ್ಪನವರು, ಚಂದ್ರಶೇಖರ ಪಾಟೀಲರು ಮುಂತಾದವ್ರು ಅಳವಂಡಿ ಶಿವಮೂರ್ತಿಸ್ವಾಮಿಗಳು ಎಲ್ಲಾ ಈ ಭಾಗದಲ್ಲಿ ಪ್ರವಾಸ ಮಾಡಿ ಪ್ರತಿಯೊಂದು ಜನಾಂಗದಿಂದ ಈ ಫಜಲಾಲಿ ಕಮಿಟಿಗೆ ಒಂದು ವರದಿಯನ್ನು ಸಲ್ಲಿಸಿದ್ರು. ಇಲ್ಲಿಯ ಎಲ್ಲಾ ಜನಾಂಗದವ್ರು ಕೂಡಾ ಅಖಿಲ ಕರ್ನಾಟಕ ನಿರ್ಮಾಣಕ್ಕಾಗಿ 'ಅಖಂಡ ಕರ್ನಾಟಕವೇ ನಮ್ಮ ಗುರಿ ಎಂದಿದ್ದಾರೆ' ಎಂದು ಸಾಬೀತು ಮಾಡಿದ್ರು."

ದಿ। ರಾಮಕೃಷ್ಣ ಹೆಗಡೆಯವ್ರು ಹೇಳಿದ್ದು–

"ಕರ್ನಾಟಕ ಏಕೀಕರಣ ಆಯ್ತು. ಆವಾಗ ನಾವೆಲ್ಲ ಒಟ್ಟಿಗೆ ಬಂದ್ವಿ. ಹೈದರಾಬಾದ್ ಕರ್ನಾಟಕದ ನಾಲ್ಕು ಜನರ ಪರಿಚಯ ಆವತ್ತೇ ಆದದ್ದು. –ಚಂದ್ರಶೇಖರ ಪಾಟೀಲರು, ವೀರೇಂದ್ರ ಪಾಟೀಲರು, ಮೊಹಮ್ಮದ್ ಅಲಿ ಮತ್ತು ಜಗನ್ನಾಥ ರಾವ್ ಚಂಡರಕಿ."

1960ರಲ್ಲಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ನರೋಣಾಗ್ರಾಮಕ್ಕೆ ಭೇಟಿಯಿತ್ತಾಗ ಅವರಿಗೆ ಮಾನಪತ್ರ ಸಮರ್ಪಿಸುವ ಕಾರ್ಯಕ್ರಮವಿತ್ತು. ಕನ್ನಡದಲ್ಲೇ ಮಾನಪತ್ರವನ್ನು ಅರ್ಪಿಸಬೇಕೆಂಬ ಹೆಬ್ಬಯಕೆ ಪಾಟೀಲರಿಗೆ. ಪ್ರೊ। ದೇವೇಂದ್ರ ಕುಮಾರ ಹಕಾರಿಯವರನ್ನು ಹತ್ತಿರ ಕರೆದು ಹುರಿದುಂಬಿಸಿ ಕನ್ನಡದಲ್ಲೇ ಮಾನಪತ್ರವನ್ನು ಬರೆಸಿದರು. ಸಭೆಯಲ್ಲಿ ಅದನ್ನು ಓದಿಸಿ ಸಮರ್ಪಿಸಿ ಕೃತಕೃತ್ಯರಾದರು.

"ಹಿಂಗ್ ನಾವು ಕನ್ನಡದ ಗೌರವ ಉಳಿಸಿಕೊಳ್ಳಬೇಕು. ಮಾನ ಪತ್ರ ಓದಿ ನಿಜಲಿಂಗಪ್ಪಣ್ಣಾ ಭಾಳಾ ಖುಷ್ ಆದ್ರು" ಎಂದು ಹುಡುಕಿಕೊಂಡು ಬಂದು ಹಕಾರಿಯವರ ಬೆನ್ನು ಚಪ್ಪರಿಸಿದರಂತೆ.

## ಶೈಕ್ಷಣಿಕ ರಂಗ

ಶಿಕ್ಷಣ ರಂಗದಲ್ಲಿ ಚಂದ್ರಶೇಖರ ಪಾಟೀಲರ ಹೆಸರು ಅವಿಸ್ಮರಣೀಯ.ಸಾಮಾಜಿಕ ಕಾರ್ಯಗಳಿಗಾಗಿ, ಅದರಲ್ಲೂ ಶಿಕ್ಷಣ ಸಂಸ್ಥೆಗಳಿಗಾಗಿ ಹಣ ಸಂಗ್ರಹಿಸಲು ಅವರೆಂದೂ ದುರಭಿಮಾನಕ್ಕೆ ಕಟ್ಟುಬಿದ್ದು ಹಿಂದೇಟು ಹಾಕಿದವರಲ್ಲ. ಅಂತಹ ಒಂದು ಉದಾಹರಣೆ ಇಲ್ಲಿದೆ:

ಹೈದರಾಬಾದ್ ಕರ್ನಾಟಕ ಎಜ್ಯುಕೇಶನ್ ಸೊಸೈಟಿಯ ಅಭಿವೃದ್ಧಿ ನಿಮಿತ್ತವಾಗಿ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಜಿಲ್ಲಾಧಿಕಾರಿ ಎಂ.ವಾಸುದೇವ ಅವರೊಂದಿಗೆ ಮಾತನಾಡಿ, 'ಉಪನ್ಯಾಸದ ಕೋಣೆಗಳು ಮತ್ತು ಪ್ರಯೋಗಶಾಲೆಯ ಕಟ್ಟಡಕ್ಕಾಗಿ ಸಂಘವು 50,000 ರೂಪಾಯಿ ನೀಡುವುದಾದರೆ ಎಚ್.ಕೆ.ಇ. ಸೊಸೈಟಿಯ ಸಯನ್ಸ್ ವಿಭಾಗವನ್ನು ವಿಸ್ತರಿಸುವ ಇಚ್ಚೆ ಸರಕಾರಕ್ಕಿದೆ' ಎಂದು ತಿಳಿಸಿದರು. ಈ ವಿಷಯವನ್ನು ಪಾಟೀಲರಲ್ಲಿ ಅವರು ಪ್ರಸ್ತಾಪಿಸಿದರು. ಪಾಟೀಲರು ಒಪ್ಪಿದರು. ಚಂದಾ ಹಣದ ಸಂಗ್ರಹ ಕಾರ್ಯ ಪ್ರಾರಂಭವಾಯಿತು. ಮುಂಜಾನೆಯಿಂದ ಸಂಜೆಯವರೆಗೆ ಸರಕಾರೀ ಕಾರ್ಯಾಲಯದ ಕೆಲಸ ಮುಗಿದ ಮೇಲೆ ಪಾಟೀಲರು ವಾಸುದೇವ ರಾವ್ ಅವರೊಇಂದಿಗೆ ಹೊರಬೀಳುತ್ತಿದ್ದರು. ಸಂಜೆಯ ಹೊತ್ತು, ರಾತ್ರಿಯ ವೇಳೆ ಹಳ್ಳಿಗೆ ಹಳ್ಳಿಗೆ ಹೋಗಿ ಉದಾರಿಗಳ ಮನೆ ಬಾಗಿಲು ತಟ್ಟುತ್ತಿದ್ದರು. 15ದಿನದೊಳಗಾಗಿಯೇ ಬೇಕಷ್ಟು ಹಣ ಸಂಗ್ರಹವಾಯಿತು.

ಹಿರಿಯ ಪತ್ರಕರ್ತರಾದ ಡಾ। ಪಾಟೀಲ ಪುಟ್ಟಪ್ಪನವರು ಈ ದಿಶೆಯಲ್ಲಿ ಚಂದ್ರಶೇಖರರ ಕತೃತ್ವ ಶಕ್ತಿಯನ್ನು ಕೊಂಡಾಡಿದ್ದು ಹೀಗೆ-

"ಅವರಲ್ಲಿ ಸಂಪೂರ್ಣ ನಿಸ್ವಾರ್ಥತೆ ಇತ್ತು. ಮತ್ತೆ ಜನತೆಗೋಸುಗ ಅವ್ರು ತಮ್ಮನ್ನು ಸಂಪೂರ್ಣ ಅರ್ಪಿಸಿಕೊಂಡಿದ್ರು. ಅವರಲ್ಲಿ ಸ್ವಾರ್ಥದ ಲವಲೇಶ ಯಾವುದೂ ಇರ್ಲಿಲ್ಲ. ರಾಂಪುರೆಯವನ್ನು ಕೂಡಾ ಮುಂದಕ್ಕೆ ತರೋದ್ರಲ್ಲಿ ಚಂದ್ರಶೇಖರ ಪಾಟೀಲರು ಬಹಳ ದೊಡ್ಡ ಪಾತ್ರ ವಹಿಸಿದ್ರು. ರಾಂಪುರೆಯವ್ರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಶೈಕ್ಷಣಿಕ

ಕ್ರಾಂತಿಯನ್ನು ಮಾಡಿದವ್ರು, ಆ ಕ್ರಾಂತಿ ಆಗೋದಕ್ಕೆ ಚಂದ್ರಶೇಖರ ಪಾಟೀಲರು ಮೂಲ ಕಾರಣ ಅಂತ ಹೇಳಿದ್ರೆ ಅತಿಶಯೋಕ್ತಿ ಏನೂ ಅಲ್ಲ..."

ಚಂದ್ರಶೇಖರ ಪಾಟೀಲರ ಶೈಕ್ಷಣಿಕ ರಂಗದಲ್ಲಿನ ಸೇವೆಯನ್ನು ಗುರುತಿಸಿದ ಇನ್ನೋರ್ವ ಅವರ ನಿಕಟವರ್ತಿ ಶ್ರೀ ಗೋಪಾಲ ರಾವ್ ಮುಡಬಿ–

"ನಿಜಲಿಂಗಪ್ಪನವರು ಚೀಫ್ ಮಿನಿಷ್ಟ್ರು ಇದ್ದಾಗ, ನಾನೂ, ಚಂದ್ರಶೇಖರ ಪಾಟೀಲ್ರೂ, ರಾಂಪುರೆ ಮತ್ತು ಮಹಮ್ಮದ್ ಅಲಿ– ನಾವು ನಾಲ್ವರು ಆದಿನ ಫರ್ಸ್ಟ್ ಡೇನೇ ಹೋಗಿ, ಸಿ.ಎಂ.ರಲ್ಲಿ ಮಾತಾಡ್ದ್ವಿ, ಟೆಕ್ನಿಕಲ್ ಎಜುಕೇಶನ್ ಇಲ್ಲಿ ಇಲ್ಲ, ನೀವು ಪ್ರೋತ್ಸಾಹ ಕೊಡಿ ಅಂತ. ಮರುದಿವ್ಸ ಅಪ್ಲಿಕೇಶನ್ ಕೊಟ್ವಿ, ಎಚ್.ಕೆ.ಇ. ಸೊಸೈಟಿ ಹುಟ್‌ಕೊಂಡಿದ್ದು ಹಾಗೆ.."

## ಫರ್ಸ್ಟ್ ಕ್ಲಾಸ್ ಫರ್ಸ್ಟ್ ಛಾನ್ಸ್

ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣುವ ಮಕ್ಕಳೆಂದರೆ ಚಂದ್ರಶೇಖರ ಪಾಟೀಲರಿಗೆ ಅಚ್ಚುಮೆಚ್ಚು. ಮಕ್ಕಳು ಓದಬೇಕು, ಬದುಕಿನಲ್ಲಿ ಮುಂದೆ ಬರಬೇಕು, ದೇಶದ ಸತ್ಪ್ರಜೆ ಆಗಬೇಕು ಮುಂತಾಗಿ ಅವರು ಕನಸು ಕಾಣುತ್ತಿದ್ದರು. ಅವರ ಪತ್ನಿ ಶ್ರೀಮತಿ ಲಲಿತಾಬಾಯಿಯವರು ತಮ್ಮ ಪತಿ ಜಾಣ ವಿದ್ಯಾರ್ಥಿಗಳನ್ನು ಹೇಗೆ ನಡೆಸಿಕೊಳ್ಳುತ್ತಿದ್ದರು ಎಂದು ಜ್ಞಾಪಿಸಿಕೊಂಡದ್ದು ಹೀಗೆ:

"ಸಾಕಷ್ಟು ಮಂದಿಗೆ, ಯಾರು ಪರೀಕ್ಷೇಲಿ ಫಸ್ಟ್ ಕ್ಲಾಸ ಬಂದಿದ್ದಾರೆ ಅವ್ರನ್ನ ನೇರ ಮನೆಗೆ ಕರ್ಕೊಂಡೇ ಬರೋರು. ಅವ್ರಿಗೆ ಊಟ ಮಾಡ್ಸಿ, ಸ್ವೀಟ್ ಕೊಡ್ಸಿ, ಅವ್ರನ್ನ ಲೈನ್‌ಗೆ ಹಚ್ಚಿ ಹೋಗವ್ರು. ಮೆಡಿಕಲ್ ಕಾಲೇಜು ಹೊಸತಾಗಿ ತೆರೆದಾಗ, ಹೈದರಾಬಾದ್‌ನ ಒಂದು ಹತ್ತು ಮಂದಿ ನಮ್ ಮನೇಲಿದ್ರು, ಆಗಿನ್ನೂ ಹಾಸ್ಟೆಲ್ ಪ್ರಾರಂಭ ಆಗಿದ್ದಿರ್ಲಿಲ್ಲ. ನಮ್ಮನೇಲಿ ಊಟ ನಾ ಮಾಡ್‌ಹಾಕ್ತಿದ್ದೆ ಅವ್ರಿಗೆ. ಅಷ್ಟು ಅವ್ರಿಗೆ ಪ್ರೀತಿ ಫಸ್ಟ್ ಕ್ಲಾಸ್ ಬರೋರ್ ಬಗ್ಗೆ. ಓದಿಸ್‌ಬೇಕು ಅನ್ನೋದು, ಮುಂದೆ ತರ್ಬೇಕು ಅನ್ನೋದು. ಅವ್ರು ಇದ್ದಿದ್ದಿದ್ರೆ ಗುಲಬರ್ಗಾ ಇನ್ನೂ ಮುಂದಾಗ್ತಿತ್ತು.."


ಚಂದ್ರಶೇಖರ ಪಾಟೀಲರ ಅಣ್ಣ ರುದ್ರಶೆಟ್ಟಿ ಪಾಟೀಲರು, ಹೇಗೆ ಚಂದ್ರಶೇಖರರು ಸ್ಥಳೀಯ ವಿದ್ಯಾವಂತರಿಗೆ ನೌಕರಿ ಕೊಡಿಸ್ತಿದ್ರು ಎಂಬ ವಿಷಯವಾಗಿ ಹೇಳಿದ್ದು ಹೀಗೆ:

"ಈಗಿನ್ ಪ್ರಕಾರ ನಾವು ನೋಡಿದ್ರೆ, ಯಾವನೇ ಲೀಡರ್ ಹತ್ರ ಒಬ್ಬ ರೈತ ಬಂದು 'ಸಾಹೇಬ್ರೇ ಈವೊಂದು ಕೆಲ್ಸ ಮಾಡ್ಸಿ ಕೊಡ್ರಿ' ಅಂತ ಕೇಳಿದ್ರೆ, ಆಯ್ತು ತಗೋ ಮಾಡ್ತೀನಿ ಅಂತ ಅಂದು ಕೊನೆಗೆ ಏನೂ ಮಾಡ್ದೇ ಇರೋ ಪ್ರಸಂಗನೇ ಜಾಸ್ತಿ. ಅಂವ ಏನ್ ಹೇಳ್ತಾ ಇದ್ದ ಅಂದ್ರೆ, 'ಏನ್ ಮಾಡೋದಪ್ಪ, ಸಾಧ್ಯ ಆಗೋದಿಲ್ಲ, ಎಷ್ಟು ಸಾಧ್ಯನೋ ನೋಡ್ತೀನಿ' ಅಂತ ಹೇಳಿ ಸಾಧ್ಯ ಆದ್ ಮಟ್ಟಿಗೆ ಬೆಂಗ್ಳೂರಿಗೆ ಹೋಗಿ ಅವ್ರಿಗೆ ಕೆಲ್ಸ ಮಾಡ್ಸಿ ತಂದೇ ಕೊಡ್ತಿದ್ದ. ನೌಕ್ರಿ ಮಾಡ್ಸ್ ಕೊಡೋಕೂ ಹಾಗೇ ಹೆಣಗ್ತಿದ್ದ. ಶಿಕ್ಷಣ ಖಾತೆಯೊಳ್ಗೆ ಆತ ಭಾಳಾ ನೌಕರಿ ಎಲ್ಲರಿಗೂ ಮಾಡ್ಸ್‌ಕೊಟ್ಟ. ಅದಕ್ಕಾಗಿ ಎಲ್ಲಿಂದೆಲ್ಲ ಜನ್ರು ಅವನಿಗೆ ಹೊಗಳ್‌ತಿದ್ರು."

ಪಾಟೀಲರು ರಾಜಕೀಯ ರಂಗವನ್ನು ಪ್ರವೇಶಿಸಿ ಸಂಪೂರ್ಣವಾಗಿ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇನ್ನುವ ಸಮಯದಲ್ಲೇ ಗುಲಬರ್ಗಾಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಬೆಣ್ಣೆತೊರಾ ಯೋಜನೆಯನ್ನು ಸರಕಾರ ಕೈಗೆತ್ತಿಕೊಂಡಿತು. ಮಹಾಗಾಂವ್ ಗ್ರಾಮವೇ ಈ ಯೋಜನೆಯಿಂದ ಮುಳುಗಿಹೋಗುವ ಸಂಭವವಿತ್ತು. ಆಗಲೇ ಸರಕಾರ ವಿಕಾಸ ಯೋಜನೆಯನ್ವಯ ಗ್ರಾಮದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡಿದ್ದರಿಂದ ಯೋಜನೆಯಿಂದ ಲಾಭಕ್ಕಿಂತ ಹಾನಿಯೇ ಹೆಚ್ಚೆಂಬ ತೀರ್ಮಾನಕ್ಕೆ ಸರಕಾರ ಬರುವಂತಾಯಿತು. ಜತೆಗೆ ಯೋಜನೆಯನ್ನು ಕೈಬಿಡುವಂತೆ ಶಿಫಾರಸು ಮಾಡಲಾಯಿತು. ಇದರಿಂದ ಸಂತುಷ್ಟರಾದ ಪಾಟೀಲರು ವಿಕಾಸ ಯೋಜನೆಗಳು ತೀವ್ರಗತಿಯಿಂದ ಮುಂದುವರಿಯುವಂತೆ ಸಂಬಂಧಪಟ್ಟವರಿಗೆ ಮನವರಿಕೆ ಮಾಡಿದರು.

## ಪ್ರಸಂಗಾವಧಾನತೆ

ಚಂದ್ರಶೇಖರ ಪಾಟೀಲರ ಪ್ರಸಂಗಾವಧಾನತೆಯ ಬಗೆಗೆ ಒಂದು ನಿದರ್ಶನ ಇಲ್ಲಿದೆ. ಇಂಜಿನಿಯರಿಂಗ್ ಕಾಲೇಜಿನ ಅಡಿಗಲ್ಲು ಹಾಕುವ ಸಮಾರಂಭದ ಒಂದು ವಿಶಿಷ್ಟ ಸನ್ನಿವೇಶವನ್ನು ಶ್ರೀ ಅರುಣ್ ಕುಮಾರ್ ಪಾಟೀಲರು ಜ್ಞಾಪಿಸಿಕೊಂಡಿದ್ದು ಹೀಗೆ:



"ಇಂಜಿನಿಯರಿಂಗ್ ಕಾಲೇಜಿನ ಶಂಕು ಸ್ಥಾಪನೆಯ ಸಮಾರಂಭಕ್ಕೆ ಭಾರತದ ಆಗಿನ ವೈಸ್ ಪ್ರೆಸಿಡೆಂಟ್ ಡಾ। ಎಸ್.ರಾಧಾಕೃಷ್ಣನ್ ಬರುವವರಿದ್ರು. ಆವಾಗ ಅವ್ರು ಬರೋದು ಇನ್ನೊಂದು ಆರು ಗಂಟೆ ಇದೆ ಅನ್ನೋದಕ್ಕೆ ಮುಂಚೆ ಸಮಾರಂಭಕ್ಕಾಗಿ ಹಾಕಿದ ಚಪ್ಪರ ಶಾರ್ಟ್ ಸರ್ಕ್ಯೂಟ್‌ನಿಂದ ಸುಟ್ಟುಹೋಗ್ಬಿಟ್ತು. 6ಗಂಟೆ ಒಳಗೇನೇ ಆ ಫಂಕ್ಷನ್ ಅಲ್ಲಿ ಆಗುತ್ತೋ ಇಲ್ವೋ ಎಂದು ಜನ ಎಲ್ಲಾ ಹೆದರಿ ಬಿಟ್ರು. ಚಂದ್ರಶೇಖರ ಪಾಟೀಲರು ಮೊದಲೇ ಸ್ಥಿತಪ್ರಜ್ಞರು. ಪೆಂಡಾಲ್ ಸುಟ್ರು ಕೂಡಾ ಅಲ್ಲಲ್ಲಿ ಬಾಳೆಗಿಡಗಳಿಂದ ಮತ್ತು ಇನ್ನಿತರ ಸಾಮಗ್ರಿಗಳಿಂದ ಅಲಂಕರಿಸಿ, ಫಂಕ್ಷನ್ ಯಥಾಸ್ಥಿತಿಯಲ್ಲಿ ಸರಿಯಾದ ಸಮಯಕ್ಕೆ ಆಗುವ ಹಾಗೆ ನೋಡ್‌ಕೊಂಡ್ರು. ಆಗ ಜನ್ರು ಭಾಳಾ ಅಚ್ಚರಿ ಪಟ್ರು. 6ಗಂಟೆ ಅವಧಿಯಲ್ಲೇ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವ್ಯವಸ್ಥಿತವಾಗಿ ಫಂಕ್ಷನ್ ಆಯ್ತಲ್ಲ ಎಂದು ಕೊಂಡಾಡಿದ್ರು..."



**ಸಮಾರಂಭಕ್ಕೆ ಆಗಮಿಸುತ್ತಿರುವ ಡಾ। ಎಸ್.ರಾಧಾಕೃಷ್ಣನ್**

ಚಂದ್ರಶೇಖರ ಪಾಟೀಲರ ಮಗಳು ಶ್ರೀಮತಿ ಶೀಲಾದೇವಿ ತಮ್ಮ ತಂದೆಯ ಗುಣಗಾನ ಮಾಡಿದ್ದು ಹೀಗೆ:

> "ಅವ್ರು ಯಾವಾಗ್ಲೂ ಸಂತೋಷವಗೇ ಇರ್ತಿದ್ರು. ಹೊರಗಡೆ ಎಷ್ಟು ಒತ್ತಡದಿಂದ ಬಿಜಿಯಾಗಿದ್ರೂ, ಮನೆಗೆ ಬಂದಾಗ ಭಾಳಾ ಎಲ್ಲರ್ ಜತೆ ಕೂಡ್ಕೊಂಡು, ಕುಟುಂಬದ ಸದಸ್ಯರನ್ನೆಲ್ಲಾ ಕರ್ಕೊಂಡೇ ಊಟ ಮಾಡ್ತಿದ್ರು. ಅಮ್ಮ, ಅಕ್ಕ, ಅಣ್ಣ, ತಂಗಿಂದ್ರು ಮಕ್ಳು ಮರಿಗಳು, ಹೊರಗಿನವ್ರು, ಯಾರೇ ಇರ್ಲಿ, ಬಡವರಿರ್ಲಿ ಶ್ರೀಮಂತ್ರು ಇರ್ಲಿ, ಅವರೆಲ್ಲರ ಜತೆಗೇನೇ ಊಟ. ಕೆಲವೊಮ್ಮೆ ಹತ್ತು ಜನ, ಕೆಲವೊಮ್ಮೆ 50–60ಜನ ಹೀಗೆ ಇರ್ಬೇಕು ಊಟಕ್ಕೆ. ಹಾಗೆ ಇದ್ರೇನೇ ಅವ್ರಿಗೆ ಹೊಟ್ಟೆ ತುಂಬ್‌ತಿತ್ತು. ನಿದ್ದೆ ಬರ್ತಿತ್ತು. ಆ ಟೈಪ್ ಇದ್ರು ಅವ್ರು."

ಪಾಟೀಲರ ಜೀಪ್ ಚಾಲಕ, ಅವರನ್ನು ನಿಕಟದಲ್ಲಿ ಬಲ್ಲ ಜವಾನ ಶ್ರೀ ರುಕ್ಣುದ್ದೀನ್ ಹೇಳಿದ್ದು–

"ಬಡವ್ರು ಬಗ್ಗೆ ಭಾಳಾ ಕಳಕಳಿ ಅವ್ರುದ್ದ. ನಾವು ಗಾಡಿಯೊಳ್ಗೆ ಇಲೆಕ್ಷನ್‌ದಾಗ ಹೋಗ್‌ತಿದ್ವು, ಹೋಗ್ತಾಗ ಯಾರಾದ್ರೂ ದಾರಿಗುಂಟ ಬಡವ್ರು, ಮಕ್ಳು ನಡ್‌ಕೋತಾ ಹೋಗ್ತಿದ್ರೆ, ನೀವು ಎಲ್ಲಿಗೆ ಹೋಗ್ತೀರಿ? ನೀವು ಯಾವ ಊರಿಗೆ ಹೋಗ್ತೀರಿ? ಏನದ? ಕೂಡ್ರಿ ಅಂತ ಹೇಳ್‌ಕೇಸಿ ದಾರ್‍ಯಾಗ ಜೀಪ್ ನಿಲ್ಸಿ ಅವ್ರ ಬಗ್ಗೆ ಕಾಳಜಿ ತೋರ್‍ಸ್ತಿದ್ರು, ಅವ್ರನ್ನು ಕುಂಡ್ರುಸ್ಕೊಂಡು ಅವ್ರಿಗೆ ಊರ್ ತನ್ಕ ಬಿಡ್ತಾನೂ ಇದ್ರು, ಅಂಥ ದೇವ್ರಂಥಾ ಮನಸಾ ಅವ್ರು."

## ನಿರಪೇಕ್ಷ ಭಾವ

ಚಂದ್ರಶೇಖರರ ಎಳೆವಯಸ್ಸಿನ ಸಾರ್ವಜನಿಕ ಚಟುವಟಿಕೆಗಳಿಗಾಗಿ ಪ್ರೇರಿಸಿದ ಸಾಮಾಜಿಕ ಕಾಳಜಿ ಮತ್ತು ಕಳಕಳಿಗಳೇ ಮುಂದೆ ಅವರಿಗೆ ತಮ್ಮ ರಾಜಕೀಯ ಜೀವನದ ಮೂಲ ಸ್ರೋತವಾಯಿತು ಎಂದರೂ ತಪ್ಪಾಗದು. ನಿರಪೇಕ್ಷಭಾವ ಅವರ ಯಾವುದೇ ಸಣ್ಣ ದೊಡ್ಡ ರಾಜಕೀಯ ಚಟುವಟಿಕೆಗಳಲ್ಲಿ ಎದ್ದು ಕಾಣುವಂಥ ಅಂಶ. ಅವರ ಪಕ್ಷ ನಿಷ್ಠೆ ಅಚಲ.

ಪಕ್ಷ ಅದರ ಸಂಘಟನೆ, ಧ್ಯೇಯ ಧೋರಣೆಗಳು ಮತ್ತು ಅವುಗಳ ಅನುಷ್ಠಾನದ ವಿಷಯದಲ್ಲಿ ಚಂದ್ರಶೇಖರರು ನಿಷ್ಠುರರಾಗಿದ್ದರು. ಪಕ್ಷದ ಮತ್ತು ಸಾರ್ವಜನಿಕ ಹಿತದ ಕೆಲಸಗಳು ಅವರ ದೃಷ್ಟಿಯಲ್ಲಿ ಪ್ರಮುಖ ವಿಷಯಗಳಾಗಿದ್ದವು. ತಾನು, ತನ್ನ ಕುಟುಂಬ, ಹೆಂಡತಿ ಮಕ್ಕಳು ಸಂಸಾರದ ನೈತಿಕ ಜವಾಬ್ದಾರಿ ಇವೆಲ್ಲವುಗಳನ್ನು ಮೀರಿ ಜನಹಿತಕ್ಕಾಗಿ ಅವರು ದುಡಿದುದೇ ಹೆಚ್ಚು. ತಾವು ನಂಬಿದ ತತ್ತ್ವ ಮತ್ತು ಆದರ್ಶಗಳನ್ನು ಯಾವ ಸಂದರ್ಭದಲ್ಲೂ ಯಾವ ಕಾರಣಕ್ಕಾಗಿಯೂ ಅವರು ಬಿಟ್ಟುಕೊಟ್ಟವರಲ್ಲ.

ಚಂದ್ರಶೇಖರರು ತಮ್ಮ ಜೀವನದ ಆದರ್ಶವನ್ನು ಕಂಡುಕೊಂಡ ಬಗೆ ಹೇಗೆ ಎಂಬ ಕುರಿತು ಎಲ್ಲರಲ್ಲೂ ಒಂದು ಜಿಜ್ಞಾಸೆ ಇರುವುದು ಸಹಜವೇ. ಸಾಂಕೇತಿಕವಾಗಿ ಅದಕ್ಕೆ ಉತ್ತರ ಇಲ್ಲಿದೆ:



ಚಂದ್ರಶೇಖರ ಪಾಟೀಲರ ಕಚೇರಿಯಲ್ಲಿದ್ದ
ಆದರ್ಶದ ದ್ಯೋತಕವಾದ ಜ್ಯೋತಿರ್ಪುಂಜದ ಚಿತ್ರ

ಆದರ್ಶವೊಂದನ್ನು ಬಿಂಬಿಸುವಂಥ ಚಿತ್ರವೊಂದು ಚಂದ್ರಶೇಖರ ಪಾಟೀಲರ ಅಧ್ಯಯನ ಕೊಠಡಿಯಲ್ಲಿತ್ತು. ಕೆಳಗಡೆ ಲೌಕಿಕ ವಿಷವರ್ತುಲದ ಪ್ರತೀಕವೆಂಬಂತೆ ಹಾವು ಚೇಳುಗಳು, ಮೇಲ್ಗಡೆ ಆದರ್ಶದ ದ್ಯೋತಕವಾದ ಜ್ಯೋತಿರ್ಪುಂಜ. ಆ ಜ್ಯೋತಿಯೆಡೆಗೆ ಸಾಗುವ ಬಾಲಕ ತಾನಾಗಬೇಕು ಎಂಬ ಉತ್ಕಟ ಹಂಬಲ ಅವರಲ್ಲಿದ್ದಿತು. ಅದೇ ಅವರ ಆದರ್ಶವೂ ಆಗಿತ್ತು.

"ಧರ್ಮಯುಗ್" ಎಂಬ ಹಿಂದೀ ವಾರಪತ್ರಿಕೆಯೊಂದು ಹಿಂದೆ ಪ್ರಕಟವಾಗುತ್ತಿತ್ತು. ಆ ವಾರಪತ್ರಿಕೆಯ ಅದೊಂದು ಸಂಚಿಕೆಯಲ್ಲಿ ಹೀಗೊಂದು ಚಿತ್ರ ಬಂದಿತ್ತು. ಮಗುವೊಂದು ಆಕಾಶದೆಡೆಗೆ ಕೈಚಾಚಿ ಏನನ್ನೋ ಪಡೆಯಲು ಕಡಿದಾದ ಬೆಟ್ಟವನ್ನು ಎತ್ತರೆತ್ತರಕ್ಕೆ ಏರಲು ಹವಣಿಸುತ್ತಿದೆ. ಕೆಳಗೆ ನಾನಾ ಬಗೆಯ ಭಯಾನಕ ಹಿಂಸ್ರ ಜಂತುಗಳು, ವಿಷಯುಕ್ತ ಹುಳಗಳು– ಆ ಮಗು ಕೆಳಗಿಳಿಯುವಂತೆ ಅದರ ಬದುಕಿನ ಕರುಳಬಳ್ಳಿಯೋ ಎಂಬಂತಿರುವ ದಾರವನ್ನು ಕೆಳಕ್ಕೆ ಜಗ್ಗುತ್ತಿದೆ. ಎಷ್ಟೊಂದು ಅರ್ಥಪೂರ್ಣ ಚಿತ್ರ! ಚಿತ್ರದ ಅಡಿಬರಹ ಮತ್ತಷ್ಟು ಸಂವೇದನಾಶೀಲ–

"ಬಚ್ಚೆ ಕೀ ಸ್ವಭಾವ್‌ಜನ್ಯ್ ಪ್ರವೃತ್ತಿ ಉತ್ಕರ್ಷ್ ಕೀ ವೋರ್ ಹೋತಿ ಹೈ!, ಕಿಂತು ವಹ್ ಊಂಚಾ ತಭೀ ಉಠ್ ಸಕ್ತಾ ಹೈ, ಯದಿ ವಹ್ ಸಂಸಾರ್ ಕೆ ವಿಷೈಲೆ ಪ್ರಲೋಭನೋಂಸೆ ಬಚ್ ಜಾಯ್!" (ಉತ್ಕರ್ಷದೆಡೆಗೆ ಸ್ವಭಾವಜನ್ಯ ಪ್ರವೃತ್ತಿ ಇದ್ದರೂ ಪ್ರಾಪಂಚಿಕ ಪ್ರಲೋಭನೆಗಳಿಂದ ಮುಕ್ತವಾದಾಗ ಮಾತ್ರ ಉನ್ನತಿಯನ್ನು ಪಡೆಯಲು ಸಾಧ್ಯ)

ಚಂದ್ರಶೇಖರರು ಆ ಚಿತ್ರಕ್ಕೆ ಕಟ್ಟು ಹಾಕಿಸಿ ತಮ್ಮ ಕಚೇರಿಯಲ್ಲಿ ಅದನ್ನು ಇರಿಸಿಕೊಂಡಿದ್ದರು. ಎತ್ತರದಲ್ಲಿ ಗೋಡೆಗೆ ನೇತುಹಾಕಿದ ಆ ಚಿತ್ರ ದೃಷ್ಟಿ ಹಾಯಿಸಿದಾಗೆಲ್ಲ ಚಂದ್ರಶೇಖರರಲ್ಲಿ ಉನ್ನತ ಜೀವನಾದರ್ಶವನ್ನು ಸ್ಫುರಿಸುತ್ತಿತ್ತಂತೆ.

## ಅಕಾಲಿಕ ಆಕಸ್ಮಿಕ ಮರಣ

ಚಂದ್ರಶೇಖರ ಪಾಟೀಲರದ್ದು ಅಕಾಲಿಕ ಅನಿರೀಕ್ಷಿತ ಮರಣ. 22ನೇ ಡಿಸೆಂಬರ್ 1960ರ ಬುಧವಾರ ಮಧ್ಯರಾತ್ರಿ ಅವರ ಚೈತನ್ಯ ಪಕ್ಷಿ ಹಾರಿಹೋಯಿತು.

ಶಿವ ಸಾನಿಧ್ಯ ಸೇರಿತು. 42ವರ್ಷಗಳ ಅಲ್ಪಾಯುಷ್ಯದಲ್ಲೇ ಮಹಾಸಾಧಕನೆನಿಸಿ ಜಗದ ಜನರ ಹೃದಯದಲ್ಲಿ ಅವರು ನೆಲೆಸಿದರು....

ಚಂದ್ರಶೇಖರ ಪಾಟೀಲರು ಲೆಜಿಸ್ಲೇಚರಿನ ಎಷ್ಟಿಮೇಟ್ ಕಮಿಟಿಯ ಮೆಂಬರ್ ಆಗಿದ್ದರು. ಮೈಸೂರು ಸಮೀಪ ಕಾಕನಕೋಟೆ ಫಾರೆಸ್ಟ್‌ನಲ್ಲಿ ಆನೆಗಳನ್ನು ವ್ಯವಸ್ಥಿತವಾಗಿ ಹಿಡಿದು ಬೇರೆಡಗೆ ಸಾಗಿಸುವ ಕೆಲಸ ನಡೆದಿತ್ತು. ಅದಕ್ಕೆ ಖೆಡ್ಡಾ ಆಪರೇಶನ್ ಅಂತ ಹೆಸರು. ಆ ಖೆಡ್ಡಾದಲ್ಲಿ ಆನೆಗಳನ್ನು ಹಿಡಿಯುವುದನ್ನು ನೋಡುವುದಕ್ಕೆ ಎಂ.ಎಲ್.ಎ.ಗಳು ಬೆಂಗಳೂರಿನಿಂದ ಹೋಗಿದ್ದರು. ಆಪರೇಷನ್ ನೋಡುವ ಸಲುವಾಗಿ ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದ್ ಕೂಡಾ ಬಂದಿದ್ದರು.

ಅದನ್ನು ನೋಡಿಕೊಂಡು ತಿರುಗಿ ಬರುವ ಸಮಯದಲ್ಲಿ ಚಂದ್ರಶೇಖರ ಪಾಟೀಲರ ಬಸ್ ಆಕ್ಸಿಡೆಂಟ್‌ಗೆ ಸಿಲುಕಿ ಬಿಟ್ಟಿತು. ಡ್ರೈವರ್ ಹಿಂದುಗಡೆ ಸೀಟಿನಲ್ಲಿ ಕೂತಿದ್ದ ಪಾಟೀಲರ ಎದೆಯಲ್ಲಿ ಡ್ರೈವರ್ ಸೀಟು ನಾಟಿತು. ಬಸ್ಸು ಮತ್ತು ಲಾರಿ ಕೆಂಗೇರಿ ಬಳಿಯಲ್ಲಿ ಹೆಡ್ ಆನ್ ಕೊಲ್ಲಿಷನ್ ಆದದ್ದೇ ಈ ಆಕ್ಷಿಡೆಂಟ್‌ಗೆ ಕಾರಣವೆಂದು ತಿಳಿಯಲಾಯಿತು. ಅನಂತರ ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಯಿತು. ಅವರು ಅಲ್ಲಿ ಕೊನೆಯುಸಿರು ಎಳೆದರು.

ಅಪಘಾತದ ವಿವರ ದಾಖಲಾದುದು ಹೀಗೆ:

1960ರ ಡಿಸೆಂಬರ್ 21ರಂದು ಕಾಕನಕೋಟೆಗೆ ಬಂದು ಭೀಮ ಶಕ್ತಿಯ ಕಾಡಾನೆಗಳನ್ನು 'ಖೆಡ್ಡಾ' ಆಪರೇಷನ್‌ನಲ್ಲಿ ರೋಮಾಂಚಕವಾಗಿ ಹಿಡಿಯುವ ದೃಶ್ಯವನ್ನು ಕಂಡು ಶಾಸಕರೆಲ್ಲ ಆನಂದಿಸಿದರು. ಸುಮಾರು 30ಮಂದಿ ಶಾಸಕರಿದ್ದರು. ಅವರೆಲ್ಲ ಮುಂಜಾನೆ ಬಸ್ಸನ್ನು ಏರಿ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದರು. ಮಧ್ಯಾನದ ಹೊತ್ತಿಗೆ ಮದ್ದೂರಿನಲ್ಲಿ ಊಟವಾಯಿತು. ಚೆನ್ನಪಟ್ಟಣ, ರಾಂನಗರ, ಬಿಡದಿಗಳನ್ನು ದಾಟಿ ಬಸ್ ಮಂದಗತಿಯಲ್ಲಿ ಚಲಿಸುತ್ತಿತ್ತು. ಪಾಟೀಲರು ಚಾಲಕನ ಕಡೆ ನೋಡಿ 'ಅಂವ ನಿದ್ದೀ ಮಾಡುವಂಗ ಕಾಣ್ತೈತಿ... ಸ್ವಲ್ಪ ಮಾತಾಡಿಸಿ

ಬರ್ತೀನಿ ಇರ್ರಿ..' ಎನ್ನುತ್ತ ಎದುರುಗಡೆಯ ಶಾಸಕರೊಬ್ಬರನ್ನು ಹಿಂದಕ್ಕೆ ಕಳಿಸಿ ತಾವು ಡ್ರೈವರ್ ಹಿಂದುಗಡೆಯ ಸೀಟಿನಲ್ಲಿ ಕುಳಿತರು.

ಓಡುವ ಬಸ್ಸು ತಿರುವಿನಲ್ಲಿ ಬಂದಾಗ ಡ್ರೈವರ್ ಜೋರಾಗಿ ಕೂಗಿದ. ಬಸ್‌ನಲ್ಲಿದ್ದವರೆಲ್ಲ ಬೊಬ್ಬಿಟ್ಟರು. ಎದುರಿಗೆ ಬಂದ ಸರಕು ತುಂಬಿದ ಲಾರಿ ಬಸ್‌ಗೆ ಡಿಕ್ಕಿ ಹೊಡೆದಿತ್ತು. ಡ್ರೈವರ್ ಪ್ರಾಣ ಪಕ್ಷಿ ಹಾರಿಹೋಗಿತ್ತು. ಯಾರನ್ನೂ ಯಾರೂ ಸಂಭಾಳಿಸುವ ಸ್ಥಿತಿಯಲ್ಲಿರಲಿಲ್ಲ.

ಯಾದಗಿರಿಯ ಶಾಸಕ ಶ್ರೀ ವಿರುಪಾಕ್ಷಪ್ಪನವರಿಗೂ, ಕಾರವಾರದ ಶಾಸಕ ಶ್ರೀ ಗಾಂವಕರ ಅವರಿಗೂ ಭೀಕರ ಸ್ವರೂಪದ ಗಾಯಗಳಾಗಿದ್ದವು. ಮೂರ್ಛೆ ತಿಳಿದೆದ್ದ ಶಾಸಕರು ಸುಧಾರಿಸತೊಡಗಿದ್ದರು. ಚಂದ್ರಶೇಖರ ಪಾಟೀಲರ ಸುಳಿವಿಲ್ಲ. ಅಪಘಾತಕ್ಕೆ ಸಿಲುಕಿದ ಪಾಟೀಲರ ಎದೆಯಲ್ಲಿ ಡ್ರೈವರ್ ಸೀಟು ನಾಟಿತ್ತು. ಸಿಡಿದು ಬಂದಿದ್ದ ದಪ್ಪನೆಯ ಗಾಜು ಮುಖಮೈಲೆಲ್ಲ ನಟ್ಟು ರಕ್ತ ಸುರಿಯತೊಡಗಿತ್ತು.

ರಕ್ತಸಿಕ್ತ ಎಲ್ಲರನ್ನೂ ತಂದು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯಿತು. ಈ ದುರಂತದ ವಿಷಯ ಆಕಾಶವಾಣಿ ನಾಡಿನಾದ್ಯಂತ ಬಿತ್ತರಿಸಿತು. ಸಮಾಚಾರ ತಿಳಿದ ಜನರು ತಲ್ಲಣಗೊಂಡರು. ಅಬಕಾರಿ ಇಲಾಖೆಯ ಸಚಿವರಾದ ಸ್ನೇಹಿತ ವೀರೇಂದ್ರ ಪಾಟೀಲರು ನೀಲಕಂಠ ಪಾಟೀಲರ ಜತೆಗೂಡಿ ಗುಲಬರ್ಗಾದಿಂದ ಬೆಂಗಳೂರಿಗೆ ಧಾವಿಸಿದರು. ಡಿಸೆಂಬರ್ 22ರ ಮಧ್ಯರಾತ್ರಿ ಪಾಟೀಲರು ಕೊನೆಯುಸಿರೆಳೆದರು. ಅವರ ಚೈತನ್ಯ ಪಕ್ಷಿ ಶಿವಸಾನಿಧ್ಯ ಸೇರಿತು.

ಚಂದ್ರಶೇಖರರ ಪಾರ್ಥಿವ ಶರೀರವನ್ನಿರಿಸಿದ ಆಂಬ್ಯುಲೆನ್ಸ್ ಬೆಂಗಳೂರಿನಿಂದ ಮಹಾಗಾಂವ್‌ಗೆ ಬರುವ ವೇಳೆ ದಾರಿಯುದ್ದಕ್ಕೂ ಜನರು ಕಲೆತು ಕಂಬನಿ ಮಿಡಿದರಲ್ಲದೆ, ತಮ್ಮ ನಾಯಕನಿಗೆ ಅಶ್ರು ತರ್ಪಣ ನೀಡಿ ವಿದಾಯ ಹೇಳಿದರು. ಬೆಳಗಿನ ನಾಲ್ಕು ಗಂಟೆಯ ಬ್ರಾಹ್ಮೀ ಮುಹೂರ್ತದಲ್ಲಿ ಅವರ ಶವಸಂಸ್ಕಾರ ನಡೆಯಿತು.

## ಅವರ ನೆನಪಿನ ಕಂಪು

ತಮ್ಮ ಊರು ಮಹಾಗಾಂವ್‌ನಲ್ಲೇ ತಮ್ಮ ಅಂತಿಮ ಸಮಾಧಿ ಆಗಬೇಕೆಂದು ಅವರ ಕೊನೆಯ ಆಸೆಯಾಗಿತ್ತು. ಮಹಾಗಾಂವ್‌ನಲ್ಲಿ ತರುಣ ಸಂಘ ಸೇರುತ್ತಿದ್ದ ಆ ಹಳೆಯ ಹುಣಿಸೇ ಮರದ ಸಮೀಪ ಷಟ್ಕೋನ ಮಾದರಿಯಲ್ಲಿ ನಿರ್ಮಿಸಲಾದ ಸಮಾಧಿಯಲ್ಲಿ ಚಂದ್ರಶೇಖರರು ಚಿರಶಾಂತಿ ಪಡೆದರು, ಚಿರಾಯುವಾದರು. ಕವಿವಾಣಿ ಉಲಿಯಿತು:

"ಅರೆ ಅರಳಿದ ಮೊಗ್ಗು ಇಡಿಯಾಗಿ ಬಿರಿಯುವ ಮೊದಲೇ
ಉದುರಿ ಬಿತ್ತು.
ಬಿದ್ದು ಹುಡಿಯಾಗಿ ನೆಲದ ಹುಡಿಯಲ್ಲಿ ಬೆರೆಯಿತು.
ಈಗ ಚಂದ್ರಶೇಖರರು ಮಧುರ ನೋವಿನ ನೆನಪು
ಉದುರಿದ ಹೂವು ಹುಡಿಯಲ್ಲಿ ಹುಡಿ
ಉಳಿದಿರುವುದು ಅದರ ಕಂಪು
ಚಂದ್ರಶೇಖರರು ಸುತ್ತೆಲ್ಲ ಇಡುಗಿರುವ ಕಂಪು
ಅವರ ನೆನಹೊಂದು ಕಂಪು..."

ಲಿಂಗೈಕ್ಯರಾದ ಚಂದ್ರಶೇಖರರ ಬಗೆಗೆ ಅತ್ಯಂತ ಕೃತಜ್ಞತಾ ಭಾವದಿಂದ ಜನತೆ ರಾಜ್ಯಮಟ್ಟದ 'ದಿ। ಚಂದ್ರಶೇಖರ ಪಾಟೀಲ ಸ್ಮಾರಕ ಸಮಿತಿ'ಯೊಂದನ್ನು ಸ್ಥಾಪಿಸಿತು. ಮಹಾಗಾಂವ್‌ನಲ್ಲಿಯೂ ಅಂತಹುದೇ ಒಂದು ಸ್ಮಾರಕ ಸಮಿತಿಯನ್ನು ಸ್ಥಾಪಿಸಲಾಯಿತು.

ಹಿರಿಯ ಮಗ ಅರುಣ್ ಕುಮಾರ್ ಪಾಟೀಲರು ಹೇಳಿದ್ದು:

"ಕೊನೆಯ ಉಸಿರಿರುವ ತನಕ 'ಯಜಮಾನ್ರು ಬಂದ್ರೇ?', 'ಯಜಮಾನ್ರು ಬಂದ್ರೇ?' ಎಂದು ನಿಜಲಿಂಗಪ್ಪನವರ ಬಗ್ಗೆ ಭಾಳಾ ಒಂದು ಪ್ರೀತಿ ಮತ್ತು ಕಾಳಜಿಯಿಂದ ಕೇಳ್ತಾ ಇದ್ರು....

"ಖೆಡ್ಡಾ ಆಪರೇಷನ್ ನೋಡಲು ಬಂದಿದ್ದ ಡಾ। ರಾಜೇಂದ್ರ ಪ್ರಸಾದರಿಗೆ ಚಂದ್ರಶೇಖರ ಪಾಟೀಲರ ಅಪಘಾತದ ವಿಷಯ ತಿಳಿಯಿತು. ಆಗ ಬಿ.ಡಿ.ಜತ್ತಿಯವ್ರು ಮುಖ್ಯಮಂತ್ರಿಗಳಾಗಿದ್ರು, ನಿಜಲಿಂಗಪ್ಪನವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ರು, ವಿಷಯ ತಿಳಿದ ತಕ್ಷಣ ರಾಜೇಂದ್ರ ಪ್ರಸಾದರು ವಿಕ್ಟೋರಿಯಾ ಆಸ್ಪತ್ರೆಗೆ ಬಂದು ವಿಸಿಟರ್ ಬುಕ್‌ನಲ್ಲಿ ಹೀಗೆ ಬರೆದ್ರು:


"ಚಂದ್ರಶೇಖರ ಪಾಟೀಲರ ಜೀವ ಬಹಳ ಅಮೂಲ್ಯವಾದದ್ದು. ಅವ್ರನ್ನ ಹೇಗಾದ್ರೂ ರಕ್ಷಿಸಬೇಕು."

ಆದರೆ ಅವರ ಪ್ರಾಣ ಪಕ್ಷಿ ಅದಾಗಲೇ ಹಾರಿಹೋಗಿತ್ತು.

## ಶ್ರದ್ಧೆಯ ಕಣ್ಣೀರು

"ತೀರಿಕೊಂಡ ಕೊನೇವರೆಗೂ, ನಾನು ಬರುವವರೆಗೂ 'ಯಜಮಾನ್ರು ಬಂದ್ರೇ?' ಹಾಗಂತ ಕೇಳ್ತಾ ಇದ್ರು.. ನನ್ನ ವಿಚಾರದಲ್ಲಿ ಅಷ್ಟು ಆಸಕ್ತಿ, ಅನ್ಯೋನ್ಯತೆ ಅವರಿಗೆ. ಅದು ಪಾಟೀಲರ ವ್ಯಕ್ತಿತ್ವ" –ಹೀಗೆಂದು ಉದ್ಗರಿಸಿದವರು ದಿ। ಎಸ್. ನಿಜಲಿಂಗಪ್ಪನವರು.





"ಅವ್ರು ಆ ಬಸ್ ದುರಂತದಲ್ಲಿ ತೀರ್‌ಕೊಂಡ್ರು.. ಆಗ ನನಗೆ ಆದಂಥ ಆಘಾತ ಅದು ಹೇಳಲಾರೆ. ಒಬ್ಬ ಅತ್ಯಂತ ನನ್ನ ಒಡಹುಟ್ಟಿದ ಹಿರಿಯ ಅಣ್ಣ ತೀರಿಕೊಂಡ್ರೆ ಹೇಗಾಯ್ತೋ ಆ ಥರ ಆಯ್ತು!

–ದಿ। ರಾಮಕೃಷ್ಣ ಹೆಗಡೆ

"ಅವ್ರ ಎಸ್‌ಟಿ ಬಸ್‌ನಲ್ಲಿ ತಮ್ಮ ಶಾಸಕ ಮಿತ್ರರೊಂದಿಗೆ ಮೈಸೂರಿನಿಂದ ಬೆಂಗಳೂರಿಗೆ ಹಿಂದಿರುಗುತಿದ್ರು. ಅವರ ಬಸ್ಸು ಕೆಂಗೇರಿ ಬಳಿಗೆ ಬರುತ್ತಿದ್ದಂತೆ, ಹಿಂದೆ ಕುಳಿತಿದ್ದಂಥ ಚಂದ್ರಶೇಖರರು, ಮುಂದೆ ಕುಳಿತಂಥ ಇನ್ನೊಬ್ಬ ಶಾಸಕರನ್ನು ಎಬ್ಬಿಸಿ ಹಿಂದಕ್ಕೆ ಕಳಿಸಿದ್ರು, ಇವ್ರು ಕುಳಿತ್ರು. ಸಾಯುವಾಗ



ಕೂಡಾ ಅವ್ರು ತಮ್ಮ ಜೀವ ಅರ್ಪಿಸಿ ಇನ್ನೊಬ್ಬನ ಜೀವ ಉಳಿಸಿದ್ರು. ಇಲ್ದೇ ಹೋಗಿದ್ರೆ ಆ ಶಾಸಕ ಸತ್ತುಹೋಗ್ತಾ ಇದ್ರು. ಇವ್ರು ಉಳ್ಕೋತಾ ಇದ್ರು. ಆದ್ರೆ ಆ ಪ್ರಸಂಗ ನೆನೆದ್ರೆ ಇವತ್ತಿಗೆ ಕೂಡಾ ದುಃಖ ಆಗ್ತದೆ. ಅಂತೂ ಒಬ್ಬ ಮನುಷ್ಯನನ್ನು ಈ ಬಸ್ ದುರ್ಘಟನೆ ಆಹುತಿ ತೆಗೆದುಕೊಂಡ್ತಲ್ಲ, ಕರ್ನಾಟಕವನ್ನು ಬಡವನ್ನಾಗಿ ಮಾಡ್ತಲ್ಲ ಎಂಬಂಥಒಂದು ದುಗುಡ ನಮ್ಮಲ್ಲಿ ಉಳ್‌ಕೊಂಡಿದೆ. ಇಲ್ದೇ ಹೋಗಿದ್ರೆ, ಅವ್ರು ನಮ್ಮ ಮಧ್ಯದಲ್ಲಿದ್ದು ನಾಯಕತ್ವವನ್ನು ಒದಗಿಸಿ ಸ್ಫೂರ್ತಿಯನ್ನು ಕೊಡುವಂಥ ಒಂದು ದೊಡ್ಡಶಕ್ತಿಯಾಗಿ ಇರ್ತಾ ಇದ್ರು...ಎಂದು ಒಂದು ಭಾವನೆ ಅದು ಕಳೆದು ಹೋಗ್ ಬಿಟ್ತು..."


–ನಾಡೋಜ ಡಾ। ಪಾಟೀಲ್ ಪುಟ್ಟಪ್ಪ

"1960ರಲ್ಲಿ ಸಂಭವಿಸಿದ ಆ ಬಸ್ಸಿನ ದುರ್ಘಟನೆ ಇಡೀ ಕರ್ನಾಟಕದ ಜನರಿಗೆ ದಿಗ್ಭ್ರಮೆ ಉಂಟುಮಾಡಿತು. ಅಂದು ಒಬ್ಬ ಮಹಾನ್ ವ್ಯಕ್ತಿಯನ್ನು ನಾವು ಕಳೆದುಕೊಂಡಂತಾಯಿತು."

–ಶ್ರೀ ಎನ್. ಧರಂಸಿಂಗ್

"..He distiguished himself by his leadership, his capacity for bringing together irreconcilable elements and making them work in unison and by his genius for spotting talent and using it for advancing public weal....ಅವರ ಕಾರ್ಯ ದಕ್ಷತೆ, ನಿಷ್ಠೆಗಳು ನಮ್ಮ ದೇಶದ ಪ್ರಗತಿಗೆ ಅತ್ಯಂತ ಅವಶ್ಯವಾಗಿರುವ ಸಂದರ್ಭದಲ್ಲಿಯೇ ಮೃತ್ಯು ಅವರನ್ನು ಸೆಳೆದೊಯ್ದುದು ನಮ್ಮ ರಾಷ್ಟ್ರದ ದುರ್ಭಾಗ್ಯವೆಂದೇ ಭಾವಿಸುತ್ತೇನೆ."

–ಡಾ| ರಫೀಕ್ ಝಕಾರಿಯಾ



"His simplicity and selfless service stood out as an ex ample for otfers to follow"

-Dr.M.Chennareddy



"ಸ್ವಾತಂತ್ರ್ಯ ಪೂರ್ವದ ಕಾಲದಲ್ಲಿಯ ಶ್ರೀ ಪಾಟೀಲರು, ಬಹಳ ಚಾತುರ್ಯ ಮತ್ತು ಕುಶಲಮತಿಯಿಂದ ಸಮಾಜ ವಿಕಾಸದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಅವರ ಪ್ರದೇಶದ ಸರ್ವತೋಮುಖ ಅಭಿವೃದ್ಧಿಯಿಂದಾಗಿ ಪಾಟೀಲರು ಸದಾ ಸಾರ್ವಜನಿಕರ ಸ್ಮರಣೆಯಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ....He was an energetic

worker who toiled hard for the people's uplift and who participated in the freedom struggle in Hyderabad State, at great personal risk.."

—ಸ್ವಾಮಿ ರಮಾನಂದ ತೀರ್ಥ

"He had no political grudge... He was a selfless kingmaker.... He knew to keep the right man in the right place..."

-B.S.Patil, Balabatti

"...He was a Mahavir of Mahagaon..."

-Mehdi Navaz Jung

"ದೇಶಕ್ಕೆ ಹೆಚ್ಚು ಹೆಚ್ಚಿನ ಸೇವೆ ಬೇಕು ಎನ್ನುತ್ತಿರುವಾಗಲೇ ಶ್ರೀ ಚಂದ್ರಶೇಖರ ಪಾಟೀಲರು ಅಕಾಲ ಮೃತ್ಯುವಿಗೆ ತುತ್ತಾದರು. ಆದರ್ಶ ಕಾರ್ಯಕರ್ತರಾಗಿದ್ದು ಅವರು ಜನಸಾಮಾನ್ಯರ ಜತೆ ಸಾಮಾನ್ಯರಾಗಿ ಬೆರೆತರು. ಅಪ್ಪಟ ರಾಷ್ಟ್ರೀಯವಾದಿಗಳಾಗಿದ್ದ ಅವರು ಜನತೆಯ ಸುಖದುಃಖಗಳನ್ನು ಅರಿತು ಸಮಸ್ಯೆಗಳನ್ನು ಪರಿಹರಿಸುವಲ್ಲು ತಮ್ಮ ಶಕ್ತಿ ಸಾಮರ್ಥ್ಯ ಹಾಗೂ ಸರ್ವಸ್ವವನ್ನು ಸವೆಯಿಸಿದರು..."

—ಡಾ। ದೇವೇಂದ್ರಕುಮಾರ ಹಕಾರಿ

"..An innate rebel, a mass leader and creater of leaders.."

-Gopalrao Mudubi

"ಆಕ್ಸಿಡೆಂಟ್‌ನಲ್ಲಿ ಹೋದಾಗ, ಕರ್ನಾಟಕಕ್ಕೆ ಅಷ್ಟೇ ಅಲ್ಲ ಭಾರತಕ್ಕೆ ಒಬ್ಬ ನಾಯಕನನ್ನು ಕಳಕೊಂಡ ಹಾಗಾಯ್ತು. ದುರ್ದೈವಕ್ಕೆ ಆತ ತೀರ್‌ಕೊಂಡ.

ನಮ್ಮ ಮನೆತನಕ್ಕೂನೂ ಏನೋ ಒಂದು ರಾವು, ಒಂದು ದುರ್ದೈವ ಎಸಗಿದಂತಾಯ್ತು...

"ಮರಣ ಮರ್ಯಾದೆ ತಂದೀತು ಎನ್ನುತ್ತಾರೆ.. ಹಾಗೆಯೇ ಆಯ್ತು... ತನ್ನ ನಿಷ್ಕಳಂಕ ಚಾರಿತ್ರ್ಯ, ಕಪಟವರಿಯದ ನೇರ ನೀತಿಯುತ ರಾಜಕಾರಣ, ನಿರಪೇಕ್ಷ ಜನಸೇವೆಗಳು ತಂದ ಕೀರ್ತಿಯ ಶಿಖರದ ಮೇಲಿರುವಾಗ ಚಂದ್ರಶೇಖರರಿಗೆ ಒದಗಿದ ಸಾವು ಒಂದು ಅರ್ಥದಲ್ಲಿ ಪುಣ್ಯದ ಸಾವು...."

–ಹಿರಿಯಣ್ಣ ಶ್ರೀ ರುದ್ರಶೆಟ್ಟಿ ಪಾಟೀಲ



"1940ರಿಂದ 1960ರವರೆಗೆ ನಾವು ಕೇವಲ ಗೆಳೆಯರಾಗಿರಲಿಲ್ಲ; ಎರಡು ದೇಹ ಒಂದು ಹೃದಯದವರಾಗಿದ್ದೆವು.... ನನಗೆ ರಾಜಕೀಯ ಜೀವನ ನೀಡಿದವರೇ ಚಂದ್ರಶೇಖರ ಪಾಟೀಲರು.. ನನಗಂತೂ ಅವರು ಎಂದೂ ಮರೆಯಲಾಗದ ಸ್ನೇಹಿತರು. ನಮ್ಮ ಭಾಗದ ಕಾಂಗ್ರೆಸ್ ಸಂಸ್ಥೆಯ ಸಂಘಟನೆಗೆ ಅವರು ಮುಖ್ಯ ಶಕ್ತಿಯಾಗಿದ್ದರು..."

–ದಿ। ವೀರೇಂದ್ರ ಪಾಟೀಲರು

"..ಆತ ಇದ್ದಿದ್ದರೆ ಪಕ್ಷ ಸಬಲ ಹಾಗೂ ನೀತಿನಿಷ್ಠವಾಗುತ್ತಿತ್ತು..he was our Lord Mountbatten..."

–ದಿ। ಗುದ್ಲೆಪ್ಪ ಹಳ್ಳಿಕೇರಿ

"..ಕುಂದಣ ಹರಳ ಕಳಿತೋ।
ಹಿಂದುಸ್ತಾನದ ಮುತ್ತು॥ ಚಂದ್ರಶೇಖರ ಗೌಡರ ಮ್ಯಾಲ।
ಮುನಿದ ಭಗವಂತ..॥
ಪೊಡವಿಯಲ್ಲಿ ಮಾಗಾಂವಿ ಜಗಪ್ರಖ್ಯಾತ।
ಬಡವ ಪಂಚಾಕ್ಷರಿ ಬರೆದಾ ಗೌಡರ ಕವಿತಾ॥

*** ***

ಮಾಡಿದ ಉಪಕಾರನಿಂದ ಮರೀಲ್ಯಾಂಗಂತ।
ಖೋಡಿ ನನ್ನ ದೈವಕ ನಡುವ ಆಯ್ತೋ ಘಾತ
ಬೇಡಿ ಬಂದಿರಬೇಕೊ ನಾನು ಇಷ್ಟರ ಪೂರ್ತ
ಉಡುತೆಡಿ ಮಾದೇವಿ ಎನಗ ಇಡು ವರದ ಹಸ್ತ॥"

-ಶ್ರೀ ಮೀರಾಸಾಹೇಬ ಜಾತಗಾರ

"He was a dynamic organisor.. Had no aspirations ....lived a simple life... He was a man of strong will...."

-Sri.Jagannatharao Chandarki

"If there are only four or five persons like Chandrashekhara Patil in a country, it can rise from depths of despair to pinnacles of glory"

-Sri. Amjadali Khan(Dev.Officer)

"He was always at the helm of affairs, working harder and travelling tirelessly more than the permanent officials themselves"

-Sri. M.Vasudeva Rao(D.C)

"...ನಮ್ಮ ತಂದೆ ಇಷ್ಟು ದೊಡ್ಡ ವ್ಯಕ್ತಿಯೆಂಬುದನ್ನು ಅವರ ಸಾವಿನಲ್ಲಿ ತಿಳಿದೆ. ಅವರ ಸಾವಿನಿಂದ ನಾನು ಅನಾಥನಾದೆ."

-ಶ್ರೀ ಅರುಣ್ ಕುಮಾರ್ ಪಾಟೀಲ್

## ಕನಸು ಕನಸಾಗಿಯೇ ಕಮರಿತು

ನಿಧನ ಕಾಲಕ್ಕೆ ಚಂದ್ರಶೇಖರರ ವಯಸ್ಸು ಕೇವಲ ನಲವತ್ತೆರಡು. ಅವರ ಸಾವು ತೀರ ಅನಿರೀಕ್ಷಿತ, ಅಕಾಲಿಕ. ಹೈದರಾಬಾದ್ ಸಂಸ್ಥಾನ ಭಾರತದ ಒಕ್ಕೂಟದಲ್ಲಿ ವಿಲೀನಗೊಂಡು ಹನ್ನೆರಡು ವರ್ಷಗಳಷ್ಟೆ ಕಳೆದಿದ್ದವು. ಕನ್ನಡ ಭಾಷೆಯ ಮೂರು ಜಿಲ್ಲೆಗಳಾದ, ಗುಲಬರ್ಗಾ, ರಾಯಚೂರು ಮತ್ತು ಬೀದರ್ ನವ ಮೈಸೂರು ರಾಜ್ಯದಲ್ಲಿ ಅಪ್ಪಟ ಕನ್ನಡತನದ ಕಂಪನ್ನು ಬೀರಿ ನಾಲ್ಕು ವರ್ಷಗಳಷ್ಟೆ ಸಂದಿದ್ದವು. ತೀರಾ ಹಿಂದುಳಿದಿದ್ದ ಈ ಮೂರೂ ಜಿಲ್ಲೆಗಳ ಸರ್ವತೋಮುಖ ಅಭಿವೃದ್ಧಿ ಕೆಲಸಗಳು ಹಾಗೆಯೇ ಉಳಿದಿದ್ದವು. ಆ ಬಗ್ಗೆ ಚಂದ್ರಶೇಖರ ಪಾಟೀಲರು ತಮ್ಮದೇ ಆದ ರೀತಿಯಲ್ಲಿ ಮೂರೂ ಜಿಲ್ಲೆಗಳ ಅಭಿವೃದ್ಧಿಯ ಕನಸುಗಳನ್ನು ನೇಯ್ದಿದ್ದರು. ಅವು ಕನಸುಗಳಾಗಿಯೇ ಉಳಿದು ಹೋದದ್ದು ಕರ್ನಾಟಕ ರಾಜ್ಯ, ಅದರಲ್ಲೂ ಹೈದರಾಬಾದ್ ಕರ್ನಾಟಕ ಪ್ರದೇಶದ ದುರ್ದೈವ.

ಚಂದ್ರಶೇಖರರು ಬದುಕಿದ್ದು ಕೇವಲ ನಾಲ್ಕು ದಶಕಗಳಾಗಿದ್ದರೂ ಅವರ ಸಾಧನೆ ನೂರು ವರ್ಷಕ್ಕೂ ಮೀರುವಂತಿತ್ತು. ಸಂಘಟನೆ, ಸೇವೆ ಅವರ ಧ್ಯೇಯ ವಾಕ್ಯ. ಅನ್ಯಾಯ ಅತ್ಯಾಚಾರಗಳ ವಿರುದ್ಧ ಸಿಡಿದೇಳುವ ನಿರ್ಭೀತ; ಅಜ್ಞಾನ, ದಾರಿದ್ರ್ಯಗಳ ಎದುರು ಹೋರಾಟ; ಎಲ್ಲಕ್ಕೂ ಮಿಗಿಲಾಗಿ ದೇಶಪ್ರೇಮ. ಅವರೇ ಅತ್ಯಂತ ಪುಣ್ಯಾತ್ಮ!

## ಸವಿನೆನಪಿಗೆ ಸ್ಮಾರಕಗಳು

ಚಂದ್ರಶೇಖರ ಪಾಟೀಲರ ಸವಿನೆನಪಿಗಾಗಿ ಸ್ಥಾಪಿಸಲ್ಪಟ್ಟ ಸ್ಮಾರಕಗಳು ಹತ್ತು ಹಲವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

ಮಹಾಗಾಂವ್‌ನ ಹೃದಯಭಾಗದಲ್ಲಿ ಸ್ಥಾಪಿಸಲಾದ ಅವರ ಪಂಚಲೋಹದ ಪ್ರತಿಮೆ, ಗುಲಬರ್ಗಾ–ಬೀದರ್ ಹೆದ್ದಾರಿಯಲ್ಲಿ ಮಹಾಗಾಂವ್‌ಗೆ

ತಿರುಗಿಕೊಳ್ಳುವ ಜಾಗದ ಚಂದ್ರಶೇಖರ ಪಾಟೀಲ್ ಸರ್ಕಲ್, ಗುಲಬರ್ಗಾ ನಗರ ಕೇಂದ್ರದಲ್ಲಿ ಕಟ್ಟಲಾದ ಪ್ರಖ್ಯಾತ 'ಚಂದ್ರಶೇಖರ ಪಾಟೀಲ ಕ್ರೀಡಾಂಗಣ' ಮತ್ತು ಅಲ್ಲೇ ಅನಾವರಣಗೊಂಡ ಅವರ ಪ್ರತಿಮೆ, ಹೈದರಾಬಾದ್ ಶಿಕ್ಷಣ ಸಂಸ್ಥೆಗೆ ಸೇರಿದ 'ಚಂದ್ರಶೇಖರ ಪಾಟೀಲ್ ಹಾಸ್ಟೆಲ್' ಹಾಗೂ ಅನಾವರಣಗೊಂಡ ಪುತ್ಥಳಿ, ಮಹಾಗಾಂವ್‌ನಲ್ಲಿ ಚಂದ್ರಶೇಖರರು ಕೈಗೊಂಡ ಅಭಿವೃದ್ಧಿ ಕೆಲಸಗಳಿಂದಾಗಿ ಹೆಸರಿಸಲ್ಪಟ್ಟ 'ಚಂದ್ರನಗರ', ಜಿಲ್ಲೆಯ ಗಂಡೋರಿ ನೀರಾವರಿ ಯೋಜನೆಗೆ ಪಾಟೀಲರ ನಾಮಕರಣ – ಹೀಗೆ ಹತ್ತು ಹಲವು ಸ್ಮಾರಕಗಳು.

***

# 2

# ಮಹಾಗಾಂವ್ ಚಂದ್ರಶೇಖರ ಪಾಟೀಲ್
# ಸತ್ವಶಾಲಿ ಚಿಂತನೆಗಳು

"ಭಾರತದ ಪ್ರಜಾಪ್ರಭುತ್ವದ ತತ್ತ್ವಗಳಾಗಿರತಕ್ಕಂಥ ಸಮಾನತೆ, ಸ್ವಾತಂತ್ರ್ಯತೆ ಮತ್ತು ಸಹೋದರತೆಯ ತತ್ತ್ವಗಳನ್ನು ಎತ್ತಿಹಿಡಿಯುವ ಸಲುವಾಗಿ ತಾವೇ ಕರ್ಪೂರದ ಹಾಗೆ ಸುಟ್ಟುಕೊಂಡು ಇತಿಹಾಸದಲ್ಲಿ ಸೇರಿರತಕ್ಕಂಥ ವ್ಯಕ್ತಿ ಚಂದ್ರಶೇಖರ ಪಾಟೀಲರು..."

–ಖ್ಯಾತ ಇತಿಹಾಸಕಾರ ಡಾ। ಬಿ.ಸಿ.ಮಹಾಬಳೇಶ್ವರಪ್ಪ



ಸ್ವಾತಂತ್ರ್ಯ ಬಂದ ಬಳಿಕ ಚಂದ್ರಶೇಖರರ ಬದುಕು ತಮ್ಮ ಜನರ ಏಳಿಗೆಗಾಗಿ ಮುಡಿಪಾಯಿತು.

ಪಾಟೀಲರು 29.10.1948ರಲ್ಲಿ ಮಹಾಗಾಂವ್‌ನಲ್ಲಿ ಕಾಂಗ್ರೆಸ್ ಸಮಿತಿಯನ್ನು ಸ್ಥಾಪಿಸಿದರು. ಸರ್ವಾನುಮತದಿಂದ ಅಧ್ಯಕ್ಷರೆಂದು ಆಯ್ಕೆಯಾದ ಪಾಟೀಲರು ಜನತೆಗೆ ನವಮನ್ವಂತರದ ದೀಕ್ಷೆಯನ್ನು ದಯಪಾಲಿಸಿದರು. ಅಂದು ರಜಾಕರರ ಚಿತ್ರಹಿಂಸೆಗೆ ಬಲಿಯಾಗಿದ್ದ ಜನತೆ ಇಂದು ಪ್ರತೀಕಾರ ರೂಪದಲ್ಲಿ ತಮ್ಮ ಮೇಲೆ ಸೇಡು ತೀರಿಸಿಕೊಳ್ಳಬಹುದೆಂದು ಅಂಜಿದ್ದ ಮುಸ್ಲಿಂ ಬಾಂಧವರಿಗೆ ಅಭಯ ನೀಡುತ್ತ, ಹಳ್ಳಿ ಹಳ್ಳಿಗಳಲ್ಲಿ ಅಲೆದರು. ಅಧಿಕಾರಿಶಾಹಿಯೂ ಈ ಬೆಳವಣಿಗೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿತು. ಮಹಾಗಾಂವ್ ಕಾಂಗ್ರೆಸ್ ಸಮಿತಿ 'ಗ್ರೂಪ್ ಕಾಂಗ್ರೆಸ್' ಸದಸ್ಯರ ಸಂಖ್ಯೆ ದಿನೇ ದಿನೇ ವೃದ್ಧಿಸತೊಡಗಿತು.

ಹೊಸ ರಾಜಕೀಯ ಜೀವನದಲ್ಲಿ ಪ್ರವೇಶಿಸುತ್ತಿದ್ದಂತೆಯೇ ಪಾಟೀಲರು ಗಾಂಧೀಜಿಯವರ ತತ್ತ್ವಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಅವಿರತವಾಗಿ ಶ್ರಮಿಸಿದರು. ಸ್ವಚ್ಛತೆ, ಶಿಸ್ತು, ಶಿಕ್ಷಣದ ಮಹತ್ವವನ್ನು ಕುರಿತು ಭಾಷಣಗಳನ್ನು ವ್ಯವಸ್ಥೆ ಮಾಡುತ್ತಿದ್ದರು.

ಚಂದ್ರಶೇಖರ ಪಾಟೀಲರು ಯಾವುದೇ ರಾಜಕೀಯ ಸಭೆ ಮುಕ್ತಾಯಗೊಂಡ ತಕ್ಷಣ ಶ್ರಮದಾನ ಕೈಗೊಳ್ಳುತ್ತಿದ್ದರು. ಅಣ್ಣ ರುದ್ರಶೆಟ್ಟಿ ಪಾಟೀಲರ ಮುಂದಾಳತನದಲ್ಲಿ ಗೃಹರಕ್ಷಕ ದಳ ಮತ್ತು ಕಾಂಗ್ರೆಸ್ ಮಹಿಳಾ ಸೇವಾದಳಗಳು ಸಾಮಾಜಿಕ ಚಟುವಟಿಕೆಗಳಲ್ಲಿ ಸತತವಾಗಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರು. ಜೋಗಪ್ಪ ಭೋಗಶೆಟ್ಟಿ, ಜಯದೇವಿ ತಾಯಿ ಲಿಗಾಡೆ, ಜಿ.ಎಸ್.ಹಾ;ಲಪ್ಪ, ವೀರೇಂದ್ರ ಪಾಟೀಲ, ಉರುವಕೊಂಡ ಜಗದ್ಗುರುಗಳು, ಉದಗೀರ್ ಆರ್ಯ ಮೊದಲಾದ ಸಮಾಜದ ನೇತಾರರು ಮತ್ತು ಅನೇಕ ಗಣ್ಯರು ಮಹಾಗಾಂವ್‌ನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಈ ಬಗೆಯ ಕಾರ್ಯಕ್ರಮಗಳು 'ಮಹಾಗಾಂವ್ ಗ್ರೂಪ್'



**101 ಎತ್ತುಗಳ ಮೆರವಣಿಗೆಯಲ್ಲಿ**

ನಲ್ಲಿ ಬರುತ್ತಿದ್ದ ಎಲ್ಲ ಹಳ್ಳಿಗಳಲ್ಲಿಯೂ ನಡೆಯುವಂತೆ ಪಾಟೀಲರು ವ್ಯವಸ್ಥೆ ಮಾಡಿದ್ದರು. ಪಾಟೀಲರ ಕಾರ್ಯಕ್ಷಮತೆ, ಸಂಘಟನಾ ಸಾಮರ್ಥ್ಯವನ್ನು ಗುರುತಿಸಿದ ಕಾಂಗ್ರೆಸ್ ಪಕ್ಷ ಅವರನ್ನು ಒಂದು ವರ್ಷದ ಒಳಗಾಗಿ ಗುಲಬರ್ಗಾ ತಾಲ್ಲೂಕಿನ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಈ ಸಂದರ್ಭದಲ್ಲಿ ಚಂದ್ರಶೇಖರರ ಆಪ್ತರೂ, ನಿಕಟವರ್ತಿಗಳೂ ಆಗಿದ್ದ ಕಮಲಾಪುರದ ಶಂಕರ ಶೆಟ್ಟಿ ಪಾಟೀಲರನ್ನು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಜನರಲ್ ಸೆಕ್ರೆಟರಿ ಎಂದು ನೇಮಿಸಲಾಗಿತ್ತು. ಕಾಂಗ್ರೆಸ್ ಸಂಸ್ಥೆಗಳ ಸ್ಥಾಪನೆಗಾಗಿ, ಕಾಂಗ್ರೆಸ್ ಸದಸ್ಯರ ಸಂಖ್ಯೆಯ ಬಲವರ್ಧನೆಗಾಗಿ ಇವರಿಬ್ಬರೂ ಅಹರ್ನಿಶಿ ದುಡಿದರು. ಅಲ್ಲಿಂದಲೇ ಚಂದ್ರಶೇಖರ ಪಾಟೀಲರು ಓರ್ವ ಪ್ರಮುಖ ನೇತಾರನಾಗಿ ಕಾಣಿಸಿಕೊಂಡರು.

## ಉನ್ನತ ವ್ಯಕ್ತಿತ್ವ



ಪಕ್ಷದ ಕಾರ್ಯಕರ್ತರ ಸಭೆಯಲ್ಲಿ

ಚಂದ್ರಶೇಖರ ಪಾಟೀಲರ ಕ್ರಿಯಾಶೀಲತೆಯನ್ನು ಗುರುತಿಸಿದ ಕಾಂಗ್ರೆಸ್ ಪಕ್ಷ ಅವರನ್ನು ಗುಲಬರ್ಗಾ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ

ಸದಸ್ಯರನ್ನಾಗಿ ಆಯ್ಕೆ ಮಾಡಿತು. ಪಾಟೀಲರು ಬಾಲ್ಯದಿಂದಲೇ ಕೈಗೆತ್ತಿಕೊಂಡ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಮಾಡುವ ಗುಣವನ್ನು ಹೊಂದಿದ್ದವರು. ಅವರ ಧೈರ್ಯ, ಸಾಹಸ, ದಿಟ್ಟತನ ಧೀಮಂತ ವ್ಯಕ್ತಿತ್ವಕ್ಕೆ ಮಾರುಹೋದ ಜನತೆ ಅವರನ್ನು ತಮ್ಮ ಗುಂಪಿನಲ್ಲೆಲ್ಲ ಗಣನೀಯ ವ್ಯಕ್ತಿಯೆಂದೇ ಪರಿಗಣಿಸುತ್ತಿದ್ದರು. ಆ ವರ್ಷ ಕಳೆಯುವುದರೊಳಗಾಗಿ ಪಾಟೀಲರು ಗುಲಬರ್ಗಾ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದರು. ಅವಿರೋಧವಾಗಿ ಆಯ್ಕೆಗೊಂಡ ಚಂದ್ರಶೇಖರರು ಪೂರ್ಣಾವಧಿಯವರೆಗೆ ಅಧಿಕಾರದಲ್ಲಿದ್ದು ಪಕ್ಷದ ಶಿಸ್ತು ಮತ್ತು ಸಂಘಟನೆಯನ್ನು ಸುಸೂತ್ರವಾಗಿ ನಡೆಸಿದರು.

## ಹೈದರಾಬಾದ್ ವಿಧಾನಸಭಾ ಸದಸ್ಯರಾಗಿ ಪಾಟೀಲ್

ಸರ್ವತಂತ್ರ ಸ್ವತಂತ್ರ ಪ್ರಜಾಪ್ರಭುತ್ವದ ಗಣರಾಜ್ಯವಾದ ಭಾರತವು ತನ್ನ ಪ್ರಜಾಪ್ರತಿನಿಧಿಗಳ ಆಯ್ಕೆಗಾಗಿ 1951ರ ಡಿಸೆಂಬರ್ ತಿಂಗಳಲ್ಲಿ ದೇಶದಲ್ಲಿ ಸಾರ್ವತ್ರಿಕ ಚುನಾವಣೆಯನ್ನು ಘೋಷಿಸಿತು. 90ಲಕ್ಷ ಮತದಾರರನ್ನು ಹೊಂದಿದ ಹೈದರಾಬಾದ್ ಪ್ರಾಂತ್ಯದಲ್ಲಿ 142 ಮುಕ್ತ ಮತಕ್ಷೇತ್ರದಿಂದಲೂ 31 ಕಾಯ್ದಿರಿಸಿದ ಮತಕ್ಷೇತ್ರದಿಂದಲೂ, ಇಬ್ಬರನ್ನು ನಾಮಕರಣ ಮಾಡಿಯೂ ಒಟ್ಟು 175ಮಂದಿ ವಿಧಾನ ಸಭಾ ಸದಸ್ಯರ ಆಯ್ಕೆ ನಡೆಯಬೇಕಿದ್ದಿತು.

ಡಿಸೆಂಬರ್ 21ರಂದು ನಡೆದ ಈ ಸಾರ್ವತ್ರಿಕ ಚುನಾವಣೆಯಲ್ಲಿ ಕಮಲಾಪುರ ಕ್ಷೇತ್ರಕ್ಕೆ ಹಂಚಲ್ಪಟ್ಟಿದ್ದ ಕಾಳಗಿ, ನರೋಣ, ಕಮಲಾಪುರ ವಿಭಾಗಗಳ 145 ಗ್ರಾಮಗಳ ಮತದಾರರು ಶ್ರೀ ಚಂದ್ರಶೇಖರ ಪಾಟೀಲರ ಜೋಡೆತ್ತಿನ ಗುರುತಿಗೆ ಮತ ನೀಡಿ ಪ್ರಚಂಡ ಬಹುಮತದಿಂದ ಅವರನ್ನು ಆರಿಸಿ ತಂದರು.

ಆ ಸಂದರ್ಭದ ಒಂದು ಸನ್ನಿವೇಶ–

ಚಂದ್ರಶೇಖರರ ಎದುರಾಳಿ ಸಮಾಜವಾದಿ ಪಕ್ಷದ ಜಂಬಗಿ ಹಣಮಂತರಾಯರು. ಲೋಕಸಭಾ ಮತಕ್ಷೇತ್ರಕ್ಕೆ ರಮಾನಂದ ರಾಯರು

ಕಾಂಗ್ರೆಸ್ ಪಕ್ಷದ ಹುರಿಯಾಳು. ಪ್ರತಿಪಕ್ಷದ ಅವರ ಎದುರಾಳಿಯೆಂದರೆ ಶರಣಗೌಡರು.

ಕೆಲವು ಕಾಂಗ್ರೆಸ್ ಕಾರ್ಯಕರ್ತರು ಈ ಚುನಾವಣೆಯ ಪ್ರಚಾರದಲ್ಲಿ ವಿಲಕ್ಷಣ ಧೋರಣೆಯೊಂದನ್ನು ಹೊಂದಿದ್ದರು. ವಿಧಾನ ಸಭೆ ಚುನಾವಣೆಯಲ್ಲಿ ಚಂದ್ರಶೇಖರರಿಗೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಶರಣಗೌಡರಿಗೆ ಮತನೀಡಬೇಕೆಂದು ಗುಪ್ತ ಪ್ರಚಾರ ನಡೆಸಿದರು.

ಚಂದ್ರಶೇಖರರ ಹಿರಿಯ ಸಹೋದರ ರುದ್ರಶೆಟ್ಟಿಯವರೂ ಇದೇ ಧೋರಣೆಯನ್ನು ಹೊಂದಿದವರಾಗಿದ್ದರು. ತತ್ತ್ವನಿಷ್ಠರಾದ ಚಂದ್ರಶೇಖರರಿಗೆ ಈ ವಿಷಯ ಕಿವಿಗೆ ಬಿತ್ತು. ಅವರೆಂದರು–

"ಇಂಥಾ ಕಫನ್‌ಚೋರ್ ಕೆಲಸ ಬ್ಯಾಡಾ.... ರಮಾನಂದರ ವಿರುದ್ಧ ಓಟು ಕೊಡೂದ ಇದ್ದರ, ನನ್ನ ವಿರುದ್ಧಾನೂ ಕೊಡಲ್ಯಾಕ ಹೇಳ್ರಿ..."

ಎಂದು ಕಾರ್ಯಕರ್ತರಿಗೆ ಅಪ್ಪಣೆ ಕೊಡಿಸಿದು. ಪಕ್ಷವನ್ನು ಪ್ರತಿನಿಧಿಸುವ ವ್ಯಕ್ತಿಯ ಜಾತಿ, ಕುಲ, ಗೋತ್ರಗಳನ್ನು ನೋಡಬಾರದೆಂಬುದನ್ನು ಅವರೆಲ್ಲರಿಗೂ ಮನದಟ್ಟು ಮಾಡಿದರು. ಆಗ ಕಾಂಗ್ರೆಸ್ ಪಕ್ಷದ ಪ್ರಚಾರ ಕಾರ್ಯ ಸರಿಯಾದ ಮಾರ್ಗ ಹಿಡಿಯಿತು. ಚಂದ್ರಶೇಖರರೂ, ರಮಾನಂದ ತೀರ್ಥರೂ ಚುನಾವಣೆಯಲ್ಲಿ ಬಹುಮತದಿಂದ ಗೆದ್ದು ಬಂದರು.

ಶ್ರೀ ಶಂಕರ ಶೆಟ್ಟಿ ಪಾಟೀಲರು ಹಾಗೂ ಶರಣಯ್ಯ ಸ್ವಾಮಿಗಳು ಚುನಾವಣಾ ಪ್ರಚಾರದ ಜವಾಬ್ದಾರಿಯನ್ನು ಹೊತ್ತುಕೊಂಡು ತಮ್ಮ ನಾಯಕನ ಯಶಸ್ಸಿಗೆ ಕಾರಣರಾದರು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಪಾಟೀಲರು ತಮ್ಮ ಪಕ್ಷದ ಇನ್ನುಳಿದ ಅಭ್ಯರ್ಥಿಗಳ ಯಶಸ್ಸಿಗಾಗಿ ಜಿಲ್ಲೆಯಾದ್ಯಂತ ಪ್ರಚಾರ ಕಾರ್ಯ ಕೈಗೊಂಡರು. ಪಾಟೀಲರಿಗೆ ತಮ್ಮ ಯಶಸ್ಸು ಎಷ್ಟು ಮಹತ್ವದ್ದಾಗಿತ್ತೋ ಅಷ್ಟೇ ಮಹತ್ವ ತಮ್ಮ ಪಕ್ಷದ ಯಶಸ್ಸು ಆಗಿತ್ತು. ಕಾಂಗ್ರೆಸ್ ಪಕ್ಷ ಬಹುಮತ

ಪಡೆದು ಶ್ರೀ ರಾಮಕಿಶನ್ ರಾವ್ ಹೈದರಾಬಾದ್ ರಾಜ್ಯದ ಪ್ರಥಮ ಮುಖ್ಯಮಂತ್ರಿಯಾದರು.

ಆಗಿನ್ನೂ ಪಾಟೀಲರು ಮೂವತ್ತಮೂರು ವರ್ಷದ ನವ ತರುಣ. ಅವರ ವ್ಯಕ್ತಿತ್ವ ನಾಡಿನಾದ್ಯಂತ ಜನರ ಮನಸ್ಸಿನಲ್ಲಿ ಅಚ್ಚಳಿಯದಂತೆ ಮೂಡಿಬಂತು.

ಅದೇ ಸಮಯದಲ್ಲಿ ಪಾಟೀಲರನ್ನು ಕಾಂಗ್ರೆಸ್ ಪಕ್ಷ 'ಪಾರ್ಟಿ ವಿಪ್' ಆಗಿ ನೇಮಿಸಿಕೊಂಡಿತು. ಇದು 1952 ಮತ್ತು 1957ರ ಅವಧಿ. ಸಭೆಯಲ್ಲಿ ಯಾವುದೇ ವಿಷಯದ ಮೇಲೆ ಮಂಡನೆಯಾಗಲಿ ಖಂಡನೆಯಾಗಲಿ ಎಲ್ಲವೂ ಕ್ರಮಬದ್ಧವಾಗಿ ಪೂರ್ವಯೋಜನೆಯಂತೆ ನಡೆಯಬೇಕಾದ ನಿಯಮಾವಳಿಯನ್ನು ಅವರು ಶಿಸ್ತುಬದ್ಧವಾಗಿ ಪಾಲಿಸುವಂತೆ ಮಾಡಿದರು.

## ಗೆದ್ದದ್ದು ಅಭ್ಯರ್ಥಿ, ಹಾರ ಪಾಟೀಲರಿಗೆ

ಚಂದ್ರಶೇಖರ ಪಾಟೀಲರ ವರ್ಚಸ್ಸಿನ ಬಗೆಗೆ ಅವರ ಮಗ ಶ್ರೀ ಅರುಣ್ ಕುಮಾರ್ ಪಾಟೀಲ್ ಜ್ಞಾಪಿಸಿಕೊಂಡ ಘಟನೆಯೊಂದು ಹೀಗಿದೆ:



"ಹೈದರಾಬಾದ್ ಸ್ಟೇಟ್‌ನಲ್ಲಿ ಚಂದ್ರಶೇಖರ ಪಾಟೀಲರು ಎಂ.ಎಲ್.ಎ. ಆಗಿದ್ದಾಗ, ಡಾ। ಚೆನ್ನಾರೆಡ್ಡಿ ಅವ್ರ ಮಾವ ರಂಗಾರೆಡ್ಡಿ ಮತ್ತು ಅವ್ರ ಜತೆಗೆ ಒಂದು ಗುಂಪು ಈ ಕಾಂಗ್ರೆಸ್‌ನಲ್ಲಿ ಇತ್ತು. ಆವಾಗ ಬಿ.ರಾಮಕಿಷನ್ ರಾವ್ ಮುಖ್ಯಮಂತ್ರಿಗಳಾಗಿದ್ರು. ಕಾಂಗ್ರೆಸ್ ಅಧ್ಯಕ್ಷರಾಗಿ ಗುಲಬರ್ಗಾ ಜಿಲ್ಲೆಯ ಕೋಳೂರು ಮಲ್ಲಪ್ಪನವರನ್ನು ನಿಲ್ಲಿಸಬೇಕೆಂತ ರಾಮಕಿಶನ್ ರಾವ್ ನಿರ್ಧಾರ ತಗೊಂಡ್ರು, ಚಂದ್ರಶೇಖರ ಪಾಟೀಲರು, ಚೆನ್ನಾರೆಡ್ಡಿ

ಯವರು ಮತ್ತು ಅವರ ಮಾವ ರಂಗಾರೆಡ್ಡಿಯವರು ಇನ್ನೊಬ್ಬ ಅಭ್ಯರ್ಥಿಯನ್ನು ಕಾಂಗ್ರೆಸ್ ಪಕ್ಷದಿಂದ ನಿಲ್ಲಿಸಿಬಿಟ್ರು, ಆ ಚುನಾವಣೆಯಲ್ಲಿ ಕೋಳೂರು ಮಲ್ಲಪ್ಪನವರು ಸೋತುಹೋಗಿ ಚಂದ್ರಶೇಖರ ಪಾಟೀಲರ ಅಭ್ಯರ್ಥಿ ಆರಿಸಿ ಬಂದ್ರು. ಆಗ ಎಲ್ರೂ ಚಂದ್ರಶೇಖರ ಪಾಟೀಲರಿಗೇ ಹಾರ ಹಾಕಿದ್ದು. ಗೆದ್ದು ಬಂದಿದ್ದ ಅಭ್ಯರ್ಥಿಗೆ ಹಾರ ಹಾಕಿರಲಿಲ್ಲ. ಅಂಥ ವರ್ಚಸ್ಸು ಅವರದ್ದು."

## ರಾಜಕೀಯ ರಂಗಪ್ರವೇಶ

ಪಾಟೀಲರು ರಾಜಕೀಯ ರಂಗ ಒಳಪ್ರವೇಶಿಸಿ ಸಾಮಾಜಿಕ ಸೇವೆಯಲ್ಲಿ ಸಂಪೂರ್ಣ ತೊಡಗಿಸಿಕೊಂಡು 'ವಿಕಾಸ ಯೋಜನೆ'ಯ ಅನ್ವಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಗುಲಬರ್ಗಾ ಯೋಜನೆಗಳು ಅವರ ಕನಸಿನ ಕೂಸಾಗಿದ್ದಿತು.



ಮುಖ್ಯಮಂತ್ರಿ ಶ್ರೀ ಬಿ.ಡಿ.ಜತ್ತಿಯವರು ಮಹಾಗಾಂವ್‌ಗೆ ಭೇಟಿಕೊಟ್ಟ ಸಂದರ್ಭ. ಎಲ್ಲರಿಗಿಂತ ಮುಂಚೂಣಿಯಲ್ಲಿ ಚಂದ್ರಶೇಖರ ಪಾಟೀಲರು

ಅವರ ಪ್ರಯತ್ನದಿಂದ ಕಿನ್ನಿ, ಫರತಾಬಾದ್, ಕೀರಣಗಿ, ಫಿರೋಜಬಾದ್, ಡೊಂಗರ್‌ಗಾಂವ್ ಮೊದಲಾದ ಕಡೆಗಳಲ್ಲಿ ಕಮ್ಯೂನಿಟಿ ಹಾಲ್‌ಗಳು ಅಸ್ತಿತ್ವಕ್ಕೆ ಬಂದವು. ಜನಸಂಪರ್ಕದ ಸೇತುವೆಯಾಗಿರುವ ಮುಖ್ಯರಸ್ತೆ ಕೂಡುರಸ್ತೆಗಳು ನಿರ್ಮಾಣಗೊಂಡವು. ನಂದೀಕೂರು, ಮರಗುತ್ತಿ, ಹೊಳಕುಂದಾ ಗ್ರಾಮಗಳು ಈ ಪ್ರಯೋಜನ ಪಡಕೊಂಡವು.

ಮಹಾಗಾಂವ್ ಮತ್ತು ಕಮಲಾಪುರದ ಆಸುಪಾಸಿನ ಜನತೆಗಾಗಿ ಸರಕಾರೀ ಆಸ್ಪತ್ರೆಗಳು ಸ್ಥಾಪನೆಗೊಂಡವು. ಅಂತೆಯೇ, ಫರತಾಬಾದ್, ಕಮಲಾಪುರ, ಮಹಾಗಾಂವ್‌ಗಳಲ್ಲಿ ಹೆರಿಗೆ ಆಸ್ಪತ್ರೆಗಳನ್ನು ತೆರೆಯಲಾಯಿತು. ಸ್ನಾನಕ್ಕಾಗಿ, ಬಟ್ಟೆತೊಳೆಯುವುದಕ್ಕಾಗಿ, ದಿನಬಳಕೆಯ ಅವಶ್ಯಕತೆಗಾಗಿ ಗಂಡೋರಿ ನೀರನ್ನೇ ನೆಚ್ಚಿಕೊಂಡಿದ್ದ ಮಹಾಗಾಂವ್ ಗ್ರಾಮಕ್ಕೆ ನಳದ ವ್ಯವಸ್ಥೆಯಾಯಿತು. ಬಡಜನತೆಗೆ ಸ್ಥಾನ, ನಿವೇಶನಗಳನ್ನು ಕೊಡಿಸಿ, ವಸತಿ ಸೌಕರ್ಯವನ್ನು ನೀಡಿದರು. ತಿಮ್ಮಾಪುರ ಗ್ರಾಮ ಮತ್ತು ಮಹಾಗಾಂವ್‌ಗಳಲ್ಲಿ 'ಒಡ್ಡರ ಕಾಲೊನಿ'ಗಳನ್ನು ಸ್ಥಾಪಿಸಲಾಯಿತು. ಖಾದಿ ಗ್ರಾಮೋದ್ಯೋಗವನ್ನು ಅಭಿವೃದ್ಧಿಪಡಿಸುವ ನಿಟ್ಟಿನಿಂದ ಕಮಲಾಪುರ ನೇಕಾರ ಸಂಘ ಸ್ಥಾಪನೆಯಾಯಿತು.

ಮಹಾಗಾಂವ್‌ನಲ್ಲಿ ಕುಶಲಕರ್ಮಿ ತರಬೇತಿ ಕೇಂದ್ರ ಪ್ರಾರಂಭವಾಯಿತು. ಈ ಕೇಂದ್ರದಲ್ಲಿ ಚಾಪೆ ನೇಯುವ ಬಗೆಬಗೆಯ ಹವಳ-ಮಣಿಗಳನ್ನು ಸಿದ್ಧಗೊಳಿಸುವ ಮತ್ತು ಜಮಖಾನೆ, ಖಾದಿ ಬಟ್ಟೆಗಳನ್ನು ತಯಾರಿಸುವ ತಂತ್ರಗಾರಿಕೆಗೂ ಆದ್ಯತೆ ನೀಡಲಾಯಿತು. ಸಂಘಶಕ್ತಿಯ ಬಲವನ್ನು ಅರಿತ್ತಿದ್ದ ಚಂದ್ರಶೇಖರರು ಹಳ್ಳಿಹಳ್ಳಿಯಲ್ಲಿ ಯುವಕ ಸಂಘಗಳು ಇರಲೇಬೇಕೆಂದು ಕುರಿಕೋಟಾ, ಬಬಲಾದ, ನಾಗೂರ, ಹರಸೂರ, ಅಂಕಲಗಿ ಮುಂತಾದ ಕಡೆಗಳಲ್ಲಿ ರೈತ ಪರಿಷತ್ತು, ಭಜನಾ ಮಂಡಳಿ ಮತ್ತು ಯುವಕ ಸಂಘಗಳ ಸ್ಥಾಪನೆಗೆ ಕಾರಣೀಭೂತರಾದರು. ಅಂತೆಯೇ ಇವೆಲ್ಲ ನಿರಾತಂಕವಾಗಿ ನಡೆಯುವ ಸಲುವಾಗಿ ಸರಕಾರದಿಂದ ವಂತಿಗೆ ದೊರೆಯುವ ಏರ್ಪಾಟನ್ನೂ ಮಾಡಿದರು.


ಹಳ್ಳಿ ಗ್ರಾಮಗಳಲ್ಲಿ ಬೇರುಬಿಟ್ಟಿದ್ದ ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗಳನ್ನು ಹೊಡೆದೋಡಿಸಲು ಶಿಕ್ಷಣವೇ ಮುಖ್ಯ ಎಂಬುದನ್ನು ಅರಿತುಕೊಂಡಿದ್ದ ಚಂದ್ರಶೇಖರರು ಹಳ್ಳಿ ಹಳ್ಳಿಗೂ ಶಾಲೆಗಳು ಪ್ರಾರಂಭವಾಗಬೇಕೆಂದು ಪಣತೊಟ್ಟರು. ಘತೆವಾಡ, ಸೊಂತ, ಮಹಾಗಾಂವವಾಡಿ, ತಿಳಿಗೊಳ, ಫಿರೋಜಾಬಾದ್‌ಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲು ಕಾರಣರಾದರು. ಮಹಾಗಾಂವ್ ಮತ್ತು ಕಮಲಾಪುರದ ಮಾಧ್ಯಮಿಕ ಶಾಲೆಗಳು ಪೌಢಶಾಲಾ ಮಟ್ಟಕ್ಕೆ ಏರಿಸಲಾಯಿತು. ಎರಡೇ ವರ್ಷಗಳಲ್ಲಿ ಅವು ಹೈಯರ್ ಸೆಕಂಡರಿ ಶಾಲೆಗಳಾದವು. ಈ ಸೌಕರ್ಯಗಳನ್ನು ತಮ್ಮ ಕ್ಷೇತ್ರಕ್ಕೆ ಸೀಮಿತಗೊಳಿಸದೆ, ಪಾಟೀಲರು, ಬೀದರ್ ಜಿಲ್ಲೆಯ ಬೇಮಲಖೇಡ, ನಿರ್ಣಾ ಮತ್ತು ರಂಜೇರಿಗಳಲ್ಲೂ ಪೌಢಶಾಲೆ ಪ್ರಾರಂಭವಾಗಬೇಕೆಂದು ಶಿಫರಸ್ಸು ಸಲ್ಲಿಸಿದರು. ಹಿರಿಯರಿಗೂ ಮಹಿಳೆಯರಿಗೂ ಹಳ್ಳಿಹಳ್ಳಿಗೂ ವಾಚನಾಲಯ ತೆರೆಯಲ್ಪಟ್ಟಿತು.

## ನಾಡಿಗೆ ನಾಯಕ, ಅವಿಶ್ರಾಂತ ಕಾಯಕ

ತಮ್ಮ ತಂದೆಯ ಈ ಬಗೆಯ ಕಾರ್ಯಕ್ಷಮತೆಯನ್ನು ಮಗ ಅರುಣ್ ಕುಮಾರ್ ಪಾಟೀಲರು ಬಣ್ಣಿಸಿದ್ದು ಹೀಗೆ:

> "ತಮ್ಮ ನಾಡಿನ ಬಗ್ಗೆ ಅವರಿಗೆ ಎಲ್ಲಿಲ್ಲದ ಚಿಂತೆ. ಪ್ರತಿ ಊರಿಗೆ ಸ್ಕೂಲಾಗಬೇಕು, ರಸ್ತೆ ಆಗಬೇಕು ಅನ್ನೋದು ಅವರಿಗೆ ಭಾಳಾ ಆಶೆಯಿತ್ತು. ಅದನ್ನು ಅವರು ಪೂರೈಸ್ತಾ ಇದ್ರು.
>
> "ಯಾವ ಹುಡುಗರು ಕೂಡಾ ನೌಕರಿ ಇಲ್ಲದೆ ಇರಬಾರದು. ಸಾಕಷ್ಟು ಜನರಿಗೆ ನೌಕರಿ ಕೊಡಿಸಿದ್ರು. 10ನೇ ತರಗತಿ ಪಾಸಾಗಿದ್ದಾನೆ ಅಂತ ಗೊತ್ತಾದರೆ ಸಾಕು, ಆತನಿಗೆ ಒಂದು ಟೀಚರ್ ಹುದ್ದೆ ಕೊಡ್ಸೋದು ಇದ್ದೇ ಇತ್ತು. ಆವಾಗ ಇಂಟರ್‌ವ್ಯೂಗಳೇನೂ ಇರ್ಲಿಲ್ಲ. ಡೈರೆಕ್ಟ್ ಆಗಿ ಸರಕಾರದೋರು ತಗೋತಿದ್ರು.
>
> "ನಿಜಲಿಂಗಪ್ಪನವರ ಜತೆಗೆ ತುಂಬ ಸಮೀಪದ ವ್ಯಕ್ತಿಯಾಗಿ, ಈ ನೀರಾವರಿ

ಕೆಲ್ಸ, ಈ ಕಮ್ಯುನಿಟಿ ಡೆವೆಲಪ್‌ಮೆಂಟ್ ಪ್ರಾಜೆಕ್ಟ್ ಮುಂತಾದವನ್ನ ನಮ್ ಭಾಗದಲ್ಲಿ ತಗೊಂಡ್ರು. ಎಸ್.ಕೆ.ಡೇ ಅಂತ ಆವಾಗ ಕಮ್ಯುನಿಟಿ ಡೆವೆಲಪ್‌ಮೆಂಟ್ ಮಿನಿಷ್ಟ್ರು ಇದ್ರು ಕೇಂದ್ರದಲ್ಲಿ. ಅವ್ರು ಈ ಭಾಗಕ್ಕೆ ಬಂದು ಸಾಕಷ್ಟು ಹಣ ಕೊಟ್ರು. ಆ ಮೇಲೆ ಈ ಪ್ರಾಜೆಕ್ಟ್‌ಗಳನ್ನು ಉದ್ಘಾಟನೆ ಮಾಡಿದ್ರು.



ಯಾವುದೇ ಪ್ರಗತಿಪರ ಯೋಜನೆಗಳಿಗೆ ತಮ್ಮ ನಾಡಿನಲ್ಲಿ ಅಸ್ತು ಎನ್ನುತ್ತಿದ್ದ ಚಂದ್ರಶೇಖರರು ಮಂತ್ರಿ ಮಾಗಧರನ್ನು, ಅಧಿಕಾರಿಗಳನ್ನು ಆದರದಿಂದ ಬರಮಾಡಿಕೊಳ್ಳುತ್ತಿದ್ದರು

"ಬೆಣ್ಣೆತೊರಾ, ಗಂಡೋದರಿ ಮತ್ತು ಮುಲ್ಲಾಮಾರಿ ಯೋಜನೆಗಳಿಗೆ ಆವಾಗಲೇ ದುಡ್ಡು ಒದಗಿಸ್ತಾ ಇದ್ರು. ಈ ಅಣೆಕಟ್ಟುಗಳ ನಿರ್ಮಾಣ ಕಾಲಕ್ಕೆ ಅಮೆರಿಕಾದಿಂದ ಇಂಜಿನಿಯರ್ಸ್‌ಗಳಾದ ಶ್ರೀಮತಿ ಮತ್ತು ಶ್ರೀ ಕೋಲ್ಟ್ಸ್ ಮಹಾಗಾಂವ್‌ಗೆ ಭೇಟಿ ನೀಡಿದ್ರು."

## ಪ್ರಾಂಜಲ ಮನಸ್ಸು

"ಹುಮನಾಬಾದ್‌ನಲ್ಲಿ ತಾಲೂಕಾ ಬೋರ್ಡ್ ಇಲೆಕ್ಷನ್‌ಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಅಧ್ಯಕ್ಷಸ್ಥಾನಕ್ಕೆ ಸಿದ್ಧಪ್ಪ ಖೇಳಗಿಯವರನ್ನು ಪಕ್ಷ ನಿಲ್ಲಿಸಿತ್ತು. ಗೋಪಾಲರಾವ್ ಮುಡಬಿಯವರು ಕಾಂಗ್ರೆಸ್ ಎಂ.ಎಲ್.ಎ ಆಗಿ ಹುಮನಾಬಾದ್ ಕ್ಷೇತ್ರದಿಂದ ಆರಿಸಿ ಬಂದಿದ್ರು. ತಾಲೂಕಾ ಬೋರ್ಡ್ ಇಲೆಕ್ಷನ್‌ನಲ್ಲಿ ಈ ಗೋಪಾಲರಾವ್ ಮುಡಬಿಯವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯ ವಿರುದ್ಧ ನಿಂತ ಸ್ವತಂತ್ರ ಅಭ್ಯರ್ಥಿಗೆ ಓಟುಕೊಟ್ಟು ಒಂದೇ ಮತದ ಅಂತರದಿಂದ ಸಿದ್ಧಪ್ಪ ಖೇಳಗಿಯವರನ್ನು ಸೋಲಿಸಿಬಿಟ್ರು. ಸ್ವತಂತ್ರ ಅಭ್ಯರ್ಥಿ ಗೆಲ್ಲುವಂತಾಯಿತು. ಇದರಿಂದ ಚಂದ್ರಶೇಖರ ಪಾಟೀಲರಿಗೆ ದೊಡ್ಡ ಆಘಾತವಾಯ್ತು. ಆಗ ಅವ್ರು ಶ್ರೀಮಾನ್ ನಿಜಲಿಂಗಪ್ಪನವರಿಗೆ ಹೇಳಿ ಸಿದ್ಧಪ್ಪ ಖೇಳಗಿಯವರಿಗೆ ಮುಂದೆ ಎಂ.ಎಲ್.ಸಿ. ಮಾಡಿದ್ರು."

## ಕರುಣಾಮಯಿ

"ಸುಮಾರು 1955ನೇ ಇಸವಿಯ ಸಮಯ. ಆಗ ಭೀಮಾ ನದಿಗೆ ಸೇತುವೆ ಕಟ್ಟುವ ಕೆಲಸ ನಡೀತಿತ್ತು. ಹೈದರಾಬಾದ್‌ನ ಒಬ್ಬ ಕಾಂಟ್ರಾಕ್ಟರ್ ಚಾವ್ಡಾ ಅಂತ ಸರಕಾರದ ವತಿಯಿಂದ ಈ ಕೆಲಸ ಕೈಗೊಂಡಿದ್ರು. ಇಡೀ ಸೇತುವೆ ರೂಫ್ ಸ್ಟೇಜಿಗೆ ಬಂದಿತ್ತು. ಆಗ ಮೇ ತಿಂಗಳು. ಅದು ಮಳೆ ಬರುವ ಸಮಯವಾಗಿರಲಿಲ್ಲ. ಆವಾಗ ವಿಪರೀತ ಮಳೆ ಬಂದು ಭೀಮಾ ನದಿಯಲ್ಲಿ ನೆರೆಯುಕ್ಕಿ ಕಟ್ಟಿದ ಸೇತುವೆ ಕೊಚ್‌ಕೊಂಡು ಹೋಯ್ತು.

ಅಲ್ಲಿ ಇನ್ನೂ ಹಳೆಯ ಬ್ರಿಜ್‌ನ ಕೆಲವು ಪಿಲ್ಲರ್ಸ್‌ನ್ನು ನೋಡಬಹುದು. ಇದೊಂದು ಅನಿರೀಕ್ಷಿತ ವಿದ್ಯಮಾನ. ಆಗ ಹೈದರಾಬಾದ್ ಸ್ಟೇಟ್‌ನಲ್ಲಿ ಡಾ। ಚೆನ್ನಾರೆಡ್ಡಿ ಅಂತ ಪಂಚಾಯತ್ ರಾಜ್ ಮಿನಿಷ್ಟ್ರು ಇದ್ರು. ಅವರ ಮಾವ ರಂಗಾರೆಡ್ಡಿ ಅಂತ ರೆವಿನ್ಯೂ ಮಿನಿಷ್ಟ್ರು. ಅವರ ಹತ್ರ ಚಂದ್ರಶೇಖರ ಪಾಟೀಲರು ಹೋಗಿ ಮೇ ಕಾಲದಲ್ಲಿ ಏಕಾಏಕಿ ಮಳೆಬಂದು ಸೇತುವೆ ಎಲ್ಲಾ ಕೊಚ್‌ಕೊಂಡು ಹೋಗಿದೆ. ಇದನ್ನು ನ್ಯಾಚುರಲ್ ಕೆಲಾಮಿಟಿ ಎಂದು ತಿಳಿದು ಆ ಪಾಪ ಗುತ್ತೇದಾರ್‌ಗೆ ತಾವು ಬರುವ ಬಿಲ್ಲನ್ನು ಕೊಟ್‌ಬಿಡಬೇಕು. ಅವನು ಗುಲಬರ್ಗಾದವನೂ ಅಲ್ಲ. ಈ ಥರ ಆದ್ರೆ ಮುಂದೆ ಕಷ್ಟ ಆಗಬಹುದು. ಅದನ್ನೆಲ್ಲ ಸರಕಾರದವ್ರು ಕಟ್ಟಿರುವ ಎಸ್ಟಿಮೇಟ್ ನೋಡಿ ಕಾಂಟ್ರಾಕ್ಟ್‌ದಾರನಿಗೆ ಹಣ ಸಂದಾಯ ಮಾಡ್‌ಬೇಕು ಅಂತ ಕೇಳಿಕೊಂಡ್ರು. ಚಂದ್ರಶೇಖರ ಪಾಟೀಲರು ಕೇಳಿಕೊಂಡಂತೆಯೇ ಕೊನೆಗೆ ಆಯ್ತು."

## ದೇಶಸೇವೆ ಈಶಸೇವೆ

ದಿ। ನಿಜಲಿಂಗಪ್ಪನವರು ಹೇಳಿದ್ದು–

"ಅವ್ರು ತಮ್ಮ ಡಿಸ್ಟ್ರಿಕ್ಟ್‌ಗೆ ಏನಾಗಬೇಕು ಅನ್ನೋದನ್ನು ಚೆನ್ನಾಗಿ ತಿಳಕೊಂಡಿದ್ದರು. ರೈತರಿಗೆ ನೀರಿನ ಅವಶ್ಯಕತೆ ಹೆಚ್ಚು. ವ್ಯವಸಾಯಕ್ಕಾಗಿ, ಇರಿಗೇಶನ್‌ಗಾಗಿ ಇಂಥಿಂಥದ್ದು ಆಗ್‌ಬೇಕು ಹಾಗಂತ ಹೇಳಿ, ಈ ಬೆಣ್ಣೆತೊರಾ, ಮುಲ್ಲಾಮಾರಿ....ಯಾವು ಯಾವುದೋ ಹಾಗಂತ ಹೇಳಿ ನೀವು ಮಾಡೇ ತೀರ್‌ಬೇಕು ಅಂತ್ಹೇಳಿ ನನ್ನನ್ನು ಮುಖ್ಯಮಂತ್ರಿ ಯಾಗಿದ್ದಾಗ ಬಂದು ಒತ್ತಾಯ ಮಾಡಿ ಬಹುಶಃ ಸ್ಯಾಂಕ್ಷನ್ ಮಾಡಿಸಿದ್ರು...

"ಕರ್ನಾಟಕ ಆಗಿ ಅಸೆಂಬ್ಲಿಗೆ ಚುನಾವಣೆ ಬಂದಾಗ ಸ್ವಾಭಾವಿಕವಾಗಿ ಅವ್ರು ಒಬ್ರು ಸದಸ್ಯರಾದ್ರು... ಅಲ್ಲಿಯೂ ಚೆನ್ನಾಗಿ ಕೆಲಸ ಮಾಡಿದ್ರು...

ಅವರು ಮಾಡಿದ ಅಭಿವೃದ್ಧಿ ಕೆಲಸಗಳ ಕುರಿತಂತೆ ಶ್ರೀ ಅರುಣ್ ಕುಮಾರ್ ಪಾಟೀಲರು ವಿವರಿಸಿದ್ದು ಹೀಗೆ:

"ಈ ರಸ್ತೆಗಳ ಬಗ್ಗೆ ಅವರಿಗೆ ಹೆಚ್ಚಿನ ಕಾಳಜಿ ಇತ್ತು. ಮಹಾಗಾಂವ್‌ನಿಂದ ಕಡೆಗಂಚಿ, ವಯಾ ವಿ.ಕೆ.ಸಲಗರ, ನರ್ಹೋಣಾ, ಗುಲಬರ್ಗಾದಿಂದ ಚಿಂಚೋಳಿ, ಹುಮನಾಬಾದ್‌ನಿಂದ ಸ್ವಂತ ಗ್ರಾಮಕ್ಕೆ ಹೋಗ್ ಬೇಕಂತ ತುಂಬಾ ರೋಡ್‌ಗಳನ್ನು ಚಂದ್ರಶೇಖರ ಪಾಟೀಲರ ಒತ್ತಾಯಕ್ಕೇನೇ ಆಗಿದ್ದು. ಒಂದು ಸಲ ಮರಮಂಚಿ ಅಂತ ಊರಿದೆ, ಆ ಹಳ್ಳಿ ಮೇಲಿಂದ ಆ ಊರಿನ ಪ್ರಸಿದ್ಧ ವ್ಯಕ್ತಿಯ ಹೊಲದಲ್ಲಿ ರೋಡ್ ಹೋಗ್ತಾ ಇತ್ತು. ಅವ್ನು ಹೇಗಾದ್ರೂ ಅಲ್ಲಿ ರೋಡ್ ಆಗ್‌ಕೂಡದು ಅಂತ್ಹೇಳಿ, ಆಗಿನ ಪ್ರಧಾನ ಮಂತ್ರಿ ನೆಹರೂರವರಿಗೆ ಪತ್ರ ಬರ್ದ. ನನ್ನ ಹೊಲದೊಳಗೆ ರೋಡ್ ಹಾಕ್‌ಬಾರ್ದು ಅಂತ. ಮುಖ್ಯಮಂತ್ರಿಗಳಾದ ಬಿ.ಡಿ.ಜತ್ತಿಯವರು ಬಂದು ನೋಡಿದ್ರು, ಈ ಹೊಲದಲ್ಲಿ ರೋಡ್ ಹಾಕೋದೇ ಒಳ್ಳೇದು, ಇಲ್ದೇ ಇದ್ರೆ ಈ ರೋಡ್ ಸರಿ ಆಗೋದಿಲ್ಲ ಅಂತ ನಿರ್ಧಾರ ತಗೊಂಡ್ರು."

"ಮಹಾಗಾಂವ್‌ನ ಸಮೀಪದ ಇಂದಿನ ಚಂದ್ರನಗರ ಚಂದ್ರಶೇಖರ ಪಾಟೀಲರದ್ದೇ ಕಲ್ಪನೆಯ ಆದರ್ಶ ಕಾಲೊನಿ. ಅಲ್ಲಿಯ ಶಾಲೆ, ದೇಗುಲ, ನೀರಿನ ಆಸರೆಗಳಿಗೆಲ್ಲ ಅವರೇ ಮೂಲ ಕಾರಣ..."

ವಡ್ಡರ ಕಾಲನಿಯ ಊರ ಹಿರಿಯ ಶ್ರೀರಾಮಕೃಷ್ಣರ ಮಾತಿನಲ್ಲಿ ಹೇಳುವುದಾದರೆ–

"ಅವ್ರು ಬಂದುಕೇಸಿ, ಇಲ್ಲಿ ಪೂರಾ ಮನೆಗಳ ಮಾಡಿ ಎಲ್ಲಾ ಕೆಲ್ಸ ಮಾಡಿ ಸದ್ದು ಮಾಡಿಬಿಟ್ರು. ಸರಕಾರಕ್ಕೆ ಕರ್ರು ಮಂಜೂರು ಮಾಡ್ಸಿ ಎಲ್ಲಾ ಅನುಕೂಲ ಮಾಡ್ಯಾರ್ರೀ... ಕಡೇಗೇ ದಂಧೆ ಮಾಡ್ಯಾಕೆ ಏಳೆಂಟು ಮಂದಿಗೆ ಹೊಲ ಏನಿರ ಮಾಡ್ಯಾರ್ರೀ... ಎಲ್ಲಾ ಸದ್ದೂ ಮಾಡ್ಸಿ ಕೊನೆಗೆ ಅವ್ರು ತೀರ್‌ಕೊಂಡ್ಯಾರ್ರೀ...."

ಗುಲಬರ್ಗಾ ವಲಯದ ಅಭಿವೃದ್ಧಿ ಮಾತ್ರವಲ್ಲ ಸಮಗ್ರ ಜನತೆಯ ಕಲ್ಯಾಣಕ್ಕಾಗಿ ಸೊಲ್ಲೆತ್ತುವ ಎದೆಗಾರಿಕೆ ಚಂದ್ರಶೇಖರ ಪಾಟೀಲರಿಗೆ ಜನ್ಮತಃ ಸಿದ್ದಿಸಿತ್ತು ಎನ್ನುವುದಕ್ಕೆ, ಅವರು, 1952ರಲ್ಲಿ ರೈತ ಕಾರ್ಮಿಕರ ಏಳಿಗೆಗಾಗಿ ಮತ್ತು ಅವರ ಅಭ್ಯುದಯಕ್ಕಾಗಿ ಹೈದರಾಬಾದ್ ಲೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ಮಂಡಿಸಿದ ವಾದವೇ ಸಾಕ್ಷಿ. ಸ್ವತಃ ಬೇಸಾಯ ಮಾಡಿ ಅನುಭವವಿದ್ದ ಅವರು,

ಒಕ್ಕಲುತನದ ಕೂಲಿಕಾರರಿಗೂ ಕಾರ್ಖಾನೆಯ ಕೂಲಿಕಾರರಿಗೂ ಒಂದೇ ಬಗೆಯ ಕಾನೂನನ್ನು ಜ್ಯಾರಿಗೆ ತರುವ ಸರಕಾರದ ಹೊಸ ನಿಯಮವನ್ನು ದಿಟ್ಟ ಧ್ವನಿಯಿಂದ ವಿರೋಧಿಸಿದ್ದನ್ನು ಕಾಣಬಹುದು.

## ಹೈದರಾಬಾದ್ ಲೆಜಿಸ್ಲೇಟೀವ್ ಅಸೆಂಬ್ಲಿ ಚರ್ಚೆ– 1952
## ಒಕ್ಕಲುತನ ಕಾರ್ಮಿಕರ ವೇತನ ಮಸೂದೆ

(ಸೆಶನ್ ಆನ್ ನಾನ್ ಅಫೀಶಿಯಲ್ ರೆಸಲ್ಯೂಶನ್ ನಂ.1)

1ನೇ ಜುಲೈ 1952

**ಶ್ರೀ ಚಂದ್ರಶೇಖರ ಪಾಟೀಲ್** (ಕಮಲಾಪುರ):

"ಅಧ್ಯಕ್ಷ ಮಹಾಶಯರೆ, ಈವರೆಗೆ ನನಗೆ ಮಾತನಾಡಲು ಅವಕಾಶ ಸಿಕ್ಕಿರಲಿಲ್ಲ. ಈಗ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮಾತನಾಡಬೇಕೆಂದಿದ್ದೇನೆ."

### ಒಕ್ಕಲುತನದವರು ಅವಿದ್ಯಾವಂತರು

"ಕಾರಖಾನೆಯ ಕೂಲಿಕಾರರಿಗೂ ಒಕ್ಕಲುತನದ ಕೂಲಿಕಾರರಿಗೂ ವ್ಯತ್ಯಾಸವಿರುತ್ತದೆ. ಒಕ್ಕಲಿಗರು ವಿದ್ಯಾವಂತರಲ್ಲ. ಅವರ ಮೇಲೆ ಕಾರಖಾನೆಯ ಮಾಲೀಕರ ಮೇಲೆ ಹೊರಿಸುವಂಥ ಕಟ್ಟಳೆಗಳನ್ನು ಹೊರಿಸಿದಲ್ಲಿ, ಅವನ್ನು ಪಾಲನೆ ಮಾಡುವುದು ಅವರಿಂದ ಸಾಧ್ಯವಿಲ್ಲ. ಕಟ್ಟಳೆಗಳನ್ನು ಮಾಡಬೇಕಾದರೆ, ಅತಿ ಎಚ್ಚರಿಕೆಯಿಂದ ಎಲ್ಲ ವಿಷಯಗಳನ್ನು ವಿಚಾರಿಸಿ ಮಾಡಬೇಕು. ಒಕ್ಕಲಿಗರು, ಜಾಗೀರದಾರರು ಮತ್ತು ಜಮೀನುದಾರರು ತಮ್ಮ ಹೊಲಗಳಲ್ಲಿ ದುಡಿಸಿಕೊಳ್ಳುವ ಕೂಲಿಕಾರರಲ್ಲಿ ಭೇದ ಭಾವ ಇರುತ್ತದೆ ಎಂಬ ಭಾವನೆಯನ್ನು ಪ್ರತಿಪಕ್ಷದ ಮಾನ್ಯ ಸದಸ್ಯರು ತಮ್ಮ ತಲೆಯಿಂದ ತೆಗೆದು ಹಾಕಬೇಕು ಮತ್ತು ಯಾವಾಗಲೂ ಅದೇ ಒಂದು ದೃಷ್ಟಿಯನ್ನಿಟ್ಟುಕೊಂಡು ಪ್ರತಿಯೊಂದನ್ನು ವಿರೋಧಿಸುತ್ತ ಹೋದರೆ ಅದರಿಂದ ದೇಶಕ್ಕೆ ಹಾನಿ ಹೊರತು ಲಾಭವಿಲ್ಲ."

## ವೇಳೆಗೆ ತಕ್ಕ ಕೂಲಿ ಸಲ್ಲ

"ಕಾರಖಾನೆಯ ಕೂಲಿಕಾರರಂತೆ ಒಕ್ಕಲುತನದ ಕೂಲಿಕಾರರಿಂದಲೂ ವೇಳೆಯ ಪ್ರಕಾರ ಕೆಲಸಮಾಡಿಸಿಕೊಳ್ಳುವುದು

ಎಷ್ಟು ಸಾಧ್ಯವೆಂಬುದನ್ನು ಎಲ್ಲ ಮಾನ್ಯ ಸದಸ್ಯರು ವಿಚಾರಿಸಬಹುದು. ಒಂದು ವೇಳೆ ನಿಶ್ಚಿತ ಸಮಯದವರೆಗೆ ಕೆಲಸಮಾಡಿಸಿಕೊಳ್ಳುವ ಬಗ್ಗೆ ಶರತ್ತು ಹಾಕಿದರೆ, ಉಳಿದ ವೇಳೆಯಲ್ಲಿ ಕೆಲಸ ಮಾಡಲು ಮತ್ತೊಂದು ಆಳನ್ನು ನಿಯಮಿಸಬೇಕಾಗುತ್ತದೆ. ಈ ಪ್ರಕಾರ ಒಂದೇ ಕೆಲಸಕ್ಕೆ ಎರಡು ಆಳುಗಳನ್ನು ನಿಯಮಿಸಿ ಅವರಿಂದ ದುಡಿಸಿ ಮಾಡುವ ಶಕ್ತಿ ನಮ್ಮ ಬಡ ಒಕ್ಕಲಿಗರಲ್ಲಿ ಇರುವುದಿಲ್ಲ. ಸರಿಯಾಗಿ ಹೇಳುವುದಾದರೆ, ಇಂತಹ ಪರಿಸ್ಥಿತಿಯಲ್ಲಿ ಒಕ್ಕಲಿಗರಿಗಿಂತ ಹಳ್ಳಿಯ ಕೂಲಿಕಾರರು ಹೆಚ್ಚು ಸುಖವಾಗಿದ್ದಾರೆ. ವೇಳೆಗೆ ಸರಿಯಾಗಿ ಕೆಲಸ ತೆಗೆದುಕೊಳ್ಳುವುದಕ್ಕೆ ಒಕ್ಕಲಿಗರ ಹತ್ತಿರ ಗಡಿಯಾರಗಳು ಎಲ್ಲಿವೆ? ಇದಲ್ಲದೆ, ಮಳೆಗಾಲದಲ್ಲಿ ಮೂರು ತಿಂಗಳು ಭೂಮಿಗೆ ಬೀಜಬಿದ್ದ ಮೇಲೆ, ಅವರಿಗೆ ಹೆಚ್ಚಿನ ಕೆಲಸವಿರುವುದಿಲ್ಲ. ರಾಶಿಯ ಸಮಯದಲ್ಲಿ ಗಾಳಿಹಿಡಿಯಬೇಕಾದರೆ ಅನೇಕ ದಿನಗಳವರೆಗೆ ದಾರಿನೋಡುತ್ತ ಹಾಗೆಯೆ ಕುಳಿತುಬಿಡಬೇಕಾಗುತ್ತದೆ. ಈ ಪ್ರಕಾರ ಸುಮ್ಮನೆ ಕುಳಿತರೂ, ಒಕ್ಕಲಿಗನು ಕೂಲಿ ಹಿಡಿದುಕೊಳ್ಳುವುದಿಲ್ಲ. ಮಿಲ್ಲಿನ ಕೂಲಿಕಾರರಿಗೆ ದಿನವೂ ಕೂಲಿಸಿಕ್ಕುವುದು. ಆದರೆ, ಮಿಲ್ಲಿನ ಕೂಲಿಕಾರರಿಗೆ ಸಿಕ್ಕುವ ಸೌಕರ್ಯಗಳು ಹಳ್ಳಿಯ ಕೂಲಿಕಾರರಿಗೆ ಸಿಕ್ಕುವುದು ಹೇಗೆ ಸಾಧ್ಯ? ಎಲ್ಲಿಯ ವರೆಗೆ ಹಳ್ಳಿಯ ಜನರು ವಿದ್ಯಾವಂತರಾಗುವುದಿಲ್ಲವೋ ಅಲ್ಲಿಯವರೆಗೆ ನಿಯಮಗಳ ಪಾಲನೆ ಬಹು ಕಷ್ಟ.."

## ಒಕ್ಕಲಿಗರಲ್ಲಿ ಉಚ್ಚ ನೀಚ ಇಲ್ಲ

"ಒಕ್ಕಲಿಗರು ಮತ್ತು ಕೂಲಿಕಾರರು ಬಂಧು ಭಾವನೆಯಿಂದ ನಡೆದುಕೊಳ್ಳುತ್ತಾರೆ. ಅವರ ಹತ್ತಿರ ಉಚ್ಚ – ನೀಚ ಈ ಪ್ರಕಾರದ ಭೇದ

ಭಾವನೆ ಇರುವುದಿಲ್ಲ. ಆದರೆ ಕಾರಖಾನೆಯಲ್ಲಿ ಒಬ್ಬರು ಕುರ್ಚಿಯ ಮೇಲೆ ಕುಳಿತರೆ ಮತ್ತೊಬ್ಬರು ನೆಲದ ಮೇಲೆ ಕುಳಿತುಕೊಳ್ಳಬೇಕು. ಸದ್ಯದ ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥ ದೃಷ್ಟಿಯಿಂದ ಒಕ್ಕಲಿಗರ ಮತ್ತು ಕೂಲಿಕಾರರ ನಡುವೆ ಇರುವ ಮೈತ್ರಿ ಸಂಬಂಧಗಳಿಗೆ ಭಂಗ ತರಬೇಕೆಂದು ಪ್ರಯತ್ನಮಾಡುತ್ತಿರುವುದರಿಂದ ದೇಶ ಹಾಳಾಗಿ ಹೋಗುವುದು. ಇಂತಹ ಕಾನೂನುಗಳಿಂದ ಒಕ್ಕಲುತನ ಮಾಡುವವರು ಮತ್ತಷ್ಟು ಹೀನ ಸ್ಥಿತಿಗೆ ಇಳಿಯುವರು. ಒಟ್ಟಾರೆ, ಒಕ್ಕಲುತನದವರು ಹಿಂಸೆಗೆ ಗುರಿಯಾಗುವರು. ಪ್ರತಿಪಕ್ಷದಿಂದ ಹಳ್ಳಿಯ ಕೂಲಿಕಾರರ ಬಗೆಗಿನ ಈ ಠರಾವು ದೇಶಕ್ಕೆ ಅಪಾಯಕರವಾದುದು."

## ಮುಕ್ತ ಮನಸ್ಸಿನ ಒಕ್ಕಲಿಗ

"ಒಕ್ಕಲಿಗನು ಕೂಲಿಕಾರರಲ್ಲಿ ಕೈಲಾಗದವರು ಮತ್ತು ಚಿಕ್ಕವರು ಇದ್ದರೂ ಮುಕ್ತ ಮನಸ್ಸಿನಿಂದ ಎಲ್ಲರಿಗೂ ಕೂಲಿಕೊಡುತ್ತಾನೆ. ಕೂಲಿಯವನು ಎಷ್ಟು ಕೆಲಸ ಮಾಡಿದ ಎಂಬ ಆಧಾರದ ಮೇಲೆ ಕೂಲಿಕೊಡುವುದಿಲ್ಲ. ಎಲ್ಲರಿಗೂ ಕೂಲಿ ಸಿಕ್ಕಬೇಕೆಂಬುದೇ ಒಕ್ಕಲಿಗನ ಮನಸ್ಸಿನಲ್ಲಿರುತ್ತದೆ. ಮಿಲ್ಲಿನಲ್ಲಿ ಹಾಗಿಲ್ಲ. ಎಷ್ಟು ತಾಸು ಕೆಲಸ ಮಾಡಿದರೆ ಅಷ್ಟೇ ತಾಸಿನ ಕೂಲಿಸಿಕ್ಕುವುದು."

"ಈ ಎಲ್ಲಾ ಸೌಕರ್ಯಗಳು ಹಳ್ಳಿಯಲ್ಲಿರುವುದರಿಂದ ಮಿಲ್ಲಿನ ಕೂಲಿಕಾರರಂತೆ ಹಳ್ಳಿಯ ಕೂಲಿಕಾರರನ್ನು ನೋಡಲಿಕ್ಕೆ ಬರುವುದಿಲ್ಲ."

"ಆದುದರಿಂದ ನಾನು ಈ ನಿರ್ಣಯವನ್ನು ವಿರೋಧಿಸುತ್ತೇನೆ."

***

ಚಂದ್ರಶೇಖರ ಪಾಟೀಲರ ದಿಟ್ಟ ಹಾಗೂ ವೀರಾವೇಶದ ಮಾತುಗಳು ಸದಾ ಅವರ ವಿರೋಧಿಗಳನ್ನು ಎಚ್ಚರಿಸುತ್ತಿದ್ದವು; ಅದೇ ವೇಳೆ ಅವರ ಆಪ್ತರನ್ನು ಅವರಲ್ಲಿ ಇನ್ನಷ್ಟು ಆಪ್ತತೆ ಮೂಡುವಂತೆ ಮಾಡುತ್ತಿದ್ದವು. ಸದನದಲ್ಲಿ ಅವರು ಚರ್ಚೆಯಲ್ಲಿ ಪಾಲುಗೊಂಡಿದ್ದು ವಿರಳವಾದರೂ, ಪಾರ್ಟಿ 'ವಿಪ್' ಆಗಿ ಸದನದ

ಸಕ್ರಿಯ ಸದಸ್ಯನಾಗಿ ಅವರ ಚಿಂತನೆಗಳು ಇತರ ಸಹೋದ್ಯೋಗಿಗಳಿಗೆ ಮಾರ್ಗದರ್ಶನದ ಸೂತ್ರಗಳಾಗಿದ್ದವು.

ಅವರ ಆಕಸ್ಮಿಕ ಅಕಾಲಿಕ ನಿಧನ ಸದನದಲ್ಲಿ ಶ್ರದ್ಧಾಂಜಲಿಯ ರೂಪದಲ್ಲಿ ಅನುರಣಿಸಿದ್ದು ಹೀಗೆ:



**ಸದನದಲ್ಲಿ ಶ್ರದ್ಧಾಂಜಲಿಯ ಉಲ್ಲೇಖ**

Condolence Reference

Re: the demise of
Sri Chandrashekhar Patil M.L.A.

Mr. Speaker:

"I regret to inform the House of the death of Sri Chandra shekhar Patil, a sitting member of the Assembly, under very tragic circumstances. Shri. Chandrashekhar Patil was a young and enthusias tic worker whose service to Hyderabad Karnataka have been acclaimed as being of very unique order. He was an organising genius and a man who could take firm decisions immediately and implements them. He was in fact, a warrior and fought against fundalism and princely order with firmness and de termination. His death has been an irrepairable loss to the public life of our state. Individually speaking, he was a personal friend of mine."

"On behalf of the house, I desire to express our deep sense of the great loss we have sustained and our sympathies with the relatives of the de ceased."

## ಶ್ರದ್ಧಾಂಜಲಿ

(ಉಲ್ಲೇಖ:
ವಿಧಾನ ಸಭಾ ಸದಸ್ಯ ಶ್ರೀ ಚಂದ್ರಶೇಖರ ಪಾಟೀಲರ ನಿಧನ

ಮಾನ್ಯ ಸಭಾಪತಿಗಳು:

"ಅತ್ಯಂತ ದಾರುಣ ಸನ್ನಿವೇಶದಲ್ಲಿ ನಮ್ಮ ವಿಧಾನ ಸಭೆಯ ಪ್ರಸಕ್ತ ಸದಸ್ಯರಾಗಿರುವ ಶ್ರೀ ಚಂದ್ರಶೇಖರ ಪಾಟೀಲರು ನಿಧನರಾದುದನ್ನು ಸಭೆಗೆ ತಿಳಿಸಲು ವಿಷಾದಿಸುತ್ತೇನೆ. ಶ್ರೀ ಚಂದ್ರಶೇಖರ ಪಾಟೀಲರು ಅತ್ಯಂತ ಉತ್ಸಾಹೀ ಯುವ ಕಾರ್ಯಕರ್ತರಾಗಿದ್ದರಲ್ಲದೆ, ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಅವರ ಸೇವೆ ಅತುಲ್ಯವಾಗಿತ್ತು ಎಂದು ಪರಿಗಣಿಸಬಹುದಾಗಿದೆ. ಅವರೊಬ್ಬ ಸಂಘಟನಾ ಚತುರರಾಗಿದ್ದರಲ್ಲದೆ, ಅವರು ಸೂಕ್ತ ನಿರ್ಧಾರಗಳನ್ನು ಕ್ಷಿಪ್ರಗತಿಯಲ್ಲಿ ತೆಗೆದುಕೊಂಡು ಅವನ್ನು ಅನುಷ್ಠಾನಕ್ಕೆ ತರುತ್ತಿದ್ದರು. ನಿಜವಾಗಿಯೂ ಅವರೊಬ್ಬ ಹುಟ್ಟು ಹೋರಾಟಗಾರರಾಗಿ ಮೂಲಭೂತವಾದಿಗಳು ಮತ್ತು ರಾಜಾಧಿಕಾರದ ವಿರುದ್ಧ ದಿಟ್ಟತನದಿಂದ ಹಾಗೂ ದೃಢತೆಯಿಂದ ಸೆಣಸುವಲ್ಲಿ ಅಪ್ರತಿಮರಾಗಿದ್ದರು. ಅವರ ನಿಧನ ನಮ್ಮ ರಾಜ್ಯದ ಸಾರ್ವಜನಿಕ ಕ್ಷೇತ್ರಕ್ಕೆ ಸಂಭವಿಸಿದ ತುಂಬಲಾರದ ನಷ್ಟವೆಂದು ಹೇಳಬೇಕಾಗುತ್ತದೆ. ವೈಯಕ್ತಿಕವಾಗಿ ಹೇಳುವುದಾದರೆ, ಅವರು ನನ್ನ ಓರ್ವ ಆತ್ಮೀಯ ಮಿತ್ರರಾಗಿದ್ದರು.

"ಅವರ ನಿಧನದಿಂದಾಗಿ ನಾವು ಅತೀವ ನಷ್ಟವನ್ನು ಅನುಭವಿಸಿದ್ದೇವೆ ಎಂದು ನಾನು ಸದನದ ಪರವಾಗಿ ಉಲ್ಲೇಖಿಸಬಯಸುತ್ತೇನೆ. ಮಾತ್ರವಲ್ಲ ಅವರ ಬಂಧುವರ್ಗದವರಿಗೆ ನಮ್ಮ ಸಂತಾಪಗಳು ಸಲ್ಲುತ್ತವೆ ಎಂದು ಹೇಳ ಬಯಸುತ್ತೇನೆ.")

## ಅಂತಿಮ ನಮನ

"ಅವರ ಉದಾತ್ತ ವಿಚಾರಗಳು, ಭವ್ಯ ಕ್ರಿಯಾಶೀಲತೆ, ನಿರ್ಭೀತ ಸೇವಾ ಪ್ರವೃತ್ತಿ– ಇವೆಲ್ಲವುಗಳ ಹಿನ್ನೆಲೆಯಲ್ಲಿ ಅವರೊಬ್ಬ ಭಾರತದ ಸುಪುತ್ರರು. ರಾಷ್ಟ್ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ತೋರಿದ ತ್ಯಾಗ, ಪಟ್ಟ ಕಷ್ಟ ಕಾರ್ಪಣ್ಯಗಳು ತೋರಿದ ಧೈರ್ಯ ಸಾಹಸಗಳು ಈ ನಾಡಿನ ಯಾವ ಜನಾಂಗಕ್ಕೂ ನಿರಂತರ ಉಜ್ವಲ ಉದಾಹರಣೆಗಳಾಗಿವೆ."

– ದಿ। ಎಸ್. ನಿಜಲಿಂಗಪ್ಪ

"...His simplicity and selfless service stood out as an example for others to follow..."

- Dr. M.Chennareddi

"ಆತ ಇದ್ದಿದ್ದರೆ ಪಕ್ಷ ಸಬಲ ಹಾಗೂ ನೀತಿನಿಷ್ಠವಾಗುತ್ತಿತ್ತು...."

– ಶ್ರೀ ಗುದ್ಲೆಪ್ಪ ಹಳ್ಳಿಕೇರಿ

"ಶಹೀದೋಂಕೆ ಚಿತಾ ಪರ್ ಹರ್ ಬರಸ್ ಲಗೇಗಿ ಮೇಲಾ; ಬಾಕಿ ನಿಶಾ ಯಹೀ ರಹೇಗಾ...ಹರಿಜನರನ್ನು ಮುಟ್ಟಿದರ ಮನಿಗೆ ಬಂದು ಜಳಕಾ ಮಾಡೂ ಕಾಲದಾಗ [illegible]ಲರು ಅವರ ಉದ್ಧಾರಕ್ಕೆ ನಿಂತರು... ನಮ್ಮ ಪಾಲಿಗೆ ಅವರು ಈ ಭಾಗದ ನೆಹರು..."

– ದಿ। ರಾಮಚಂದ್ರ ವೀರಪ್ಪ

ನನ್ನ ಕರೆದು ತಾಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷನನ್ನಾಗಿ ಮಾಡಿದರು. ಅವರು ನನ್ನ ರಾಜಕೀಯ ಗುರು. ಅವರದು ನಿಷ್ಕಳಂಕ ಚಾರಿತ್ರ್ಯ. ಕೆಲಸವೇ ದೇವರು ಅಂತ ನಂಬಿದವರು. ಅವರ ಬದುಕಿನ ರೀತಿ ನಮಗ ದಾರಿ ತೋರಿಸಬೇಕು.."

–ಶ್ರೀ ಅಣ್ಣಾರಾವ್ ಪಾಟೀಲ, ಕೊರಳ್ಳಿ

## ಚಂದ್ರಶೇಖರ ಪಾಟೀಲರ ಕುರಿತಾಗಿ ಪ್ರಕಟವಾದ ಗ್ರಂಥಗಳು, ಸಾಕ್ಷಚಿತ್ರ, ಪತ್ರಿಕಾ ಬರಹಗಳು ಹಾಗೂ ಮತ್ತಿತರ ಕೃತಿಗಳು:

ಗ್ರಂಥ/ ಸಾಕ್ಷ್ಯಚಿತ್ರ/ ಲೇಖನಗಳ ವಿವರ ಹಾಗೂ ಲೇಖಕ/ ನಿರ್ದೇಶಕರ ಹೆಸರು ಮತ್ತು ಪ್ರಕಾಶಕರ ವಿವರಗಳು ಇಂತಿವೆ:

1. ರಾಷ್ಟ್ರವೀರ–ಲೇ: ಶ್ರೀ ಬಿ.ಜಿ.ಕೆರೂರ–ಪ್ರ: ಶ್ರೀ ಅರುಣ್ ಕುಮಾರ ಪಾಟೀಲ್
2. ಮಹಾಗಂವ್‌ನ ಮಹಾವೀರ ಚಂದ್ರಶೇಖರ ಪಾಟೀಲ –ಲೇ: ಡಾ। ಶಿವಾನಂದ ಬೇಕಲ್ – ಪ್ರ: ಗುಲಬರ್ಗಾ ವಿಶ್ವವಿದ್ಯಾಲಯ (ಬೆಳ್ಳಿಬೆಳಕು ಪುಸ್ತಕ ಮಾಲೆ)
3. ಮಹಾಗಂವ್ ಶ್ರೀ ಚಂದ್ರಶೇಖರ ಪಾಟೀಲ –ಲೇ: ಶ್ರೀ ಸಂಗು ಕೋಟಿ – ಪ್ರ: ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯಮಠ, ಗದಗ
4. ಸೇವಾ ದುರಂಧರ –ಲೇ: ಡಾ। ಎಂ.ಎಸ್.ಲಠ್ಠೆ –ಪ್ರ: ಬಸವ ಪ್ರಕಾಶನ ಗುಲಬರ್ಗಾ
5. ಚಂದ್ರಶೇಖರ ಪಾಟೀಲ–ಲೇ: ಡಾ। ಶಿವಾನಂದ ಬೇಕಲ್ ಪ್ರ:ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ವಿಭಾಗ, ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಂ
6. ಹೈದರಾಬಾದ್ ಕರ್ನಾಟಕದ ಹುಲಿ: ಚಂದ್ರಶೇಖರ ಪಾಟೀಲ – ಲೇ: ಬಿ.ಬಿ.ಯಲಗಾರ (ನಾಟಕ– ಪರಿಷ್ಕರಣೆ: ಡಾ। ಶಿವಾನಂದ ಬೇಕಲ್) ಪ್ರ: ಗುಲಬರ್ಗಾ ವಿಶ್ವವಿದ್ಯಾಲಯ
7. ಆರದ ದೀಪ –ಲೇ: ಪ್ರೊ। ದೇವೇಂದ್ರ ಕುಮಾರ ಹಕಾರಿ
8. ಫ್ರೀಡಂ ಫಾರ್ ಪ್ರೋಗ್ರೆಸ್ (ಇಂಗ್ಲಿಷ್‌ನಲ್ಲಿ) – ಪ್ರೊ। ಜಿ.ಎಸ್.ಹಾಲಪ್ಪ
9. ಸ್ವಾತಂತ್ರ್ಯ ಚೇತನ ಚಂದ್ರಶೇಖರ ಪಾಟೀಲ –ದೂರದರ್ಶನ ಸಾಕ್ಷ್ಯಚಿತ್ರ ರಚನೆ, ನಿರ್ದೇಶನ ಮತ್ತು ನಿರ್ಮಾಣ –ಡಾ। ಶಿವಾನಂದ ಬೇಕಲ್ – ಬೆಂಗಳೂರು ಮತ್ತು ಗುಲಬರ್ಗಾ ದೂರದರ್ಶನ ಕೇಂದ್ರಗಳಿಂದ ಎರಡು ಕಂತುಗಳಲ್ಲಿ ಪ್ರಸಾರಿತ



**"ಆರದ ದೀಪ" ಮತ್ತು "ಫ್ರೀಡಮ್ ಫಾರ್ ಪ್ರೋಗ್ರೆಸ್" ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಶ್ರೀ ಕೆ.ಕಾಮರಾಜ ನಾಡಾರ್, ಶ್ರೀಎಸ್.ನಿಜಲಿಂಗಪ್ಪ, ಚಂದ್ರಶೇಖರ ಪಾಟೀಲರ ತಂದೆ ಶ್ರೀಸಂಗಶೆಟ್ಟಿ ಪಾಟೀಲರು ಹಾಗೂ ಪರಿವಾರ**

10. ಸ್ವಾತಂತ್ರ್ಯ ಸೇನಾನಿ ಚಂದ್ರಶೇಖರ ಪಾಟೀಲ –ಲೇಖನ–ವೀರಣ್ಣ ತಿಮ್ಮಾಜಿ –ಶೋಷಿತರ ಕೂಗು, ಕನ್ನಡ ಪಾಕ್ಷಿಕ, ಗುಲಬರ್ಗಾ
11. ಪಾಪು ಪ್ರಪಂಚ: ತರಂಗ ಸಾಪ್ತಾಹಿಕ– ಡಾ। ಪಾಟೀಲ ಪುಟ್ಟಪ್ಪ
12. ನನ್ನ ನಾ ಕಂಡಂತೆ– ವೀರೇಂದ್ರ ಗಾಥಾ– ಸುಧಾ, ಸಾಪ್ತಾಹಿಕ
13. ಹೈದರಾಬಾದ್ ರಜಾಕಾರ ಲಾವಣಿ – 'ಕರ್ನಾಟಕ ಕವಿಚಂದ್ರ' ನಲವಡಿ ಶ್ರೀಕಂಠ ಶಾಸ್ತ್ರಿ
14. ಚಂದರ ಶೆಟ್ಟಿ –ಹಾಡುಕಟ್ಟಿ ಹೇಳಿದವರು –ಶಿವಲೀಲಾ ನಾಗನಹಳ್ಳಿ,
15. ಮರಳಿ ಹುಟ್ಟಿ ಬಾ –ಜನಪದ ಶೈಲಿಯ ಹಾಡು –ಕವಿರತ್ನ ಪಂಡಿತ

# 3

## ಮಹಾಗಾಂವ್ ಚಂದ್ರಶೇಖರ ಪಾಟೀಲ್ ಗಣ್ಯರ ದೃಷ್ಟಿಯಲ್ಲಿ



"ಅವ್ರನ್ನ ನೋಡಿದ್ರೇ ಒಬ್ಬ
ರಾಜಾ ಮನುಷ್ಯ ಅಂತ
ಹೇಳ್ತೀವಲ್ಲ ಹಾಗೆ. ಮನಸ್ಸಿಗೆ
ಖುಷಿ ಆಗ್ತಿತ್ತು. ಜನರ ಕೆಲಸ
ಮಾಡೋದು ಅಂದ್ರೆ ಅವ್ರಿಗೆ
ಪೂಜೆ ಇದ್ದ ಹಾಗೆ...."

–ದಿ। ರಾಮಕೃಷ್ಣ ಹೆಗಡೆ




ಡಾ। ಶಿವಾನಂದ ಬೇಕಲ್ (ಲೇಖಕರು) ಶ್ರೀ ನಿಜಲಿಂಗಪ್ಪನವರನ್ನು ಅವರ ಚಿತ್ರದುರ್ಗದ ಮನೆಯಲ್ಲಿ ದೂರದರ್ಶನಕ್ಕಾಗಿ ಸಂದರ್ಶಿಸಿದ ಸಂದರ್ಭ

## ಭವ್ಯತೆಯ ಸಾಕಾರ ಚಂದ್ರಶೇಖರ

–ದಿ। ಎಸ್.ನಿಜಲಿಂಗಪ್ಪ

ನನ್ನ ಅಭಿಮಾನ, ಪ್ರೀತಿ, ಗೌರವ, ಮೆಚ್ಚಿಗೆ ಮುಂತಾದವುಗಳೆಲ್ಲವನ್ನೂ ತಮ್ಮವುಗಳನ್ನಾಗಿ ಮಾಡಿಕೊಂಡವರು ಚಂದ್ರಶೇಖರ ಪಾಟೀಲರು. ಅವರನ್ನು ಮೊತ್ತಮೊದಲು ನಾನು ನೋಡಿದ್ದು ಹೈದರಾಬಾದ್‌ನ ರಜಾಕಾರರ ಹಾವಳಿಗೆ ಅಲ್ಲಿಯ ಜನ ತುತ್ತಾಗಿ ನಾನಾ ರೀತಿಯ ಕಷ್ಟಗಳಿಗೆ ಸಿಕ್ಕಿ ನರಳುತ್ತಿದ್ದಾಗ. ಕರ್ನಾಟಕದ ಹೈದರಾಬಾದ್‌ನ ಜನರನ್ನು ಆ ಹಾವಳಿಯಿಂದ ಉಳಿಸಲು ಅಲ್ಲಿಯ ಕೆಲವು ಮುಖಂಡರು ಸೇರಿ ಒಟ್ಟಾಗಿ ಬೊಂಬಾಯಿ ಕರ್ನಾಟಕದ ಸರಹದ್ದಿನ ಕೆಲವು ಸ್ಥಳಗಳಲ್ಲಿ ಅಲ್ಲಿಂದ ಓಡಿ ಬಂದ ನಮ್ಮ ಜನರನ್ನು ಕಾಪಾಡಲು ಮಾಡಿದ್ದ



ಏರ್ಪಾಟುಗಳನ್ನು ನೋಡಿಬರಲು ಹೋಗಿದ್ದು. ಹಾಗೆ ನೋಡಿ ಬಂದು ಸಲಹೆ ಸಹಕಾರ, ಸಹಾಯಗಳನ್ನು ನೀಡಲು ಕರ್ನಾಟಕ ಕಾಂಗ್ರೆಸ್ಸಿನ ಅಧ್ಯಕ್ಷನಾಗಿ ಹೋಗಿದ್ದು. ಬೊಂಬಾಯಿಯ ಮುಖ್ಯಮಂತ್ರಿ ಶ್ರೀ ಬಿ.ಜಿ.ಖೇರ್ ಮತ್ತು ನನ್ನನ್ನೊಳಗೊಂಡ ಕರ್ನಾಟಕದ ಕೆಲವು ಮುಖಂಡರೂ ಅಲ್ಲಿಗೆ ಹೋಗಿದ್ದೆವು.

ಹೈದರಾಬಾದ್ ಸರಕಾರ ಅಂದರೆ ಅದು ಪ್ರತಿಗಾಮೀ ಸರಕಾರ. 'ರಿಯೇಕ್ಷನರೀ' ಸರಕಾರ. ಸ್ವಾಮಿ ರಮಾನಂದ ತೀರ್ಥರ ಮುಖಂಡತ್ವದಲ್ಲಿ ಚಳವಳಿ ಆದಾಗ ಗುಲಬರ್ಗಾ, ರಾಯಚೂರು, ಬೀದರ್- ಈ ಮೂರು ಕರ್ನಾಟಕದ ಜಿಲ್ಲೆಗಳ ಅನೇಕರು ಅವರ ಹಿಂಬಾಲಕರಾದರು. ಆ ಚಳವಳಿಯಲ್ಲಿ ಭಾಗವಹಿಸಿದವರಲ್ಲಿ ಚಂದ್ರಶೇಖರರು ಪ್ರಮುಖರು. ಆ ಸಂದರ್ಭದಲ್ಲಿ ಅವರ ನಿಕಟ ಸಹಚರ್ಯವೂ, ಸ್ನೇಹವೂ ನನಗಾಯಿತು. ಸ್ವಾಮಿ ರಮಾನಂದ ತೀರ್ಥರಿಗೆ ಭಾಳಾ ಬೇಕಾದ ಶಿಷ್ಯರು ಅವರಾಗಿದ್ದರು.

ಹೈದರಾಬಾದ್ ಕರ್ನಾಟಕ ಮುಖಂಡರ ನೇತಾರರಾಗಿ ಚಂದ್ರಶೇಖರ ಪಾಟೀಲರು ನಮ್ಮನ್ನು ಬರಮಾಡಿಕೊಂಡು ಅಲ್ಲಿ ಪರಿಹಾರಕ್ಕಾಗಿ ಮಾಡಿದ್ದ ಏರ್ಪಾಟುಗಳನ್ನು ನಮಗೆ ತೋರಿಸಿದರು. ಹೆಂಗಸರು, ಗಂಡಸರು ಹೇಗೆ ತಮ್ಮ ಪ್ರಾಣ ಮಾನಗಳನ್ನು ಕಾಪಾಡಿಕೊಳ್ಳಬೇಕೆಂದು ನೋಡಿದೆವು. ಆಗಲೇ ನನ್ನ ಚಂದ್ರಶೇಖರರ ಪರಿಚಯವಾಯಿತು. ಅವರ ಎತ್ತರ, ಅದಕ್ಕೆ ತಕ್ಕ ಮೈಕಟ್ಟು ಅದಕ್ಕನುಸರಿಸಿದ ಭವ್ಯ ವ್ಯಕ್ತಿತ್ವ- ಅವರನ್ನು ನನ್ನವರನ್ನಾಗಿ ಮಾಡಿದವು.

ಆ ಕ್ಷಣದಲ್ಲಿ ಉಂಟಾದ ಪರಸ್ಪರ ಅಭಿಮಾನ ಅವರು ಆಕಸ್ಮಿಕಕ್ಕೆ ಒಳಪಟ್ಟು ಬೆಂಗಳೂರಿನಲ್ಲಿ ದೈವಾದೀನರಾಗುವವರೆಗೂ ಅಚ್ಚಳಿಯದೇ ಉಳಿದಿದ್ದಲ್ಲದೆ

ಬೆಳೆಯುತ್ತಲೇ ಹೋಯಿತು. ಆಗ ನನಗಾದ ವ್ಯಸನಕ್ಕಿಂತ ಮತ್ಯಾರಿಗೂ ಹೆಚ್ಚಾಗಿರಲಾರದು.

ಹೈದರಾಬಾದ್‌ನ ಸ್ವಾತಂತ್ರ್ಯ ಹೋರಾಟದಲ್ಲಿ ಚಂದ್ರಶೇಖರರ ಪಾತ್ರ ಅತಿ ಹೆಚ್ಚಿನದು. ಹಲವಾರು ವರ್ಷಗಳದು. ಗುಲಬರ್ಗಾ ತಾಲೂಕಿನ ಮಹಾಗಾಂವ್ ಅವರ ಊರು. ಅಲ್ಲಿಯ ಪ್ರತಿಷ್ಠಿತ, ಗೌರವಾನ್ವಿತ ಕುಟುಂಬ ಅವರದು. ತುಂಬು ಸಂಸಾರ. ಅವರ ರಾಜಕೀಯ ಚಟುವಟಿಕೆ ಅಲ್ಲಿಂದ ಪ್ರಾರಂಭವಾಗಿ ತಾಲ್ಲೂಕು ಜಿಲ್ಲೆ, ಕರ್ನಾಟಕ ಪ್ರದೇಶಕ್ಕೆಲ್ಲ ಹಬ್ಬಿತು. ಜನರನ್ನು ಎತ್ತಿ ಕಟ್ಟಿದರು. ಹುರಿದುಂಬಿಸಿದರು. ಮುಂದಾಳಾಗಿ ನಡೆಸಿಕೊಂಡು ಹೋದರು. ಅವರ ನಿಷ್ಠೆ, ಪ್ರಾಮಾಣಿಕತೆ, ಸ್ವಾತಂತ್ರ್ಯ ಪ್ರೇಮ, ಅಧರ್ಮ ಅನ್ಯಾಯಗಳ ವಿರುದ್ಧ ಜನರನ್ನು ಅವರ ಹಿಂದೆ ತಳ್ಳುವಂತೆ ಪ್ರೇರೇಪಿಸಿದವು. ಯಾವ ತ್ಯಾಗಕ್ಕೂ ಅವರು ಸಿದ್ಧರು.



**ಗುಲಬರ್ಗಾದಲ್ಲಿ ನಡೆದ ಒಂದು ಸಮಾರಂಭದಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರೊಂದಿಗೆ ಶ್ರೀ ಚಂದ್ರಶೇಖರ ಪಾಟೀಲ್**

ಅನೇಕ ವೇಳೆ ಆಗಿನ ಪರಿಸ್ಥಿತಿಗೆ ಅನುಗುಣವಾಗಿ ಕಾರಾಗೃಹ ವಾಸವೂ ಅವರ ಪಾಲಿಗೆ ಬಂತು. ಅಲ್ಲಿಯೂ ಅವರು ಅನ್ಯಾಯ ಹಿಂಸೆಗಳನ್ನು ವಿರೋಧಿಸಲು ಮುಂದಾಳುಗಳೇ ಹಿಂಸೆಗೆ ಒಳಗಾದರು. ಅಲ್ಲಿಯೂ ಸತ್ಯಾಗ್ರಹ ನಡೆಸಿದರು. ಯಶಸ್ವಿಗಳಾದರು. ಅದೊಂದು ಮೆಚ್ಚಿ ಹೊಗಳಬಹುದಾದ ಅವರ ಭವ್ಯ ಜೀವನದ ಒಂದು ಪ್ರಮುಖ ಭಾಗ.

ಅವರ ವಿಚಾರದಲ್ಲಿ ಒಂದು ಅಂಶ ನನಗೆ ಸ್ಪಷ್ಟವಾಗಿ ಮನದಟ್ಟಾಯಿತು. ಈ ಮನುಷ್ಯನಿಗೆ ಭಯ ಎನ್ನುವುದೇ ಇರಲಿಲ್ಲ. ಆಸೆ ಅಂಜಿಕೆ ಅವಳಿ ಜವಳಿ ಜೀವನದಲ್ಲಿ ಹೇಗೋ ಹಾಗೆ. ರಾಜಕೀಯದಲ್ಲಿ ಇನ್ನೂ ಹೆಚ್ಚು. ಅವೆರಡನ್ನು ನಾನು ಅವರಲ್ಲಿ ಯಾವ ಸಂದರ್ಭದಲ್ಲಿಯೂ ಕಾಣಲಿಲ್ಲ. ಹೋರಾಟದ ಸಂದರ್ಭದಲ್ಲಿಯಾಗಲೀ ನಂತರ ಕರ್ನಾಟಕ ರಾಜ್ಯವಾಗಿ ತದನಂತರ ನಾನು ಮುಖ್ಯಮಂತ್ರಿಯಾದಾಗಲಾಗಲೀ ಎಂದೂ ಯಾವ ಸ್ಥಾನಕ್ಕೂ ಅಪೇಕ್ಷೆ ಪಡಲಿಲ್ಲ. ಯಾವ ಸಂದರ್ಭದಲ್ಲಿಯೂ ಯಾರಿಗೂ ಹೆದರಲೂ ಇಲ್ಲ. ಸಿಂಹದಂತಹ ಎದೆಗಾರಿಕೆ. ಅಂತಹವರು ವಿರಳ. ಅತಿ ವಿರಳ.

ಚಂದ್ರಶೇಖರ ಪಾಟೀಲರ ಸಮಾಜ ಸೇವಾಸಕ್ತಿಯೂ ಅಷ್ಟೇ ಎತ್ತರ ಮಟ್ಟದ್ದು. ಶ್ರೀಯುತರು ಮಹಾಗಾಂವ್ ಗ್ರಾಮಕ್ಕೆ ಸಲ್ಲಿಸಿದ ಸೇವೆ ಅಪಾರ.

ಹುಟ್ಟು ವ್ಯವಸಾಯಗಾರರು. ವ್ಯವಸಾಯಗಾರರ ಕಷ್ಟನಷ್ಟಗಳು, ಕುಂದುಕೊರತೆಗಳು, ದಾರಿದ್ರ್ಯ ಸಮಸ್ಯೆಗಳು, ಅವರಿಗೆ ಸಂಪೂರ್ಣ ತಿಳಿದಿದ್ದು ಅವುಗಳ ನಿವಾರಣೆಗೆ ಹೆಣಗಿದರು. ವ್ಯವಸಾಯಗಾರರಿಗೆ ನೀರು ಒದಗದ ವಿನಃ ಅವರ ಬಾಳುವೆ ಸುಧಾರಿಸದು ಎನ್ನುವುದು ಚೆನ್ನಾಗಿ ಮನದಟ್ಟಾಗಿತ್ತು ಅವರಿಗೆ. ಅಂತೆಯೇ ಅವರು ನನ್ನನ್ನು ಮುಖ್ಯಮಂತ್ರಿಯಾಗಿದ್ದಾಗಲೂ ಅದಕ್ಕೆ ಮುನ್ನವೂ ನೋಡಿದಾಗಲೆಲ್ಲ ಒಂದು ವಿಚಾರವಂತೂ ಒತ್ತಾಯಕ್ಕೆ ಬಂದೇ ಬರುತ್ತಿತ್ತು. ಅದು ನೀರಾವರಿ ಹೆಚ್ಚುಮಾಡುವ ಪ್ರಯತ್ನ. 2–3 ಯೋಜನೆಗಳನ್ನು ಯಾವಾಗಲೂ ಹೇಳುತ್ತಲೇ ಇದ್ದರು. ಮುಲ್ಲಾಮಾರಿ ವಗೈರೆ. ಅವುಗಳ ಬಗ್ಗೆ ಅವರ ಒತ್ತಾಯ ಕಳಕಳಿ ಅಷ್ಟೊಂದು. ನನಗೂ ಅವುಗಳನ್ನು ಆಗ ಮಾಡಿಕೊಡಬೇಕೆಂಬ ಆತುರವಿತ್ತು.

ಒಂದು ಮುಖ್ಯ ಕಾರಣ ಚಂದ್ರಶೇಖರ ಪಾಟೀಲರು ಒತ್ತಾಯ ಮಾಡುತ್ತಿದ್ದಾರೆ ಎಂಬುದು. ಅವರು ನಿಷ್ಠಾವಂತ, ಪ್ರಾಮಾಣಿಕ ಬಡವರ ಬಂಧು ಎನ್ನುವುದು ನನಗೆ ಸೂರ್ಯನಷ್ಟು ಸ್ಪಷ್ಟವಾಗಿತ್ತು. ಅವು ಈಗ ಏನಾಗಿದೆಯೋ ತಿಳಿಯದು. ಕೆಲವಾದರೂ ಮುಗಿದಿರಬೇಕು. ಅವರಿಗೆ ಗ್ರಾಮ ಕೈಗಾರಿಕೆಯಲ್ಲೂ ಅಷ್ಟೆ ನಂಬಿಕೆ ಇದ್ದು ಅವು ಬೆಳೆಯ ಬೇಕು, ಉಳಿಯಬೇಕು ಎನ್ನುವುದು ಅವರ ಹಾರೈಕೆ.

ಸ್ವಾತಂತ್ರ್ಯ ಗಳಿಕೆಗಾಗಿ ಅದರಲ್ಲೂ ಅತ್ಯಂತ ಜಾತೀಯ ಹಾಗೂ ಬೇಜವಾಬ್ದಾರಿಗೆ ಪ್ರಸಿದ್ಧವಾಗಿದ್ದ ನಿಜಾಮರ ಸರ್ಕಾರ ಕೊನೆಗೊಳ್ಳಲೇ ಬೇಕೆಂಬ ಹಠ ಅವರದು. ಅದಕ್ಕಾಗಿ ಸೆರೆಮನೆವಾಸ, ಅಲ್ಲಿಯ ಕಷ್ಟ ನೋವುಗಳಿಗೆ ಸಿದ್ಧರಾಗಿದ್ದರು, ಅನುಭವಿಸಿದರು–ಸಂತೋಷದಿಂದ.

ಈ ಎಲ್ಲಾ ಸೇವಾಕಾಂಕ್ಷೆ, ರಾಷ್ಟ್ರಪ್ರೇಮ, ಕಷ್ಟಸಹಿಷ್ಣುತೆ, ಧೀರೋದ್ಧಾತ ನಡತೆ ಇವೇ ಮುಂತಾದ ಸದ್ಗುಣಗಳಿಂದ ಪಾಟೀಲರು ಆದರ, ಪ್ರೀತಿಗಳನ್ನು ಯಥೇಚ್ಛವಾಗಿ ಗಳಿಸಿದ್ದರು. ಈ ಸದ್ಗುಣಗಳಿಗಾಗಿ ಅವರನ್ನು ಮೀರಿಸಿದವರು ಅತಿ ವಿರಳ.

ಈಗಲೂ ಅವರ ಹೆಸರೆಂದರೆ ಜನರು ಕೃತಜ್ಞತೆಯಿಂದ ನೆನಪುಮಾಡಿಕೊಳ್ಳುತ್ತಾರೆ. ಸದಾ ಪ್ರೀತಿಯಿಂದ ಅವರನ್ನು ಹೊಗಳುತ್ತಾರೆ. ಅವರ ದ್ಯೋತಕವಾಗಿ ಗುಲಬರ್ಗಾದಲ್ಲಿ ಒಂದು ಭವ್ಯವಾದ ಕ್ರೀಡಾಂಗಣವನ್ನು ಕಟ್ಟಲಾಗಿದೆ. ಈಗಾಗಲೇ ಅದು ಜನಪ್ರಿಯವಾಗಿದೆ.

ನನಗಂತೂ ಅವರು ಯಾವಾಗ ನನ್ನಲ್ಲಿಗೆ ಬಂದರೂ ಸಹೋದರರನನ್ನು ಕಂಡಂತೆ ವ್ಯಾಮೋಹ. ಅತ್ಯಂತ ಪ್ರೀತಿಯಿಂದ ಸ್ವಾಗತಿಸುತ್ತಿದ್ದೆ. ಅವರಿಗೂ ನನ್ನನ್ನು ಕಂಡರೆ ಹಾಗೆಯೇ.

ತನಗೆ ಇಂಥದ್ದು ಆಗಬೇಕು ಅಂತ ಹೇಳಿ ಎಂದೂ ಯಾವ ಕಾಲದಲ್ಲೂ ಯಾವ ಸಂದರ್ಭದಲ್ಲೂ ನನ್ನನ್ನು ಕೇಳಿದವರಲ್ಲ. ಯಾರನ್ನೂ ಕೇಳಿದವರಲ್ಲ.

ಭಯಭೀತಿ ಅವರಿಗೆ ಇರಲಿಲ್ಲ. ಯಾರೇ ಆಗಲಿ, ಯಾವ ಸಂದರ್ಭದಲ್ಲೇ ಆಗಲಿ ತನಗೇನು ತಿಳಿಯುತ್ತದೆ ಅದನ್ನು ನಿರ್ಭಯವಾಗಿ, ನಿರ್ಭಿಡೆಯಿಂದ ಹೇಳುತ್ತಾ ಇದ್ದರು. ಹೀಗಾಗಿ ಅವರು ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು.



ಅತ್ಯಂತ ಆಕರ್ಷಕ ಆಳು. ಎತ್ತರದ ನಿಲುವು, ಸುದೃಢವಾದ ಮೈಕಟ್ಟು. ಸ್ಥಿರವಾದ ನೋಟ. ಅಷ್ಟೇ ಗಾಂಭೀರ್ಯ. ಚಂದ್ರಶೇಖರರನ್ನು ನೋಡಿದರೇನೇ

ಆ ಭವ್ಯ, ಆಕರ್ಷಕ ವ್ಯಕ್ತಿತ್ವದ ಅರಿವಾಗುತ್ತ ಇತ್ತು. ಅವರನ್ನು ಕಂಡರೆ ಗೌರವ ಬರುತ್ತಿತ್ತು. ಪ್ರಥಮ ಸಲ ಭೇಟಿಯಾದ ಕೂಡಲೇ, ನಾನು ಅವರನ್ನು ನೋಡಿದ ಕೂಡಲೇ, ಪ್ರಥಮ ನೋಟದಲ್ಲೇ ನಮ್ಮೊಳಗೆ ಪ್ರೀತಿ ಅಂಕುರಿಸಿತು. 'ಲವ್ ಅಟ್ ಫರ್ಸ್ಟ್ ಸೈಟ್' ಅನ್ನುತ್ತಾರಲ್ಲ ಹಾಗೆ. ಅವರಿಗೂ ನನ್ನಲ್ಲಿ ವಿಶ್ವಾಸ ಉಂಟಾಯಿತು. ಹೀಗಾಗಿ, ಚಂದ್ರಶೇಖರ ಪಾಟೀಲರ ಹೆಸರೆತ್ತಿದರೆ ನನ್ನ ಅಂತಃಕರಣ ಕರಗುತ್ತದೆ.



ಡಾ। ಪಾಟೀಲ ಪುಟ್ಟಪ್ಪನವರು

## ಈ ಅಧಿಕಾರ ಹೆಸರು ಅವರಿಗೆ ಏನೂ ಬೇಡ

ನಮಗೆ ಅಧಿಕಾರ ಬೇಕೆಂದು ಕೇಳುವ ಜನರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಅದು, ಈ ದೇಶದ ಕಥೆ ಮಾತ್ರ ಆಗಿರದೆ, ಎಲ್ಲ ದೇಶಗಳ ಕಥೆಯೂ ಆಗಿದೆ. ಅಧಿಕಾರಕ್ಕೋಸುಗ ನಡೆದ ಕಚ್ಚಾಟ, ಕಿತ್ತಾಟಗಳ ಕಥೆಯನ್ನೇ ಇತಿಹಾಸ ನಮಗೆ ಹೇಳುತ್ತದೆ. ಮನುಷ್ಯ ಜೀವನದ ಎಲ್ಲ ಈರ್ಷೆ, ರಾಗ, ದ್ವೇಷಗಳು ಅದರಲ್ಲಿ ತುಂಬಿಕೊಂಡಿದೆ. ಬೇಕು ಎನ್ನುವವರ ದೊಡ್ಡ ಸದ್ದು, ಬೇಡ ಎನ್ನುವವರ ಸಣ್ಣ ಧ್ವನಿಯನ್ನು ಮುಚ್ಚಿಹಾಕಿದೆ.

ತಮಗೆ ಅಧಿಕಾರ ಬೇಡ, ಅದು ಇನ್ನೊಬ್ಬರಿಗೇ ಇರಲಿ ಎಂದು ಹೇಳುವ ತ್ಯಾಗ ಬುದ್ಧಿಯ ಜನರು ಈಗಲೂ ಇದ್ದೇ ಇದ್ದಾರೆ. ಆದರೆ, ಅವರ ಸಂಖ್ಯೆ 'ಇಲ್ಲ' ಎಂದು ನಿಷ್ಕಾಳಜಿ ಮಾಡಿ ಹೇಳುವಷ್ಟು ತುಂಬ ಸಣ್ಣದಿದೆ. ರಾಮಾಯಣದಲ್ಲಿ ರಾಮ ಲಕ್ಷ್ಮಣ ಸೀತೆಯರ ಕಥೆಗೇ ಹೆಚ್ಚು ಪ್ರಾಧಾನ್ಯ ಇದೆ. ತನಗೆ ಅಧಿಕಾರ ಬೇಡ, ಅದು ರಾಮನಿಗೇ ಇರಲಿ ಎಂದು ಹೇಳಿದ ಭರತನ ಕಥೆ ಅದರಲ್ಲಿ ಅಮುಖ್ಯವೆನಿಸಿದೆ. ಜನರು ಭರತನನ್ನು ಮರೆತಿರಬಹುದು. ಆದರೆ ಈ ದೇಶ ಭರತಭೂಮಿ ಎನ್ನುವುದನ್ನು ಅವರು ಮರೆಯುವುದು ಸಾಧ್ಯವಿಲ್ಲ.

ಉರಿಯುವ ದೀಪಕ್ಕೆ ಬೆಲೆ ಇರಬಹುದು; ಆದರೆ ಉರಿದು ಹೋಗುವ ಕರ್ಪೂರದ ಬೆಲೆ ಕಡಿಮೆಯೇನೂ ಅಲ್ಲ. ಬೆಳಕು ಕೊಡುವ ಕಾರ್ಯದಲ್ಲಿ ಅದು ತನ್ನನ್ನೇ ತಾನು ಸುಟ್ಟುಕೊಂಡು ಇಲ್ಲದಂತಾಗಿ ಮಾಡಿಕೊಳ್ಳುತ್ತದೆ. ಎಂತಲೇ ಸತ್ಕಾರ್ಯದಲ್ಲಿ ತನ್ನನ್ನು ಕಳೆದುಕೊಳ್ಳುವ ಅದಕ್ಕೆ ಹೆಚ್ಚಿನ ಬೆಲೆ ಇದೆ. ಬೇಕು ಎನ್ನುವವನು ಸಣ್ಣವನೆನಿಸುತ್ತಾನೆ. ಸಾಕು ಎನ್ನುವವನು ದೊಡ್ಡವನೆನಿಸುತ್ತಾನೆ.

***

ಕೆಲವರು ಏನನ್ನೂ ಮಾಡಿರುವುದಿಲ್ಲ. ಆದರೆ ಮಾಡಿದವರಿಗಿಂತಲೂ ತಾವೇ ದೊಡ್ಡವರೆಂದು ಅವರು ತೋರಿಸಿಕೊಳ್ಳಬೇಕೆನ್ನುತ್ತಾರೆ. ಇನ್ನು ಕೆಲವರು ಇರುತ್ತಾರೆ. ಎಲ್ಲವನ್ನೂ ತಾವೇ ಮಾಡಿದ್ದರೂ ಕೂಡಾ, ತಾವು ಏನೊಂದನ್ನೂ ಮಾಡಲಿಲ್ಲವೆಂಬಂತೆ ಅವರು ತಮ್ಮ ವರ್ತನೆ ಇರಿಸಿಕೊಂಡಿರುತ್ತಾರೆ.

ಒಂದು ದೇವಸ್ಥಾನಕ್ಕೆ ಒಂದು ಸಣ್ಣ ಟ್ಯೂಬ್ ಲೈಟ್ ಕೊಡಿಸಿದವರು ಅದರ ಮೇಲೆ ತಮ್ಮ ಹೆಸರನ್ನು ಹಾಕಿಸಿಕೊಂಡು ಚಿರಂಜೀವಿಗಳೆನಿಸಿಕೊಳ್ಳಬೇಕೆನ್ನುತ್ತಾರೆ. ಆದರೆ, ಸಾವಿರ ವರ್ಷಗಳಿಂದ ನಾಡಿಗೆಲ್ಲ ಅಭಯವನ್ನು ಹೇಳುತ್ತ ನಿಂತಿರುವ ಗೊಮ್ಮಟೇಶ್ವರ ಮೂರ್ತಿಯನ್ನು ಕಟೆದ ಶಿಲ್ಪಿ ಯಾರು ಎನ್ನುವುದು ಇದುವರೆಗೆ ಯಾರೊಬ್ಬರಿಗೂ ಗೊತ್ತಿಲ್ಲ. ಆ ಮೂರ್ತಿಯನ್ನು ಕಟೆದ ಶಿಲ್ಪಿಯನ್ನು ಸನ್ಮಾನಿಸಬೇಕೆಂದು ದೊರೆ ಅವರನ್ನು ಹುಡುಕಿಸಿದಾಗ ಆ ಮನುಷ್ಯ ತನ್ನ ನಿವಾಸದಲ್ಲಿ ಇರಲೇ ಇಲ್ಲ. ಕಾಣುವಂಥ

ಕೆಲಸ ಮಾಡಿದ್ದೇನೆ, ನಾನೇಕೆ ಕಾಣಿಸಿಕೊಳ್ಳಬೇಕು ಎಂದು ಹೇಳಿ ಅವನು ಕಣ್ಮರೆ ಆಗಿ ಹೋಗಿದ್ದ.

ಸ್ವಂತವನ್ನು ನಿರಾಕರಿಸಿಕೊಳ್ಳುವ ಇಂಥ ಮಹೋಜ್ವಲ ಉದಾಹರಣೆ ಇತಿಹಾಸದ ಪುಟಗಳನ್ನು ಕೆದಕಿ ನೋಡಿದರೆ ನಮಗೆ ಎಲ್ಲಿಯೂ ಸಿಕ್ಕುವುದಿಲ್ಲ.

ಸಣ್ಣ ಜನರು ಮಾತ್ರ ತಾವು ಎಷ್ಟು ಕ್ಷುದ್ರರೆನ್ನುವುದನ್ನು ತೋರಿಸಿಕೊಳ್ಳುವುದಕ್ಕೋಸುಗ, ದೊಡ್ಡ ಕಲಾಕೃತಿಗಳ ಮೇಲೆ ತಮ್ಮ ಹೆಸರನ್ನು ಗೀಚುತ್ತಾರೆ. ಅವರು ಮಾಡಿದರೆ ಕೆಡಿಸುವಂಥದೊಂದನ್ನೇ ಮಾಡುತ್ತಾರಲ್ಲದೆ,ಸರಿಪಡಿಸುವಂಥದೊಂದನ್ನೇನೂ ಮಾಡುವುದಿಲ್ಲ.

***

"ಮೇರಾ ಭಾರತ್ ಮಹಾನ್" ಎಂದು ಹೇಳುವುದನ್ನು ಕೇಳಿದ್ದೇವೆ. ಅದೇ ಮಾತನ್ನು ಒಬ್ಬ ವ್ಯಕ್ತಿಗೆ ಅನುಸರಿಸಿ ಹೇಳಬೇಕಂದರೆ, ನಮಗೆ ಹೆಚ್ಚು ಜನರು ಸಿಗುವುದಿಲ್ಲ. ಅತೀ ವಿರಳವೆನಿಸಿದ ಕೆಲವೇ ಜನರು ನಮಗೆ ಸಿಗುತ್ತಾರೆ. ಅತೀ ವಿರಳವೆನ್ನುವವರಲ್ಲಿ ಮಹಾಗಾಂವ್‌ನ ಚಂದ್ರಶೇಖರ ಪಾಟೀಲರು ಒಬ್ಬರು.

ಅವರು ನಮ್ಮನ್ನು ಅಗಲಿ ಐದು ದಶಕಗಳೇ ಕಳೆದಿವೆ. ಆದರೆ ಅವರ ಹೆಸರು ಜನರ ಮನಸ್ಸಿನಲ್ಲಿ ಇನ್ನೂ ಹಸಿರಾಗಿ ಉಳಿದುಕೊಂಡಿದೆ. ಅವರನ್ನು ನೆನೆದರೆ ಅಮೆರಿಕೆಯ ಸಾರ್ವಜನಿಕರ ಒಂದು ಘಟನೆ ನೆನಪಿಗೆ ಬರುತ್ತದೆ. ಆ ದೇಶದ ರಾಜಧಾನಿ ವಾಷಿಂಗ್‌ಟನ್. ಅಲ್ಲಿ ಒಂದು ಕೀರ್ತಿಭವನ ಇದೆ. ಆ ಭವನದಲ್ಲಿ ಒಬ್ಬ ವ್ಯಕ್ತಿಯ ಭಾವಚಿತ್ರ ಬರಬೇಕಾದರೆ ಅವನು ಸತ್ತು 50ವರ್ಷ ಆಗಿರಬೇಕಾಗುತ್ತದೆ. 50ವರ್ಷಗಳ ನಂತರವೂ ಜನರ ಮನಸ್ಸಿನಲ್ಲಿ ಅವನ ನೆನಪು ಉಳಿದಿದ್ದರೆ ಅಂಥವನ ಭಾವಚಿತ್ರ ಅಲ್ಲಿ ಬರುತ್ತದೆ.

ಈ ಚಂದ್ರಶೇಖರ ಪಾಟೀಲರ ಪ್ರತೀತಿ ಆ ಅಮೆರಿಕೆಯ ಮಾದರಿಯದು. ಜನರು ಅವರ ಹೆಸರನ್ನು ಇಂದಿಗೂ ಕೃತಜ್ಞತೆಯಿಂದ ನೆನೆಯುತ್ತಾರೆ. ಅವರು

ಜನರ ಮನಸ್ಸಿನಲ್ಲಿ, ಮಾತಿನಲ್ಲಿ ಇಂದಿಗೂ ಉಳಿದುಕೊಂಡಿದ್ದಾರೆ. ಅವರು ಜನ ಸೇವೆಯಲ್ಲಿ ಪ್ರಥಮರೆನ್ನಿಸಿ ಜನರ ಹೃದಯದಲ್ಲಿ ಅಳಿಯದೆ ಉಳಿದುಕೊಂಡಿದ್ದಾರೆ. ಜನವತ್ಸಲರಾದ ಅವರು ನಮ್ಮ ಜನ ವರ್ಗದ ಎಲ್ಲಾ ಜನರಿಗೂ ಬೇಕಾಗಿದ್ದರು. ಅವರ ಮನಸ್ಸಿನಲ್ಲಿ ಇವರು ತಮ್ಮವರು, ಅವರು ಬೇರೆಯವರು ಎನ್ನುವ ಅಡ್ಡಗೋಡೆಗಳು ಇರಲಿಲ್ಲ. ಅವರ ಅಂತಃಕರಣದಲ್ಲಿ ಬಡವರು, ದುರ್ಬಲರು, ದೀನ ದಲಿತರು ಮೊದಲಾದವರೆಲ್ಲರಿಗೂ ಪ್ರಥಮ ಆದ್ಯತೆ ಇದ್ದಿತ್ತು. ಎಲ್ಲ ಜನರನ್ನು ಅವರು ತಮ್ಮ ಕರುಳಬಳ್ಳಿಯಂತೆ ತಮ್ಮ ಹೃದಯಕ್ಕೆ ಹಚ್ಚಿಕೊಂಡಿದ್ದರು. ಎಂತಲೆ ಅವರು ಕಾಲವಾಗಿ ಅರ್ಧಶತಮಾನ ಸಮೀಪಿಸುತ್ತ ಬಂದರೂ ಅವರು ನಮ್ಮ ಕಾಲಮಾನದಲ್ಲಿ ಜನರ ಮನಸ್ಸಿನಲ್ಲಿ ಒಂದು ದಂತಕಥೆಯಾಗಿ ಉಳಿದುಕೊಂಡಿದ್ದಾರೆ. ಅವರನ್ನು ಕುರಿತು ಹಾಡುಕಟ್ಟಿ ಹಾಡಿದವರಿದ್ದಾರೆ, ನಾಟಕ ಬರೆದು ಅಭಿನಯಿಸಿದವರಿದ್ದಾರೆ.

ಸ್ವಾರ್ಥ ಯಾವದು ಇಲ್ಲದೆ ತಮ್ಮ ಜೀವನ ಸರ್ವಸ್ವವನ್ನು ಶ್ರೀ ಚಂದ್ರಶೇಖರ ಪಾಟೀಲರು ಸಾರ್ವಜನಿಕಕ್ಕೆ ಅರ್ಪಿಸಿಕೊಂಡವರು. ಜನರ ಬಗ್ಗೆ ಅವರು ಆಡುತ್ತಿದ್ದ ಮಾತುಗಳು ಮಾನವೀಯ ಅಂತಃಕರಣದ ಹಾಲಿನಲ್ಲಿ ಹರಿದು ಬರುತ್ತಿತ್ತು. ಸಾರ್ವಜನಿಕಕ್ಕೆ ಅವರಂತೆ ಸರ್ವಸ್ವವನ್ನು ಅರ್ಪಿಸಿಕೊಂಡ ವ್ಯಕ್ತಿಗಳು ನಮಗೆ 5 ದಶಕಕ್ಕು 10ದಶಕಕ್ಕು ಒಬ್ಬರಂತೆ ಸಿಗುತ್ತಾರೆ. ಅವರಿಗೆ ಲೋಕವೇ ಮನೆಯೆನಿಸಿತು. ಮಾನವ ಕುಲವೆ ಅವರಿಗೆ ಕುಟುಂಬವೆನಿಸಿತು. ಅವರ ಕಾಲದಲ್ಲಿ ನಾವು ಬದುಕಿದ್ದೇವೆ ಎನಿಸುವುದು ನಮ್ಮ ಪುಣ್ಯವಿಶೇಷವೆಂದೇ ತಿಳಿಯಬೇಕು.

***

ಚಂದ್ರಶೇಖರ ಪಾಟೀಲರು ತಮಗೋಸುಗ ಏನನ್ನೂ ಮಾಡಿಕೊಳ್ಳಲಿಲ್ಲ. ಈ ರಾಜ್ಯ ಆದಾಗ, ಹಾಗೂ ಅದಕ್ಕೂ ಪೂರ್ವದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಚಂದ್ರಶೇಖರ ಪಾಟೀಲರು ಬಹು ಪ್ರಭಾವಶಾಲೀ ಮುಂದಾಳು ಆಗಿದ್ದರು. ಅವರ ಎತ್ತರ, ಅವರ ಸ್ಫುರದ್ರೂಪ, ವಿಶಾಲ ಹಣೆ, ನೀಳವಾದ ಮೂಗು ಇವುಗಳನ್ನು ನೋಡಿದರೆ ಅವರು ನಿಜವಾದ ಮುಂದಾಳು ಎಂದು

ಯಾರಿಗಾದರೂ ತಟ್ಟನೆ ಹೊಳೆಯುತ್ತಿತ್ತು. ಅವರಲ್ಲಿ ಸಂಪೂರ್ಣ ನಿಸ್ವಾರ್ಥತೆಯಿತ್ತು. ಜನತೆಗೋಸುಗ ಅವರು ಸಂಪೂರ್ಣ ತಮ್ಮನ್ನು ಅರ್ಪಿಸಿಕೊಂಡಿದ್ರು...

1952ರಲ್ಲಿ ವೀರೇಂದ್ರ ಪಾಟೀಲರು ತಮ್ಮ ಕಾನೂನು ಪರೀಕ್ಷೆ ಮುಗಿಸಿ ಕೆಲಸಕ್ಕೋಸುಗ ಅಲೆಯುತ್ತಿದ್ದರು. ಚಂದ್ರಶೇಖರ ಪಾಟೀಲರ ಬಳಿಗೆ ಹೋದರೆ ತಮ್ಮ ಕೆಲಸ ಆಗಬಹುದೆನ್ನುವ ಭರವಸೆ ಇರಿಸಿಕೊಂಡು ವೀರೇಂದ್ರ ಪಾಟೀಲರು ಅವರನ್ನು ಕಂಡರು.

ತಮ್ಮೆಡೆಗೆ ಬಂದ ತರುಣ ಅಭ್ಯರ್ಥಿಯ ಓದಿನ ಬಗೆಗೆ ವಿಚಾರಿಸಿದ ಚಂದ್ರಶೇಖರ ಪಾಟೀಲರು ತಮ್ಮ ಕನಸಿನಲ್ಲಿ ಏನೋ ಒಂದನ್ನು ಆಲೋಚಿಸಿ, "ರೆವಿನ್ಯೂ ಇನ್ಸ್‌ಪೆಕ್ಟರ್ ತೆಗೆದುಕೊಂಡು ಏನು ಮಾಡುತ್ತೀರಿ? ನೀವು ಓದಿದವರಿದ್ದೀರಿ. ರಾಜಕೀಯದಲ್ಲಿ ಬಂದರೆ ಏನು ಬೇಕಾದರೂ ಆಗುವ ಸಾಧ್ಯತೆ ಇದೆ. ನಾನು, ನಿಮ್ಮನ್ನು ಅಸೆಂಬ್ಲಿ ಮೆಂಬರ್‌ರನ್ನಾಗಿ ಮಾಡಿ ಕಾಂಗ್ರೆಸ್ ಟಿಕಟ್ ಕೊಡಿಸುತ್ತೇನೆ" ಎಂದು ಹೇಳಿದರು.

ವೀರೇಂದ್ರ ಪಾಟೀಲರಿಗೆ, ಆ ಮಾತನ್ನು ಕೇಳಿ, ಕೌತುಕವೆನಿಸಿತು.

ಸರಕಾರದಲ್ಲಿ ಒಬ್ಬ ಸಾಮಾನ್ಯ ಅಧಿಕಾರಿಯಾಗಿ ನಿವೃತ್ತರಾಗುತ್ತಿದ್ದ ಅವರು ರಾಜ್ಯದ ಮುಖ್ಯಮಂತ್ರಿಯೇ ಆದರು. ಚಂದ್ರಶೇಖರ ಪಾಟೀಲರು ತಾವೇ ಸ್ವತಃ ರಾಜಕೀಯದಲ್ಲಿ ಮುಂದುವರಿದು ದೊಡ್ಡ ವ್ಯಕ್ತಿ ಆಗಬಹುದಾಗಿದ್ದಿತು. ಆದರೆ, ಅವರ ತ್ಯಾಗ ಬುದ್ಧಿ, ಅದು ತನಗೆ ಬೇಡ ಎಂದು ಹೇಳಿತು. ವೇದಿಕೆಯ ಮೇಲೆ ವೀರೇಂದ್ರ ಪಾಟೀಲರು ಕಾಣಿಸಿದ್ದರೆ, ಅದಕ್ಕೆ ಚಂದ್ರಶೇಖರ ಪಾಟೀಲರು ತಾವೇ ಹಿಂದೆ ಸರಿದು, ವೀರೇಂದ್ರ ಪಾಟೀಲರನ್ನು ಮುಂದೆ ತಳ್ಳಿದುದೇ ಕಾರಣವಾಗಿತ್ತು. ಚಂದ್ರಶೇಖರ ಪಾಟೀಲರು ಯಾವುದೇ ಜನಸಮೂಹದಲ್ಲೂ ಎದ್ದು ಕಾಣುವಂಥ ಉನ್ನತವಾದ ವ್ಯಕ್ತಿತ್ವವನ್ನು ಹೊಂದಿದ್ರು. ಭಾಳಾ ಎತ್ತರದ ನಿಲುವು. ಸುಂದರವಾದ

ಮುಖ. ಇವ್ರು ನಾಯಕನಂದ್ರೆ, ಇವರೇ ನಾಯಕನಾಗಬೇಕಾದವನು ಚಂದ್ರಶೇಖರರಂತೆ ಇರಬೇಕು ಅನ್ನತಕ್ಕಂಥ ಒಂದು ಭಾವನೆ ಬರ್ತಿತ್ತು.

(ಕೃಪೆ: ಬೆಂಗಳೂರು ದೂರದರ್ಶನ / 'ತರಂಗ' 9ನೇ ಮೇ 1993)



ವೀರೇಂದ್ರ ಪಾಟೀಲ್ ಚಂದ್ರಶೇಖರರ ಜತೆಗೆ

# ವೀರೇಂದ್ರ ಗಾಥಾ–ನನ್ನ ನಾ ಕಂಡಂತೆ



ವೀರೇಂದ್ರ ಪಾಟೀಲ್
**ಹೈದರಾಬಾದ್ ಶಾಸನ ಸಭೆಗೆ ಆಯ್ಕೆ**

ಹೈದರಾಬಾದ್ ರಾಜ್ಯಕ್ಕೆ ಸೇರಿದ್ದ ನಮ್ಮದಂತು ವಿಚಿತ್ರ ಪರಿಸ್ಥಿತಿ. ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದ ಪ್ರದೇಶ ಪ್ರಗತಿ ಸಾಧಿಸುವ ಸಾಧ್ಯತೆಯೇ ಇಲ್ಲವೆಂದು ನಾವೆಲ್ಲ ಹತಾಶೆಗೊಂಡಿದ್ದ ದಿನಗಳವು.

ಇಲ್ಲಿ ಚಂದ್ರಶೇಖರ ಪಾಟೀಲರ ಬಗ್ಗೆ ಹೇಳಲೇಬೇಕು. ಅವರದ್ದು ತೂಕದ ವ್ಯಕ್ತಿತ್ವ, ಧೈರ್ಯಶಾಲಿ ಮುಖಂಡ. ನಾನು ಸೊಲ್ಲಾಪುರದಲ್ಲಿ ಕಚೇರಿ ತೆರೆದಾಗ ಆರಂಭವಾಗಿದ್ದ ನನ್ನ ಹಾಗೂ ಅವರ ಸ್ನೇಹಸಂಬಂಧ ಕೊನೆಯ ವರೆಗೂ ಗಾಢವಾಗೇ ಉಳಿಯಿತು. ಅವರ ಊರು ಆಳಂದದ ಸಮೀಪದ ಮಹಾಗಾಂವ್.

ಅವರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲೆಲ್ಲ ಪ್ರಸಿದ್ಧರು. ರಜಾಕಾರ ಚಳುವಳಿಯಲ್ಲಿ ಸಾಕಷ್ಟು ತೊಂದರೆ ಅನುಭವಿಸಿದ್ದರು. ಹೈದರಾಬಾದ್ ಕೂಡಾ ಒಕ್ಕೂಟದಲ್ಲಿ ವಿಲೀನವಾಗಬೇಕು ಎಂದು ಒತ್ತಾಯ ತಂದಾಗ ಅವರಿಗೆ ಸೆರೆಮನೆ ವಾಸವೂ ಒದಗಿತ್ತು. ವಕೀಲಿ ವೃತ್ತಿ ಆರಂಭಿಸಿದ ನಾನು ಜಿಲ್ಲೆಗೇ ದೊಡ್ಡ ವಕೀಲನಾಗಿ

ಭಾರೀ ಹೆಸರು ಮಾಡಬೇಕೆಂದುಕೊಂಡಿದ್ದರೂ ಚಂದ್ರಶೇಖರ ಪಾಟೀಲರ ಸಹವಾಸದಿಂದಾಗಿ ನನ್ನ ಬದುಕು ಬೇರೆಯೇ ತಿರುವನ್ನು ಪಡೆದುಕೊಂಡಿತು. ಆ ದಾರಿಯಲ್ಲೇ ಮುಂದುವರಿದ ನಾನು ನನ್ನ ರಾಜಕೀಯ ಜೀವನದುದ್ದಕ್ಕೂ ಅವರನ್ನು ಸ್ಮರಿಸಿಕೊಂಡಿದ್ದೇನೆ.

ಆಗೆಲ್ಲ ಚುನಾವಣೆಗೆ ಹೆಚ್ಚು ಖರ್ಚಾಗುತ್ತಿರಲಿಲ್ಲ. ಚುನಾವಣೆಗೆ ನಿಂತ ಮೇಲೆ ನಾನು ವಕೀಲನಾಗಿ ಗಳಿಸಿದ್ದನ್ನೆಲ್ಲ ಚಂದ್ರಶೇಖರ ಪಾಟೀಲರ ಕೈಗೆ ಕೊಡುತ್ತಿದ್ದೆ. ಎಲ್ಲ ಹೊಣೆಯನ್ನು ಅವರೇ ಹೊರಬೇಕೆಂದು ನಾನವರನ್ನು ವಿನಂತಿಸಿಕೊಂಡಿದ್ದೆ. ನನ್ನ ಸ್ವಂತ ಊರಾದ ಚಿಂಚೋಳಿ ಬಿಟ್ಟು ಆಳಂದದಿಂದ ಸ್ಪರ್ಧಿಸಬೇಕು ಎನ್ನುವ ವಿಚಾರ ನನಗೆ ಸ್ವಲ್ಪ ಕಿರಿಕಿರಿಯನ್ನೇ ಉಂಟುಮಾಡಿತ್ತು. ಚಂದ್ರಶೇಖರ ಪಾಟೀಲರು ನನ್ನ ಪಕ್ಕದ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಎರಡೂ ಕ್ಷೇತ್ರಗಳ ಪ್ರಚಾರವನ್ನು ಅವರು ಅತ್ಯಂತ ಶ್ರಮವಹಿಸಿ ನಿಭಾಯಿಸಿದ ರೀತಿ ಸೋಜಿಗವನ್ನುಂಟುಮಾಡುವಂಥದ್ದು. ಅದಕ್ಕೆ ನನ್ನ ಪ್ರಚಾರಕ್ಕೆ ಹೋದಾಗ ಅನೇಕರು–

“ವೀರೇಂದ್ರ ಪಾಟೀಲರು ಯಾರು? ನಾವು ಅವರ ಮುಖವನ್ನೇ ನೋಡಿಲ್ಲವಲ್ಲ? ಅವರು ನಮ್ಮ ಊರ ಕ್ಷೇತ್ರದವರಲ್ಲ. ಬೇರೆ ಊರಿನ ಉಮೇದವಾರ” ಎಂದು ಹೇಳುತ್ತಿದ್ದರು. ನಾನು ಮೊದಲ ಸಭೆಗೆ ಅಭ್ಯರ್ಥಿಯಾಗಿದ್ದರೆ ನನ್ನೆದುರು ಲಮಾಣಿಯ ತೀರ್ಥರಾಮ ಸಂಪತ್ತಿಗೆ ಸ್ಪರ್ಧಿಸಿದ್ದರು. ಪ್ರಚಾರ ಸಭೆಗಳಲ್ಲಿ ನಾನೆದ್ದು ನಿಂತು ಜನರಿಗೆ ಹೇಳುತ್ತಿದ್ದೆ– “ನಾನು ಪಕ್ಷದ ನಿಲುವನಾಗಿ ಬಂದಿದ್ದೇನೆ. [illegible] ನಿಮ್ಮ ಸೈಲಿಯ ನಿಮ್ಮ ಎದುರು [illegible] ವಿಧಾನ ಸಭೆಗೆ ಹೋಗುತ್ತೇನೆ. ಇಲ್ಲಿಯವರೆಗೆ ನಮ್ಮ ಊರಿಗೆ ಬರುವುದಕ್ಕಾಗಿ ಹಲವು ವ್ಯಕ್ತಿ ಬಂದು ಹೋಗಿದ್ದಾರೆ. [illegible] ನಿಮ್ಮ ಮುಂದಿಟ್ಟಿದ್ದೇನೆ.” ಇದು [illegible] ಬರಿತು ಅನ್ನಿಸುತ್ತಿದೆ. ನಾನು ... ಆಯ್ಕೆಯಾದೆ.

ಹೈದರಾಬಾದ್ ಶಾಸನ ಸಭೆಗೆ ಆಯ್ಕೆಯಾದದ್ದು ಒಂದು ವಿಶಿಷ್ಟ ಅನುಭವ ನನಗೆ. ಆಗ ವಯಸ್ಸು 26–27. ನಾನು ಈ ಸದಸ್ಯತ್ವದ ಜತೆಗೇ ವಕೀಲಿ ವೃತ್ತಿಯನ್ನೂ ಮುಂದುವರಿಸಿದ್ದೆ. ಶಾಸನ ಸಭೆಯಲ್ಲಾಗ ಬಹುತೇಕ ಸದಸ್ಯರು ಉರ್ದುವಿನಲ್ಲೇ ಮಾತನಾಡುತ್ತಿದ್ದರು. ನಾನು ಪ್ರತಿಯೊಂದು ಮಸೂದೆಯನ್ನು ಕುರಿತ ಚರ್ಚೆಯಲ್ಲೂ ಭಾಗವಹಿಸುತ್ತಿದ್ದೆ. ನನಗೆ ಅನೇಕ ಪ್ರಮುಖ ಸಮಿತಿಗಳಲ್ಲಿ ಸ್ಥಾನ ಸಿಕ್ಕಿತಲ್ಲದೆ, ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿಯೂ ನೇಮಕಗೊಂಡೆ. ಹೈದರಾಬಾದ್ ಶಾಸನ ಸಭೆಯಲ್ಲಿ ನನ್ನ ಜತೆಯಿದ್ದ ಸದಸ್ಯರಲ್ಲಿ ಮುಖ್ಯರಾದವರು ಡಾ.ಚೆನ್ನಾ ರೆಡ್ಡಿ. ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ನನ್ನ ಸಹ ಪ್ರಧಾನ ಕಾರ್ಯದರ್ಶಿಯಾಗಿದ್ದ ಪಿ.ವಿ.ನರಸಿಂಹರಾವ್ ಅನಂತರ ಭಾರತದ ಪ್ರಧಾನಮಂತ್ರಿಯೂ ಆದರು. ನಮ್ಮ ಜಿಲ್ಲೆ ಹಾಗೂ ಅದರ ಸುತ್ತಮುತ್ತಲಿನ ಸ್ಥಳದವರೆಂದರೆ ಚಂದ್ರಶೇಖರ ಪಾಟೀಲರಲ್ಲದೆ, ಮಹದೇವಪ್ಪ ರಾಂಪುರೆ, ಕೊಲ್ಲೂರು ಮಲ್ಲಪ್ಪ ಜಗನ್ನಾಥರಾವ್ ಚಂಡರಿಕೆ, ಎಸ್. ರುದ್ರಪ್ಪ ಮೊದಲಾದವರು ಅವರೊಂದಿಗಿನ ಒಡನಾಟ ಮರೆಯಲಾಗದಂಥ ಅನುಭವ. ಆಗ ಶಾಸನ ಸಭಾ ಸದಸ್ಯರಿಗೆ ಪ್ರತಿ ತಿಂಗಳೂ 200 ರೂಪಾಯಿ ಭತ್ಯೆ ನೀಡಲಾಗುತ್ತಿತ್ತು. ನಾನು ವಕೀಲನಾಗಿ ಇದಕ್ಕಿಂತಲೂ ಹೆಚ್ಚು ಹಣ ಗಳಿಸುತ್ತಿದ್ದರೂ ರಾಜಕಾರಣದಲ್ಲೇ ನನಗೆ ಭವಿಷ್ಯ ಕಾದಿತ್ತು.

ನಾನು ಹೈದರಾಬಾದ್ ಶಾಸನ ಸಭೆಯಲ್ಲಿ ಸದಸ್ಯನಾಗಿದ್ದಾಗ ಬಿ.ರಾಮಕೃಷ್ಣ ರಾವ್ ಎನ್ನುವವರು ಮುಖ್ಯಮಂತ್ರಿಯಾಗಿದ್ದರು. ಭಿನ್ನಮತವೆನ್ನುವುದು ಕಾಂಗ್ರೆಸ್‌ನಲ್ಲಿ ಆಗಿನಿಂದಲೂ ಇದ್ದದ್ದೇ. ರಾಮಕೃಷ್ಣರಾವ್ ಅವರದ್ದು ಒಂದು ಗುಂಪಾದರೆ, ಕೆ.ವಿ.ರಂಗಾರೆಡ್ಡಿ ಎನ್ನುವವರದ್ದು ಮತ್ತೊಂದು ಗುಂಪು. ರಂಗಾರೆಡ್ಡಿ ಒಳ್ಳೆಯ ವ್ಯಕ್ತಿ. ಅವರ ಅಳಿಯ ಡಾ.ಚೆನ್ನಾ ರೆಡ್ಡಿ ಹುರುಪಿನ ಯುವಕರಾಗಿದ್ದರು. ನಾನು ಚಂದ್ರಶೇಖರ ಪಾಟೀಲರು ಹಾಗೂ ಇನ್ನಿತರ ಕೆಲವರು ರಂಗಾರೆಡ್ಡಿಯವರ ಗುಣ ಹಾಗೂ ಸಾಮರ್ಥ್ಯ ಮೆಚ್ಚಿ ಅವರ ಅನುಯಾಯಿಗಳಾಗಿದ್ದೆವು. ಆಗಿನ ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರು ಆಳುವ ಪಕ್ಷದಲ್ಲೇ ಎರಡು ಗುಂಪುಗಳನ್ನು ಗಮನಿಸಿ “ಕಮುನಿಷ್ಟರು ಬೇರೆ ಪ್ರಬಲರಾಗಿದ್ದಾರೆ.

ನಿಮ್ಮಲ್ಲಿ ಈ ರೀತಿ ಎರಡು ಬಣಗಳಾಗಿರುವುದು ಸಲ್ಲ" ಎಂದು ಹೈದರಾಬಾದ್‌ಗೆ ಬಂದಾಗೆಲ್ಲ ಬುದ್ಧಿವಾದ ಹೇಳಿದರೂ ಪರಿಸ್ಥಿತಿ ಮೊದಲಿನಂತೆಯೇ ಉಳಿದಿತ್ತು.

ಒಮ್ಮೆ ಪ್ರಧಾನಿ ನೆಹರೂ ರಾಜಭವನದಲ್ಲಿ ತಂಗಿದ್ದವರು ನಮ್ಮೆಲ್ಲರನ್ನು ಕರೆಸಿ "ಇಂಥ ಗುಂಪುಗಾರಿಕೆಯನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಬದಲಾಗಿ ನಿಮ್ಮ ಮನಸ್ಸಿಗೆ ಇಷ್ಟವೆನ್ನಿಸಿದವರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆಮಾಡಿಕೊಂಡು ಒಗ್ಗಟ್ಟಿನಿಂದ ಕೆಲಸ ಮಾಡಿ ಎಂದು ಉಪದೇಶ ಮಾಡಿದ್ದರು.

(ನಿರೂಪಣೆ: ಬಿ.ಎಸ್.ವೆಂಕಟಲಕ್ಷ್ಮಿ)

(ಕೃಪೆ: ಸುಧಾ ವಾರಪತ್ರಿಕೆಯ ಮಾರ್ಚ್ 2, 2000–ಸಂಚಿಕೆ, ಪುಟ–37)

## ದೊಡ್ಡದ್ದನ್ನು ಸಾಧಿಸುತ್ತೀರಿ!

'ಡೆಕ್ಕಾನ್ ಹೆರಾಲ್ಡ್' ಪತ್ರಿಕೆಯ (16 ಮಾರ್ಚ್, 1997) 'ಸಂಡೆ ಸ್ಪಾಟ್‌ಲೈಟ್' ಸಂಚಿಕೆಯ ತುಣುಕೊಂದು ಚಂದ್ರಶೇಖರ ಪಾಟೀಲರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುತ್ತದೆ. ಅವರ ಸಂಪರ್ಕಕ್ಕೆ ಬಂದ ಯಾವನೇ ಸಾಮಾನ್ಯ ವ್ಯಕ್ತಿ, ವಿಶಿಷ್ಟ ವ್ಯಕ್ತಿಯಾಗಿ ರೂಪುಗೊಂಡ ಅನೇಕ ಉದಾಹರಣೆಗಳಿವೆ. ಅಂತಹ ಒಂದು ಅಸಾಮಾನ್ಯ ಸನ್ನಿವೇಶದಲ್ಲಿ ಶ್ರೀ ವೀರೇಂದ್ರ ಪಾಟೀಲರ ಬದುಕಿನ ದಿಶೆಯನ್ನು ಬದಲಿಸಿದ ಬಗ್ಗೆ 'ಡೆಕ್ಕಾನ್ ಹೆರಾಲ್ಡ್' ಪತ್ರಿಕೆಯಲ್ಲಿ ನಿರೂಪಗೊಂಡಿದೆ.



From the log cabin to the white house, it is said about American President Abraham Lincon. Similarly, Mr. Veerendra Patil rose to high eminence from the backwoods of Chincholi to Vidhana Soudha, the seat of power in Karnataka. In the erstwhile Nizam territory, Gulbarga was backward. And it

was quite a feat in those days that Veerendra Patil could go to the Osmania University and qualify for the bar.

He was the witness to momentous changes takingplace in the princely state of Hyderabad. The Razakars had almost thwarted him in his studies., but he gallantly came through that. Popular government had already taken roots in Hyderabad.

A chance meeting with that redoutable leader Mr. Chandrashekhar Patil Hyderabad Karnataka changed the whole career graph of Veerendra Patil. After his law degree, Mr. Patil was aspiring to get officer's post in the Revenue Department.

With a letter of recommendation from Chandrashekhara Patil, he hoped that he would get that covetous post easily. But Chandrashekhara Patil cut him short and told him: "You are destined for greater things. Why do you want this petty post?"

He offered him a Congress ticket to contest an Assembly seat from Aland constituency in Gulbarga district. That one significant event changed the entire life pattern of Mr.Veerendra Patil.

( ಮರದ ದಿಮ್ಮಿಗಳ ಚೌಕಿ (ಕಟ್ಟಿಗೆ ಡಿಪೋ)ಯಿಂದ ಶ್ವೇತ ಭವನಕ್ಕೆ ಜಿಗಿದ ಅಬ್ರಹಾಂ ಲಿಂಕನ್ ಅವರ ಕಥೆಯನ್ನು ಕೇಳಿದ್ದೇವೆ. ಹಿಂದುಳಿದ ಚಿಂಚೋಳಿ ಗ್ರಾಮದಿಂದ ಶ್ರೀ ವೀರೇಂದ್ರ ಪಾಟೀಲರು ಕರ್ನಾಟಕ ರಾಜ್ಯದ ಅಧಿಕಾರದ ಉನ್ನತ ಗದ್ದುಗೆಗೆ ಏರಿದ್ದು ಕೂಡಾ ಇದೇ ರೀತಿಯಲ್ಲಿ. ನಿಜಾಮರ ಆಳ್ವಿಕೆಯ

ಸಂಸ್ಥಾನಗಳಲ್ಲಿಯೇ ಗುಲಬರ್ಗಾ ಬಹಳ ಹಿಂದುಳಿದ ಪ್ರದೇಶ. ಆ ದಿನಗಳಲ್ಲಿ ವೀರೇಂದ್ರ ಪಾಟೀಲರಂಥವರೊಬ್ಬರು ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಸೇರಿ ವಕೀಲರಾಗಿ ಹೊರಬರುವುದೆಂದರೆ ಅದೊಂದು ವಿಸ್ಮಯದ ಸಂಗತಿಯೇ ಆಗಿತ್ತು.

ಅವರಿಗೆ ಅಂದಿನ ಹೈದರಾಬಾದ್ ಪ್ರಾಂತೀಯ ಆಳ್ವಿಕೆಯಲ್ಲಾಗುತ್ತಿದ್ದ ಬದಲಾವಣೆ ಮತ್ತು ಗತಿವಿಧಾನಗಳ ಸಂಪೂರ್ಣ ಅರಿವಿದ್ದಿತು. ರಜಾಕಾರರು ಅವರ ವಿದ್ಯಾಭ್ಯಾಸಕ್ಕೆ ಅನೇಕ ಅಡೆತಡೆಗಳನ್ನು ಒಡ್ಡಿದರೂ ಅವನ್ನು ಲೆಕ್ಕಿಸದೆ, ಅವುಗಳಲ್ಲೆಲ್ಲ ಜಯಶಾಲಿಯಾಗಿ ಹೊರಹೊಮ್ಮಿದರು. ಹೈದರಾಬಾದ್‌ನಲ್ಲಿ ಅದಾಗಲೇ ಜನಪ್ರಿಯ ಸರಕಾರ ಬೇರುಬಿಟ್ಟಿತ್ತು.

ಅಂದಿನ ಅಶಂಕಿತ ನಾಯಕರೆಂದೇ ಪ್ರಸಿದ್ಧರಾಗಿದ್ದ ಚಂದ್ರಶೇಖರ ಪಾಟೀಲರ ಜತೆಗೆ ವೀರೇಂದ್ರರದ್ದು ಅದೊಂದು ಆಕಸ್ಮಿಕ ಭೇಟಿ! ಈ ಭೇಟಿಯ ಫಲವಾಗಿ ವೀರೇಂದ್ರರ ಬದುಕಿನ ನಕ್ಷೆಯೇ ಬದಲಾಯಿತು. ತಮ್ಮ ವಕೀಲಿ ಪದವಿಯೊಂದಿಗೆ ರೆವಿನ್ಯೂ ಇಲಾಖೆಯಲ್ಲಿ ಯಾವುದಾದರೂ ಅಧಿಕಾರೀ ಹುದ್ದೆ ಲಭಿಸಬಹುದೆಂದು ಅವರು ಕನಸು ಕಂಡಿದ್ದರು.

ಚಂದ್ರಶೇಖರ ಪಾಟೀಲರ ಶಿಫಾರಸ್ಸು ಪತ್ರವೊಂದಿದ್ದರೆ, ಆ ಹುದ್ದೆ ತನಗೆ ಸುಲಭವಾಗಿ ಲಭಿಸಬಹುದೆಂದು ವೀರೇಂದ್ರರು ಎಣಿಸಿದ್ದರು. ಚಂದ್ರಶೇಖರ ಪಾಟೀಲರು ಅವರನ್ನು ತಡೆದು,


"ಇಂತಹ ಸಣ್ಣ ಪುಟ್ಟ ಕೆಲಸಕ್ಕೆ ಯಾಕೆ ಆಶಿಸ್ತೀರಿ? ನೀವು ದೊಡ್ಡದನ್ನು ಸಾಧಿಸುವುದಕ್ಕಿದ್ದೀರಿ" ಎಂದು ಹೇಳಿದರು. ಮಾತ್ರವಲ್ಲ ಗುಲಬರ್ಗಾ ಜಿಲ್ಲೆಯ ಆಳಂದ ಮತಕ್ಷೇತ್ರದಿಂದ ಸ್ಪರ್ಧಿಸುವಂತೆ ವೀರೇಂದ್ರ ಪಾಟೀಲರಿಗೆ ಕಾಂಗ್ರೆಸ್ ಟಿಕೆಟನ್ನು ಕೊಟ್ಟರು. ಆವೊಂದು ಮಹತ್ವದ ಸಂಭವ ವೀರೇಂದ್ರ ಪಾಟೀಲರ ಒಟ್ಟು ಜೀವಮಾನವನ್ನೇ ಬೇರೆ ದಿಕ್ಕಿಗೆ ಒಯ್ದಿತು.)

(ಕೃಪೆ: 'ಡೆಕ್ಕಾನ್ ಹೆರಾಲ್ಡ್' ಪತ್ರಿಕೆ, 16 ಮಾರ್ಚ್, 1997)

# ಸೇವಾ ಧುರಂಧರ

-ಎನ್.ಧರಂಸಿಂಗ್

(ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳು)



ಶ್ರೀ ಎನ್.ಧರಂಸಿಂಗ್ ಅವರ ಜತೆಗೆ ಲೇಖಕ

ದಿ। ಚಂದ್ರಶೇಖರ ಪಾಟೀಲರು ಹೈದರಾಬಾದ್ ಕರ್ನಾಟಕದ ಪ್ರಭಾವೀ ರಾಜಕಾರಣಿಯಾಗಿ ಒಳ್ಳೆಯ ಸಂಘಟನೆ, ಸಾಮರ್ಥ್ಯದ ಒಂದು ಶಕ್ತಿ ರೂಪದಲ್ಲಿ ಈ ಭಾಗಕ್ಕೆ ನೇತೃತ್ವವನ್ನು ಕೊಟ್ಟಿದ್ದಾರೆ. ಹೈದರಾಬಾದ್ ನಿಜಾಮರ ಮತ್ತು ಇಂಗ್ಲಿಷ್‌ರ ವಿರುದ್ಧ ಹೋರಾಡಲು ಸಣ್ಣ ವಯಸ್ಸಿನಲ್ಲೇ ಸ್ವಾತಂತ್ರ್ಯ ಸೇನಾನಿಯಾಗಿ ಅನೇಕ ಸಲ ಜೈಲಿಗೆ ಹೋಗಿ ಕಷ್ಟಪಟ್ಟು ದೇಶಕ್ಕೋಸ್ಕರ ತ್ಯಾಗ ಮಾಡಿದ್ದಾರೆ. ಅವರ ರಾಜಕೀಯ ಪಾತ್ರ ಬಹಳ ಮಹತ್ವದ್ದಾಗಿದೆ.

ದಿ। ಮಹಾದೇವಪ್ಪ ರಾಂಪುರೆ, ಮಾಜಿ ಮುಖ್ಯ ಮಂತ್ರಿ ದಿ। ವೀರೇಂದ್ರ ಪಾಟೀಲರು ಇನ್ನೂ ಅನೇಕ ರಾಜಕೀಯ ನಾಯಕರು ಅವರ ಸಹಪಾಠಿಗಳಾಗಿದ್ದರು. ಮಹಾನ್ ಸಂಘಟನಾ ಚತುರರಾಗಿದ್ದ ಅವರು ಅನೇಕ ನಾಯಕರನ್ನು ಸೃಷ್ಟಿಸಿದ ಕೀರ್ತಿ ಹೊಂದಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾಗಿ, ಶಾಸಕರಾಗಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಈ ನಡಿಗೆ ಅಮೋಘ ಸೇವೆ ಸಲ್ಲಿಸಿದ್ದಾರೆ.

ಚಂದ್ರಶೇಖರ ಪಾಟೀಲರು ಆಗಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ನಿಜಲಿಂಗಪ್ಪನವರ ನೇತೃತ್ವದಲ್ಲಿ ಕರ್ನಾಟಕ ಏಕೀಕರಣ ಪರವಾಗಿ ಶ್ರಮಿಸಿದ ಮಹಾನ್ ವ್ಯಕ್ತಿಯಾಗಿದ್ದರು. ತನ್ನದೇ ಆದ ರಾಜಕೀಯ ವೈಶಿಷ್ಟ್ಯವನ್ನು ದಕ್ಷತೆಯಿಂದ, ನ್ಯಾಯ ನಿಷ್ಠುರತೆಯಿಂದ, ಬೆಳೆಸಿಕೊಂಡು ಬಂದಂಥ ವ್ಯಕ್ತಿಯಾಗಿದ್ದರು. ಅವರು ತಮ್ಮ ಎಂ.ಎಲ್.ಎ. ಅಧಿಕಾರದ ಅವಧಿಯಲ್ಲಿ ರೈತರಿಗೆ ಬಡಬಗ್ಗರಿಗೆ ಸಹಾಯ ಮಾಡಿದ್ದಾರೆ. ಹಳ್ಳಿಗಳಿಗೆ ಶಾಲೆ, ದವಾಖಾನೆ, ರಸ್ತೆ ಮಾಡಿಸಿ, ಈಗಲೂ ಕೂಡಾ ಕರ್ನಾಟಕದ ಜನತೆಯ ಮನಸ್ಸಿನಲ್ಲಿ ಉಳಿದುಕೊಂಡಿದ್ದಾರೆ. ಅವರ ಧೈರ್ಯ ಸಾಹಸ ಮತ್ತು ದೃಢಸಂಕಲ್ಪದ ಜೀವನ ನಮ್ಮೆಲ್ಲರಿಗೆ ಮಾರ್ಗದರ್ಶನವಾಗಿದೆ.

1960ರಲ್ಲಿ ಸಂಭವಿಸಿದ ಆ ಬಸ್ಸಿನ ದುರ್ಘಟನೆ ಇಡೀ ಕರ್ನಾಟಕದ ಜನರಿಗೆ ದಿಗ್ಭ್ರಮೆ ಉಂಟುಮಾಡಿತು. ಅಂದು ಒಬ್ಬ ಮಹಾನ್ ವ್ಯಕ್ತಿಯನ್ನು ನಾವು ಕಳೆದುಕೊಂಡಂತಾಯಿತು.

## ಶ್ರೇಷ್ಠ ನಾಯಕ

–ಶ್ರೀ ಎಸ್.ಆರ್. ಬೊಮ್ಮಾಯಿ

ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸಿದ ದಿವಂಗತ ಚಂದ್ರಶೇಖರ ಪಾಟೀಲರು ಈ ಭಾಗದ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿಕೊಟ್ಟರು. ಈ ಭಾಗದ ನಾಯಕರುಗಳಲ್ಲಿಯೇ ಅವರು ಶ್ರೇಷ್ಠ ನಾಯಕರಾಗಿದ್ದರು.

ಇಂದಿನ ರಾಜಕೀಯದಲ್ಲಿ ನೈತಿಕ ಮೌಲ್ಯಗಳು ಕುಸಿದು ಬೀಳುತ್ತಿವೆ. ಅದೇ ರೀತಿ ಸಮಾಜದ ಎಲ್ಲ ವಿಭಾಗಗಳಲ್ಲಿಯೂ ನೈತಿಕತೆಯು ಅಧಃಪತನವಾಗುತ್ತಿದೆ. ನೈತಿಕ ಮೌಲ್ಯಗಳನ್ನು ಮರೆತರೆ ದೇಶದಲ್ಲಿ ಭ್ರಷ್ಟಾಚಾರ ಹೆಚ್ಚಾಗಿ ದೇಶದ ಅಭಿವೃದ್ಧಿ ಕುಂಠಿತಗುಳ್ಳತ್ತದೆ. ಆದ್ದರಿಂದ ದೇಶದಲ್ಲಿ ಸಾಮಾಜಿಕ ನ್ಯಾಯ, ಬಡಜನರ ಅಭಿವೃದ್ಧಿ, ಅಲ್ಪಸಂಖ್ಯಾತರ ರಕ್ಷಣೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಪ್ರತಿಜ್ಞೆಯನ್ನು ನಾವು ಮಾಡಬೇಕು. ಅದೇ ನಾವು ದಿ| ಚಂದ್ರಶೇಖರ ಪಾಟೀಲರಿಗೆ ಸಲ್ಲಿಸುವ ನಿಜವಾದ ಗೌರವ.

## ಅಪರೂಪದ ರಾಜಾ ಮನುಷ್ಯ

–ದಿ| ರಾಮಕೃಷ್ಣ ಹೆಗಡೆ



ಕರ್ನಾಟಕ ಏಕೀಕರಣ ಆಯ್ತು. ಆವಾಗ ನಾವೆಲ್ಲ ಒಟ್ಟಿಗೆ ಬಂದ್ವಿ. ಹೈದರಾಬಾದ್ ಕರ್ನಾಟಕದ ನಾಲ್ಕು ಜನರ ಪರಿಚಯ ಆವತ್ತೇ ಆದದ್ದು– ಚಂದ್ರಶೇಖರ ಪಾಟೀಲ್, ವೀರೇಂದ್ರ ಪಾಟೀಲ್, ಮೊಹಮ್ಮದ್ ಅಲಿ ಮತ್ತು ಜಗನ್ನಾಥರಾವ್ ಚಂಡರಕಿ.

ಬಹಳ ಅಪರೂಪದ ವ್ಯಕ್ತಿತ್ವ ಚಂದ್ರಶೇಖರ ಪಾಟೀಲ್ ಅವರದ್ದು. ರಾಜಕಾರಣದಲ್ಲಿ ಅಂಥ ಮತ್ತೊಬ್ಬ ವ್ಯಕ್ತಿ ಸಿಗೋದಿಲ್ಲ – ನಾನಂತೂ ಬಹಳ ಕಷ್ಟಸಾಧ್ಯ ಅಂತ ಹೇಳ್ತೇನೆ. ಅವ್ರನ್ನ ನೋಡಿದ ತಕ್ಷಣವೇ ನನಗೆ ಒಂಥರದ ಆಶ್ಚರ್ಯ, ಒಂಥರದ ಸಂತೋಷ, ಒಂಥರದ ಆತ್ಮೀಯ ಭಾವನೆ– ಇವೆಲ್ಲ ಒಟ್ಟಿಗೆ ಬರ್ತಿತ್ತು. ಆಶ್ಚರ್ಯ ಏನಂತಂದ್ರೆ, ಇಲ್ಲಿ ನಮ್ಮ ಕರ್ನಾಟಕದಲ್ಲಿ ಅವರಂಥ ಆಜಾನುಬಾಹು, ಸ್ಫುರದ್ರೂಪಿ, ಸುಂದರ ನಿಲುವಿನ ವ್ಯಕ್ತಿ ಬೇರೆಯವರು ಇರ್ಲಿಲ್ಲ.

..ಆವಾಗ 'ಚಂದ್ರಮೋಹನ್' ಅಂತ ಫಿಲಂ ಆಕ್ಟರ್ ಇದ್ರು. ಅವರದ್ದು ಕೂಡಾ ಇವ್ರ ಥರದ್ದೇ ಕಣ್ಣುಗಳು. ಇವ್ರನ್ನ ನೋಡಿದ್ರೆ ಯಾವುದೋ ಫಿಲಂ ಆಕ್ಟರ್ ಥರ ಕಾಣ್ತಿದ್ರು. ಮೊದಲ ಭೇಟಿಯಲ್ಲೇ ಪರಿಚಯ ಆಯ್ತು ಬರ್ತಾ ಬರ್ತಾ ಸ್ನೇಹ ಬೆಳೀತು ಮತ್ತು ನಾವಿಬ್ರೂ ಅತ್ಯಂತ ಅನ್ಯೋನ್ಯ ಸ್ನೇಹಿತರಾಗಿದ್ವಿ...

ಅವ್ರನ್ನ ನೋಡಿದ್ರೇ ಒಬ್ಬ ರಾಜಾ ಮನುಷ್ಯ ಅಂತ ಹೇಳ್ತೀವಲ್ಲ ಹಾಗೆ. ಮನಸ್ಸಿಗೆ ಖುಷಿ ಆಗ್ತಿತ್ತು. ಜನರ ಕೆಲಸ ಮಾಡೋದು ಅಂದ್ರೆ ಅವ್ರಿಗೆ ಪೂಜೆ ಇದ್ದ ಹಾಗೆ....ಅವ್ರು ತಮ್ಮ ಊರಲ್ಲಿ ಅನೇಕ ಅತ್ಯಂತ ಕ್ರಾಂತಿಕಾರೀ ಬದಲಾವಣೆಗಳನ್ನು ತಂದಿದ್ದಾರೆ– ಮಹಾಗಾಂವ್‌ನಲ್ಲಿ.

## ಶೂರ ಧೀರ ಚಂದ್ರಶೇಖರ

–ದಿ| ರಾಮಚಂದ್ರ ವೀರಪ್ಪ

**ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಾಜಿ ಲೋಕಸಭಾ ಸದಸ್ಯರು, ಬೀದರ್ ಜಿಲ್ಲೆ**

ದಿ| ಚಂದ್ರಶೇಖರ ಪಾಟೀಲರು ನಮ್ಮ ನಾಯಕರಾಗಿ ಹೈದರಾಬಾದ್ ಕರ್ನಾಟಕ ಹೋರಾಟದ ಸಂಗ್ರಾಮದಲ್ಲಿ ಬಹಳ ಕಷ್ಟಗಳನ್ನು ಎದುರಿಸಿ ಜೈಲಿಗೆ ಹೋಗಿ ಹೊಡೆಸಿಕೊಂಡು, ಬಡಿಸಿಕೊಂಡವರು. ಪಾಟೀಲರು ಜನ ಹಿತೈಷಿಗಳಾಗಿ, ಜನಪ್ರೇಮಿಯಾಗಿದ್ದರು. ರೈತರ ಬಗ್ಗೆ, ದೀನ ದಲಿತರ ಬಗ್ಗೆ ಬಹಳ ಕಾಳಜಿವುಳ್ಳವರಾಗಿ ಹಳ್ಳಿಗಳಿಗೆ ಹೋಗಿ ಅನೇಕ ಜನರ ಪ್ರಾಣವನ್ನು ಉಳಿಸಿದವರಲ್ಲಿ ಮೊದಲಿಗರು. ನಾವು ಅವರ ಸಂಗಡ ಎಲ್ಲಕ್ಕೂ ಸಿದ್ಧರಾಗಿದ್ದೆವು. ಅವರು ಬಹಳ ಶೂರರು, ಧೀರರು, ಶಕ್ತಿವಂತರು ಮತ್ತು ವ್ಯಾಯಾಮ ಪಟುಗಳಾಗಿದ್ದರು. ಅವರನ್ನು ನೋಡಿದರೆ, ವೈರಿಗಳಲ್ಲಿ ಅಂಜಿಕೆ, ಭಯಭೀತಿ ಹುಟ್ಟುತ್ತಿತ್ತು. ರಜಾಕಾರರ ಎದುರಾಗಿದ್ದರು.

1952ರಲ್ಲಿ ಮಹಾಗಾಂವ್ ಇಲೆಕ್ಷನ್ ಟೈಮ್‌ನಲ್ಲಿ ನಮಗೆ ಬಹಳ ಸಹಾಯ ಮಾಡಿದ್ದಾರೆ. ದಿ| ಮಹಮ್ಮದ್ ಅಲಿ ಸಾಹೇಬರಿಗೆ, ದಿ|ವೀರೇಂದ್ರ ಪಾಟೀಲ್‌ರಿಗೆ

ಕಾಂಗ್ರೆಸ್ ಸದಸ್ಯರನ್ನಾಗಿ ಚಂದ್ರಶೇಖರ ಪಾಟೀಲರೇ ಮಾಡಿದವರು.ಅವರು ಮಂತ್ರಿಯಾಗಲು ಇವರೇ ಕಾರಣರು.

ಸೋಷಿಯಲ್ ವೆಲ್ಫೇರ್ ಆಫೀಸರ್ ಕೆ.ಎಂ.ಕೋಟಿ ಮಹಾಗಾಂವ್‌ಕ್ಕೆ ಬಂದು ತಿರುಗಿ ಪಾಟೀಲರ ಸಂಗಡ ಮೈಸೂರಿಗೆ ಹೊರಟ ಸಮಯ ಮಹಾಗಾಂವ್‌ದಲ್ಲಿ ಅವರ ಊಟ ಆಯಿತು. 'ನೀವು ಊರಿಗೆ ಹೋಗಿ ಯಾವಾಗ ಬರುತ್ತೀರಿ?' ಎಂದು ನಾ ಕೇಳಿದಾಗ 'ಶೀಘ್ರ ಬರ್ತೀನಿ' ಅಂತ ಹೇಳಿ ಹೋದವರು ಮತ್ತೆ ಅವರ ಶವವನ್ನೇ ನಾ ನೋಡಬೇಕಾಯಿತು. ಗೋಪಾಲ್ ರಾವ್ ಮುಡಬಿಯವರು ಬೆಂಗಳೂರಿನಿಂದ ಶವವನ್ನು ಮಹಾಗಾಂವಕ್ಕೆ ತರಬೇಕಾದರೆ ದಾರಿ ಉದ್ದಕ್ಕೂ ಭಾರೀ ಜನಸಂದಣಿ ಸೇರಿ ದುಃಖದಲ್ಲಿ ಮುಳುಗಿತ್ತು.

ಪಾಟೀಲರಿಗೆ ದೊಡ್ಡ ಕೆಲಸ ಕೊಡುತ್ತೇವೆ ಎಂದು ಹೇಳಿದ ನಿಜಾಮ ಅರಸನ ಮಾತಿಗೆ ಆಸೆ ಪಡಲಿಲ್ಲ. ಬಡಬಗ್ಗರಿಗೆ ತಂದೆಯ ಹಾಗೆ ಇದ್ದರು. ಎರಡು ಸಲ ಎಂ.ಎಲ್.ಎ.ಆಗಿ ಜನಮೆಚ್ಚಿನ ನಾಯಕರಾಗಿ ಅಧಿಕಾರಿಗಳ, ಮಂತ್ರಿಗಳ ಪ್ರೀತಿಗೆ ಪಾತ್ರರಾಗಿದ್ದರು. ಅವರ ಬದುಕು ಜನರಿಗೆ ಆದರ್ಶವಾಗಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ.

## ಸೇವಾ ಧುರೀಣ ಚಂದ್ರಶೇಖರ

–ಎಸ್. ರುದ್ರಪ್ಪ,
ಮಾಜಿ ಎಂ.ಎಲ್.ಎ., ಗುಲಬರ್ಗಾ

ದಿ। ಚಂದ್ರಶೇಖರ ಪಾಟೀಲರು ಕಾಂಗ್ರೆಸ್ ಪಾರ್ಟಿಯ ಜಿಲ್ಲಾ ಅಧ್ಯಕ್ಷರಾಗಿ, ದಿಟ್ಟ ಆಡಳಿತಗಾರರಾಗಿ, ಜನಸೇವೆಯ ಧುರೀಣರಾಗಿ, ಪಾರ್ಟಿಯ ಶಿಸ್ತು, ಶಾಂತಿ ಕಾಪಾಡಿಕೊಂಡು ಪ್ರಾಮಾಣಿಕತೆಯಿಂದ ಮೆಚ್ಚಿನ ನಾಯಕರಾಗಿದ್ದರು. ನನಗೆ ಇದನ್ನು ಕಂಡು ಬಹಳ ಆನಂದವಾಗುತ್ತಿತ್ತು. ಪಾರ್ಟಿಯ ಮೇಲಿನ ಅಭಿಮಾನದಿಂದ ಅದನ್ನು ಬಲಯುತವನ್ನಾಗಿ ಮಾಡಬೇಕೆಂದು ಸಂಕಲ್ಪ ಇತ್ತು. ಅವರಿರುವಾಗ ಅನೇಕ ಮಂದಿ ಒಳ್ಳೆಯ ರಾಜಕರಣಿಗಳನ್ನು ಸೇರಿಸಿಕೊಂಡರು. ಹೈದರಾಬಾದ್

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಜನರನ್ನು ಪ್ರಾಣದಿಂದ ಉಳಿಸಿ, ಉದ್ಧಾರ ಮಾಡಿ, ಗುಲಬರ್ಗಾ ಜಿಲ್ಲೆಯಲ್ಲಿ ಸೇವಾದಳ ಸಂಘ ಕಟ್ಟಿ, ಸಾಹಿತ್ಯವನ್ನು ಎತ್ತಿ ತೋರಿಸಿದವರಲ್ಲಿ ಇವರೇ ಮೊದಲಿಗರು. ಇವರಲ್ಲಿ ಜಾತಿಗೀತಿ ಭೇದವಿಲ್ಲದೆ ಜನರನ್ನು ಪಾರ್ಟಿಗೆ ಬರಮಾಡಿಕೊಳ್ಳುತ್ತಿದ್ದರು. ನಾನು 1957ರಲ್ಲಿ ಚಿತ್ತಾಪುರ ಎಂ.ಎಲ್.ಎ. ಆಗಿದ್ದಾಗ ಇವರೂ ಕೂಡಾ ಎಂ.ಎಲ್.ಎ.ಆಗಿ ಹಳ್ಳಿಗಳಲ್ಲಿ ರಸ್ತೆ, ಶಾಲೆ, ದವಾಖಾನೆ ಹಾಗೂ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿಸಿದರು. ನಮ್ಮ ಕಾಲದಲ್ಲಿ ಹೈದರಾಬಾದ್ ಸ್ಟೇಟ್ ಇದ್ದಾಗ ಮುಖ್ಯಮಂತ್ರಿಯಾಗಿದ್ದವರು ಬಿ.ರಾಮಕಿಶನ್ ರಾವ್.

1956, ನವೆಂಬರ್ ಒಂದರಂದು ಹೊಸ ಮೈಸೂರು ಸ್ಟೇಟ್ ಅಸ್ತಿತ್ವಕ್ಕೆ ಬಂದಾಗ, ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿ ಚಂದ್ರಶೇಖರ ಪಾಟೀಲರ ಅಭಿವೃದ್ಧಿ ಕಲಸಗಳನ್ನು ಕಂಡು ಬಹಳ ಕೊಂಡಾಡಿದರು. ಮಹಾಗಾಂವ್‌ಗೆ ಬಂದು ಅವರ ಕೆಲಸ ಧೋರಣೆಗಳನ್ನು ನೋಡಿ ಬಹಳ ಸಂತೋಷ ಪಟ್ಟರು.

ಗುಲಬರ್ಗಾ ಜಿಲ್ಲೆ ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಅಭಿವೃದ್ಧಿ ಹೊಂದಲಿಕ್ಕೆ ಪಾಟೀಲರೇ ಕಾರಣರು. ಕಷ್ಟಗಳು ಅವರಿಗೆ ಎಷ್ಟೇ ಬಂದರೂ ರಾತ್ರಿ ಹಗಲು ಎನ್ನದೆ ಅವನ್ನು ಪೂರೈಸುತ್ತಿದ್ದರು. ಇದರಿಂದ ನಿಜಲಿಂಗಪ್ಪನವರಿಗೆ ಚಂದ್ರಶೇಖರ ಪಾಟೀಲರನ್ನು ಕಂಡರೆ ಬಹಳ ಸಂತೋಷವಾಗುತ್ತಿತ್ತು. ಒಮ್ಮೆ ಮುಖ್ಯಮಂತ್ರಿ ನಿಜಲಿಂಗಪ್ಪನವರು ಗುಲಬರ್ಗಾಕ್ಕೆ ಬಂದಾಗ ಹೈದರಾಬಾದ್ ಕರ್ನಾಟಕ ಬಹಳ ಹಿಂದುಳಿದ ಪ್ರದೇಶ, ಆದ್ದರಿಂದ ಇಲ್ಲಿ ನಮಗೆ ಇಂಜಿನೀಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಎಲ್ಲ ಆಗಬೇಕೆಂದು ವೈಯಕ್ತಿಕವಾಗಿ ಮನವಿ ಮಾಡಿಕೊಂಡರು.

ಕೇಂದ್ರ ಸರಕಾರದ ಗ್ರಾಮೀಣ ಅಭಿವೃದ್ಧಿ ಮಂತ್ರಿ ಎಸ್.ಕೆ.ಡೇ.ಗೆ ಆಹ್ವಾನ ಕೊಟ್ಟು ಅವರು ಗುಲಬರ್ಗಾಕ್ಕೆ ಬಂದಾಗ ಅವರ ಸಂಗಡ ಹಳ್ಳಿಗಳಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಅವರ ಗಮನಕ್ಕೆ ತಂದು ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ವ್ಯವಸ್ಥೆ ಮತ್ತು ಆರೋಗ್ಯ ಕೇಂದ್ರಗಳನ್ನು ತೆರೆಯುವಂತೆ ಒತ್ತಾಯವಾಗಿ

ಮನವಿ ಮಾಡಿಕೊಂಡಿದ್ದರು. ಜನ ಸೇವೆಯೇ ಜನಾರ್ದನ ಸೇವೆ ಎಂದು ತಿಳಿದು, ಬಸವೇಶ್ವರರ ತತ್ತ್ವದಂತೆ ಕಾಯಕವೇ ಕೈಲಸವೆಂದು ಒಳ್ಳೊಳ್ಳೆಯ ಕೆಲಸಗಳನ್ನು ಜನರ ಸಲುವಾಗಿ ಮಾಡುತ್ತಿದ್ದರು. ಅವರು ಧಾರ್ಮಿಕ ವ್ಯಕ್ತಿಯಾಗಿದ್ದರು. ಧೈರ್ಯಶಾಲಿಗಳಾಗಿದ್ದು, ಒಬ್ಬ ನಿಷ್ಠಾವಂತ ಸತ್ಯವಾದಿಯಾಗಿದ್ದ ಚಂದ್ರಶೇಖರ ಪಾಟೀಲರನ್ನು ನಾವು ಕಳೆದುಕೊಂಡಿದ್ದು ನಮ್ಮ ದುರದೃಷ್ಟವೆಂದು ನಾನು ತಿಳಿದುಕೊಂಡಿದ್ದೇನೆ., ಅವರು ಆಡಿದ ಮಾತುಗಳು ನನಗೆ ನೆನಪುಹೋಗದೆ ಉಳಿದಿದೆ. ಅನೇಕ ಸಂದರ್ಭಗಳಲ್ಲಿ ನಾನು ಇಂದಿಗೂ ಅವರನ್ನು ನೆನೆಯುತ್ತೇನೆ.



## ಹುಟ್ಟು ನೇತಾರ

–ಎಂ. ರಾಜಶೇಖರಮೂರ್ತಿ

ಚಂದ್ರಶೇಖರ ಪಾಟೀಲ್, ಹಿ ಈಸ್ ಎ ಬಾರನ್ ಲೀಡರ್. ಅಂಡ್ ಹಿ ಬಿಲ್ಟ್ ಅಪ್ ಹಿಸ್ ಲೀಡರ್‌ಶಿಪ್....ಇನ್ ಪಾಲಿಟಿಕ್ಸ್... ವಿತ್ ದಿ ಹೆಲ್ಪ್ ಆಫ್ ಹಿಸ್ ರೀಚ್, ಟು ಬಿಕಂ ದಿ ಲೀಡರ್ ಆಫ್ ದಟ್ ಏರಿಯಾ... ಸಮ್ ಪ್ರಾಬ್ಲಮ್ಸ್.. ಪ್ರಾಬ್ಲಮ್ಸ್ ರಿಲೇಟಿಂಗ್ ಟು ಕನ್ನಡ..ಅಲ್ಲಿ ಹೆಚ್ಚಿಗೆ ಯಾವುದು ಇದ್ದುದು ಅಂದ್ರೆ, ಮರಾಠಿ, ತೆಲುಗು ಮತ್ತು ಉರ್ದು ಭಾಷೆ ಬಹಳ ಪ್ರಬಲವಾಗಿತ್ತು. ಅಂಥ ಸಂದರ್ಭದಲ್ಲಿ ಕನ್ನಡ ಭಾಷೆ ಬಹಳ ಹೀನ ಸ್ಥಿತಿಗೆ ಹೋಗಿತ್ತು. ಕನ್ನಡಕ್ಕೆ ಪ್ರಾಧಾನ್ಯವನ್ನು ಕೊಡಬೇಕಂತ ಹೇಳಿ ಒಮ್ಮೆ ಸಿದ್ಧಯ್ಯ ಪುರಾಣಿಕರು ಒಂದು


ಸಭೆಯನ್ನು ಕರ್ದಾಗ, ಕನ್ನಡ ಸಾಹಿತ್ಯ ಪರಿಷತ್ತು ಸಭೆಯನ್ನು ಕರ್ದಾಗ, ಆ ಸಂದರ್ಭದಲ್ಲಿ ಎಲ್ಲಾ ಹಳ್ಳಿಗಳಿಗೆ ಹೋಗಿ ಜನರನ್ನು ಸಂಪರ್ಕ ಮಾಡಿ ಕನ್ನಡ ಭಾಷೆ ಬಗ್ಗೆ ತಿಳಿಸಿ ಅವ್ರೆಲ್ಲ ಸಭೆಗೆ ಬರುವಂತೆ ಮಾಡಿದ್ರು. ದಟ್ ಹೆಲ್ಪಡ್ ಇಂಡೈರೆಕ್ಟ್ಲೀ ಟು ಡೆವೆಲಪ್ ಹಿಸ್ ಲೀಡರ್‌ಶಿಪ್... ಅಲ್ಲೂ ಹಿ ಗಾಟ್ ಅಕ್ವೈಂಟೆಡ್ ವಿದ್ ಹಿಸ್ ಪೀಪಲ್...ಅಟ್ ದಟ್ ಏರಿಯಾ..

ಎರಡನೇದಾಗಿ ಕರ್ನಾಟಕ ಏಕೀಕರಣಕ್ಕಾಗಿ ಕೂಡಾ ಅವರು ಹೋರಾಟ ನಡೆಸಿದ್ರು. ಜನಗಳ ಹತ್ರ ಹೋಗೋದು, ಅವರನ್ನು ಹುರಿದುಂಬಿಸೋದು. ಅದರ ಬಗ್ಗೆ ಈ ವಿಚಾರಗಳನ್ನ ತಿಳಿಸೋದು, ಸಾಕಷ್ಟು ಬೆಂಬಲ ಪಡೆದಿದ್ದಾರೆ ಕರ್ನಾಟಕ ಏಕೀಕರಣದ ವಿಷಯವಾಗಿ- ಮೂರನೇದ್ದು. ಅಷ್ಟು ಕರ್ನಾಟಕ ಏಕೀಕರಣ ಆದ್ ಮೇಲೆ ಇಲ್ಲಿ ಸಭೆಗೆ ಬಂದಾಗ ಅವ್ರ ಚಲನವಲನಗಳನ್ನ ನಾನು ಸಾಕಷ್ಟು ನೋಡಿದ್ದೇನೆ. ಅವ್ರು ಎಲ್ಲಾ ಜನಗಳ ಜೊತೆಯಲ್ಲಿ ಬೆರೆತುಕೊಂಡು ಹೋಗ್ತಿದ್ದವರು. ಅಲ್ಲಿ ಮುಸ್ಲಿಂ ಆಫೀಸರ್ಸ್ ಏನ್ ಹೈದರಾಬಾದ್‌ನಿಂದ ಕರ್ನಾಟಕಕ್ಕೆ ಬಂದಿದ್ರು... ಅವ್ರ ಸಮಸ್ಯೆಗಳನ್ನು ನೋಡಿ ಅವ್ರಿಗೆ ಸಹಾಯ ಮಾಡ್ತಿದ್ರು. ಅವ್ರು ನಮ್ ವಿರೋಧಿಗಳಾಗಿದ್ರೂ, ಅವ್ರೆಲ್ಲ ನಮ್ಗ ತೊಂದ್ರೆ ಕೊಡ್ತಾ ಇರ್ತಿದ್ರೂ, ಆ ಭಾವನೆ ಇವ್ರಲ್ಲಿ ಇದ್ದಿದ್ದಿಲ್ಲ. ಹಿ ವಾಸ್ ಮೋರ್ ಫ್ರೆಂಡ್ಲಿ ವಿತ್ ಮುಸ್ಲಿಂ ಕಮ್ಯೂನಿಟಿ. ಇವೆಲ್ಲಕ್ಕಿಂತ ಜಾಸ್ತಿಗೆ ಹೇಳಬೇಕಂತಂದ್ರೆ, ಹಿ ವಾಸ್ ರೆಸ್ಪೋನ್ಸಿಬಲ್ ಫಾರ್ ಬಿಲ್ಡಿಂಗ್ ದ ಲೀಡರ್‌ಶಿಪ್ ಆಫ್ ವೀರೇಂದ್ರ ಪಾಟೀಲ್.

## ಪ್ರಭಾವಶಾಲಿ ವ್ಯಕ್ತಿತ್ವ

–ಸ್ವಾಮಿ ರಮಾನಂದ ತೀರ್ಥ

ಡಾ। ಚಂದ್ರಶೇಖರ ಪಾಟೀಲರು ಒಬ್ಬ ಶ್ರೇಷ್ಠ ಕಾರ್ಯಕರ್ತರಾಗಿದ್ದರು. ಜನತೆಯ ಸರ್ವತೋಮುಖ ಏಳಿಗೆಗಾಗಿ ಹಗಲಿರುಳು ಶ್ರಮಿಸಿದ್ದಲ್ಲದೆ ಹೈದರಾಬಾದ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮಗೆ ಎದುರಾದ ಎಲ್ಲ ವಿಷಮ ಪರಿಸ್ಥಿತಿಗಳನ್ನು ಎದುರಿಸಿ ನಿಂತರು. ಹಿಡಿದ ಕಾರ್ಯವನ್ನು ಬಿಡದ ನಿಷ್ಠೆ ಅವರದಾಗಿತ್ತು. ಅಂದಿನ



ಕಷ್ಟಕಾಲದಲ್ಲಿ ಅಂತಹ ಒಬ್ಬರು ನನ್ನ ಜೊತೆಗಾರರಾಗಿದ್ದುದು ಉತ್ಸಾಹ ದಾಯಕವಾಗಿತ್ತು. ಸರ್ವಾಧಿಕಾರತ್ವದ ದೌರ್ಜನ್ಯಕ್ಕೆ ತಮ್ಮ ಆಸ್ತಿ-ಪಾಸ್ತಿಗಳನ್ನು ಲೆಕ್ಕಿಸದ ಪ್ರಮುಖ ಕಾರ್ಯಕರ್ತರಲ್ಲಿ ಅವರೊಬ್ಬರಾಗಿದ್ದರು. ಅವರ ಮಾತು ಸ್ಫುಟ ಮತ್ತು ನೇರವಾಗಿದ್ದವು. ಯಾವುದೊಂದು ವಿಷಯಕ್ಕೂ ಪ್ರಸಂಗಕ್ಕೂ ಅವರು ಅಪ್ರತಿಭರಾಗುತ್ತಿರಲಿಲ್ಲ. ತಮ್ಮ ಸುತ್ತಲೂ ನಿಷ್ಠಾವಂತ ಕಾರ್ಯಕರ್ತರ ಒಂದು ಗುಂಪನ್ನೇ ಅವರು ಕಟ್ಟಿದ್ದರು. ಎಲ್ಲ ಜನರ ಸಹಕಾರವೂ ಬೆಂಬಲವೂ ಅವರಿಗೆ ಸದಾ ಲಭಿಸುತ್ತಿತ್ತು.

[illegible]

—[illegible]

ರಾಷ್ಟ್ರಸೇವೆ ಮಾಡುವಲ್ಲಿ ಅವರಿಗಿದ್ದ ಪ್ರಾಮಾಣಿಕತೆ ಮತ್ತು ಸುಸ್ವಭಾವಗಳಿಂದಾಗಿ ಚಂದ್ರಶೇಖರ ಪಾಟೀಲರು ನನ್ನ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು. ನಾನು ಅವರಲ್ಲಿ ಒಬ್ಬ ನಿಸ್ವಾರ್ಥ, ಒಬ್ಬ ಶ್ರದ್ಧಾವಂತ ರಾಷ್ಟ್ರೀಯವಾದಿಯನ್ನು, [illegible] ಜೊತೆಗೆ [illegible] ಉಪಯುಕ್ತವಾದ [illegible] ಕಾರ್ಯಗತಗೊಳಿಸುವುದರಲ್ಲಿ ಎಂತಹ ಪ್ರಸಂಗಗಳನ್ನೂ ಧೈರ್ಯದಿಂದ ಎದುರಿಸಬಲ್ಲ ನಿಷ್ಠಾವಂತ ನಿಸ್ವಾರ್ಥಿಯನ್ನು ಗುರುತಿಸಿದ್ದೆ. ಅವರಿಗಿದ್ದ ಉದಾತ್ತ ಗುಣಗಳ ದೃಷ್ಟಿಯಿಂದ ಶ್ರೀ ಚಂದ್ರಶೇಖರ ಪಾಟೀಲರನ್ನು ನಾವು ಕಳೆದುಕೊಂಡದ್ದು ತುಂಬಲಾರದ ಹಾನಿಯೆಂದು ನನ್ನ ತಿಳುವಳಿಕೆ. ಅವರ ಸ್ಥಾನವನ್ನು ತುಂಬುವಂತಹ ಮತ್ತೊಬ್ಬ ವ್ಯಕ್ತಿ ದೊರೆಯುವುದು ಬಹಳ ಕಷ್ಟ. ಅವರು ಯುವಜನಾಂಗದ ಮಾರ್ಗದರ್ಶಕರಾಗಿದ್ದರು. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲಿ, ಮತ್ತು ಅವರ ಸ್ಮರಣೆ ಕರ್ನಾಟಕದ ಯುವಜನಾಂಗಕ್ಕೆ ಸದಾ ಸ್ಫೂರ್ತಿಯನ್ನೀಯಲಿ ಎಂದು ಹಾರೈಸುತ್ತೇನೆ.

***

# ಅನುಕರಣೀಯ ಮಾದರಿ ವ್ಯಕ್ತಿತ್ವ

–ಕೆ.ವಿ.ರಂಗಾರೆಡ್ಡಿ

ಹೈದರಾಬಾದ್‌ನ ಸ್ವಾತಂತ್ರ್ಯ ಸಂಗ್ರಾಮದ ಕಾಲದಿಂದಲೇ ನಾನು ಶ್ರೀ ಚಂದ್ರಶೇಖರ ಪಾಟೀಲರನ್ನು ಬಲ್ಲೆ. ಅವರು ಹೈದರಾಬಾದ್ ಕರ್ನಾಟಕದ ಧೀರ ನಾಯಕರೂ ದಿಟ್ಟ ನೇತಾರರೂ ಆಗಿದ್ದರು. ಆ ಕಾಲದಲ್ಲಿ ತೆಲಂಗಾಣ, ಮಹಾರಾಷ್ಟ್ರ ಮತ್ತು ಕರ್ನಾಟಕ ಜಿಲ್ಲೆಗಳು ಹೈದರಾಬಾದ್ ಪ್ರಾಂತ್ಯದಲ್ಲೇ ಸಮಾವೇಶಗೊಂಡಿದ್ದವು. ಸಮಗ್ರ ಕರ್ನಾಟಕದಲ್ಲಿ ವಿಶೇಷವಾಗಿ ಗುಲಬರ್ಗಾ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಜನರನ್ನು ಸಂಘಟಿಸಿ ತಯಾರುಗೊಳಿಸುವ ಮತ್ತು ಅವರಿಗೆ 'ಇತರರಂತೆ ಸಮಾನ ಸ್ಥಾನವನ್ನು ಕಲ್ಪಿಸಿಕೊಡುವ ಸಂಪೂರ್ಣ ಹೊಣೆಯನ್ನು ಶ್ರೀ ಪಾಟೀಲರು ವಹಿಸಿಕೊಂಡಿದ್ದರು ಮಾತ್ರವಲ್ಲ ಆ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದರು ಕೂಡಾ. ಚಳವಳಿಯ ಕಾಲದಲ್ಲಿ ಅವರು ಬಹು ನಿಷ್ಠೆಯಿಂದ ದುಡಿದರು. ಅವರು ಎಲ್ಲರ ಜತೆಗೂ ಒಂದು ಸಹೋದರ ಭಾವನೆಯಿಂದ ಬೆರೆಯುತ್ತಿದ್ದರು. ಆದ್ದರಿಂದ ಹೈದರಾಬಾದ್ ಪ್ರಾಂತ್ಯದ ವಿಭಿನ್ನ ಜನರೆಲ್ಲ ಅವರನ್ನು ತಮ್ಮವರೆಂದೇ ಭಾವಿಸುತ್ತಿದ್ದರು. ಅವರಲ್ಲಿ ಸಂಕೋಚ ಸ್ವಭಾವ ಇರುತ್ತಿರಲಿಲ್ಲ; ಮಾತ್ರವಲ್ಲ ಜತೀಯತೆಯ ವಿದ್ವೇಶವೂ ಇರುತ್ತಿರಲಿಲ್ಲ. ಅವರು ಸ್ಪಷ್ಟ ಮತ್ತು ನೇರವಾದ ನಡೆನುಡಿಗಳಿಂದ ವ್ಯವಹರಿಸುತ್ತಿದ್ದರು. ಸದಾ ಹಸನ್ಮುಖರಾಗಿ ಇತರರಿಗೆ ಯಾವುದೇ ಸಂದರ್ಭದಲ್ಲಾದರೂ ಸಹಾಯ ನೀಡಲು ಸಿದ್ಧರಿರುತ್ತಿದ್ದರು.ಅವರ ಸೃಜನಾತ್ಮಕ ರೀತಿಯ ಸಹಾಯ ಪಡೆಯದ ಯಾವುದೇ ಸಾರ್ವಜನಿಕ ಸಂಸ್ಥೆ ಗುಲಬರ್ಗಾದಲ್ಲಿ ಇರಲಿಲ್ಲವೆಂದೇ ಹೇಳಬಹುದು.

ಶ್ರೀ ಪಾಟೀಲರು ಅನೇಕ ಸ್ಥಾನಮಾನಗಳಲ್ಲಿ ಇದ್ದುಕೊಂಡು ಕಾಂಗ್ರೆಸ್ ಸಂಸ್ಥೆಗೆ ಸೇವೆಸಲ್ಲಿಸಿದರಲ್ಲದೆ, ಸಂಸ್ಥೆಯಲ್ಲಿ ಸಂಘಟನೆಯ ಶಿಸ್ತನ್ನು ತಂದು ಅದರ ಬಲವನ್ನು ವೃದ್ಧಿಪಡಿಸಲು ಅಹರ್ನಿಷಿ ದುಡಿದರು. ಅವರು ಗಾಂಧೀ ಮಾರ್ಗದ ನಿಜವಾದ ಅನುಯಾಯಿಗಳಾಗಿದ್ದರು. ಯಾವುದೇ ಮಟ್ಟದಲ್ಲಿಯೂ ಸ್ವಾರ್ಥರಹಿತವಾದ, ತ್ಯಾಗದ ಬದುಕು ಅವರದ್ದಾಗಿತ್ತು. ಹೈದರಾಬಾದ್ ವಿಧಾನ

ಸಭೆಯ ಸದಸ್ಯರಾಗಿ ಅವರು ಸಲ್ಲಿಸಿದ ಸೇವೆ ಅನನ್ಯವಾಗಿತ್ತು. ಪ್ರಾಂತ್ಯಗಳ ಪುನರ್ಸಂಘಟನೆಯಾದ ಬಳಿಕ ಅವರು ಮೈಸೂರು ವಿಧಾನ ಸಭೆಯ ಸೇವೆ ಸಲ್ಲಿಸುವ ಅವಕಾಶವಿತ್ತು. ಅವರ ಸರಳ ಮತ್ತು ಸ್ವಾರ್ಥರಹಿತ ಸೇವಾ ಮನೋಭಾವನೆ ಇತರರು ಅನುಸರಿಸಬಹುದಾದ ಆದರ್ಶಮಯ ಮಾರ್ಗದರ್ಶಿ ಸೂತ್ರವೆನ್ನಬಹುದು. ಅವರ ಅಕಾಲ ಮೃತ್ಯು ಪ್ರಾಂತ್ಯಕ್ಕೆ ಸಹಿಸಲಾಗದ ಒಂದು ಬಹುದೊಡ್ಡ ಹೊಡೆತವೆಂದರೂ ಸರಿಹೋದೀತು.

***

## ತ್ಯಾಗದ ಬದುಕು

–ಡಾ। ರಫೀಕ್ ಜಕಾರಿಯಾ

ಸ್ವಾತಂತ್ರ್ಯ ಸಂಗ್ರಾಮವು ಭಾರತದ ಇತರ ಪ್ರದೇಶಗಳಂತೆ ಕರ್ನಾಟಕದಲ್ಲಿಯೂ ಸಹಸ್ರಾರು ದೇಶಪ್ರೇಮಿಗಳನ್ನು ಬೆಳಕಿಗೆ ತಂದಿತಲ್ಲದೆ ಅಂದಿನ ಆಂಗ್ಲರ ಆಡಳಿತವು ಅವರ ಮೇಲೆ ಮಾಡಿದ ಲಾಠೀ ಪ್ರಯೋಗ, ಗುಂಡಿನೇಟು, ಸೆರೆಮನೆವಾಸ ಮುಂತಾದ ಎಲ್ಲ ಅನ್ಯಾಯಗಳನ್ನು ಅಚಲವಾದ ಧೈರ್ಯ ಸಾಹಸಗಳಿಂದ ಎದುರಿಸುವಂಥ ಎದೆಗಾರಿಕೆಯನ್ನು ಒದಗಿಸಿತು. ಅದುವರೆಗೂ ಅವರೆಲ್ಲ ತಮ್ಮ ದೈನಂದಿನ ವ್ಯವಹಾರಗಳಲ್ಲಿ ತೊಡಗಿಕೊಂಡಿರುವ ಜನಸಾಮಾನ್ಯರೇ ಆಗಿದ್ದರೂ, ಗಾಂಧೀಜಿಯವರ ಪ್ರಭಾವ ಮಹಿಮೆಗಳಿಂದ ಉತ್ತೇಜಿತರಾಗಿ ಧೀರೋದಾತ್ತ ಕಾರ್ಯನಿಷ್ಠೆಗೂ, ಯಾವುದೇ ತ್ಯಾಗಕ್ಕೂ ಬದ್ಧರಾಗಿದ್ದರು.

ದಿ। ಚಂದ್ರಶೇಖರ ಪಾಟೀಲರು ಭಾರತದ ಹೆಮ್ಮೆಯ ಸುಪುತ್ರರಾಗಿದ್ದರು. ಸ್ವಾತಂತ್ರ್ಯ ಯೋಧರಾಗಿ ಕರ್ನಾಟಕದಲ್ಲಿ ಪೋಲೀಸ್ ಕಾರ್ಯಾಚರಣೆಗಿಂತ ಮೊದಲು ಸಂಘಟನೆ, ಜನತಾ ಮಾರ್ಗದರ್ಶನ ಮತ್ತು ಸಂಸ್ಥೆಗಳ ಬಲ ಸಂವರ್ಧನೆಯ ದೃಷ್ಟಿಯಿಂದ ಅವರು ಅಪೂರ್ವವಾದ ಕಾರ್ಯಗಳನ್ನು ಮಾಡಿದರಲ್ಲದೆ, ಅಂದಿನ ರಜಾಕಾರರಿಂದ ಆದ ಎಲ್ಲ ಅನ್ಯಾಯಗಳನ್ನು ಪ್ರತಿಭಟಿಸಿ ಎದುರಿಸುವ ಸಾಮರ್ಥ್ಯವನ್ನು, ರಾಷ್ಟ್ರಪ್ರೇಮವನ್ನು ಜನತೆಯಲ್ಲಿ ತುಂಬಿದರು.

ಅಂದಿನ ಭೀಕರ ಹಾಗೂ ದಾರುಣ ಪರಿಸರದಲ್ಲಿಯೂ ತಮ್ಮ ಅಚಲ ವಿಶ್ವಾಸವನ್ನು, ದೃಢ ನಿರ್ಧಾರವನ್ನು ಯಾವ ದೌರ್ಜನ್ಯವೂ ವಿಚಲಿತಗೊಳಿಸಲಾರದು ಎನ್ನುವ ರೀತಿಯಲ್ಲಿ ಅವರು ಕಾರ್ಯಗೈದರು. ಅವಿರತವಾದ ಈ ಹೋರಾಟದ ಕೊನೆಯಲ್ಲಿ ನಿಜಾಮರ ಪ್ರಾಂತವು ಭಾರತದಲ್ಲಿ ವಿಲೀನಗೊಳ್ಳುವಂತೆ ಸತತವಾದ ಪ್ರಯತ್ನ ಮಾಡಿದವರಲ್ಲಿ ಅವರೂ ಪ್ರಮುಖರಾಗಿದ್ದರು. ಅವರ ಪ್ರಭಾವಶಾಲಿ ಮುಂದಾಳುತನದಿಂದಾಗಿಯೇ ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಯ ಕನ್ನಡಿಗರಲ್ಲಿ ರಾಜಕೀಯ ಪ್ರಜ್ಞೆ ಮತ್ತು ರಾಷ್ಟ್ರೀಯ ಮನೋಭಾವನೆಗಳು ಒಡಮೂಡುವುದಕ್ಕೆ ಸಾಧ್ಯವಾದವು. ವಿಶೇಷವಾದ ಯಾವುದೇ ರೀತಿಯ ತರಬೇತಿ ಇಲ್ಲದಿದ್ದರೂ ಕೇವಲ ತಮ್ಮ ನಿಷ್ಠೆ, ಕಾರ್ಯತತ್ಪರತೆ ಮತ್ತು ಸೇವಾ ಮನೋಭಾವಗಳಿಂದ ಅವರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದುದಲ್ಲದೆ ಬೇರೆ ಬೇರೆ ಮನೋವೃತ್ತಿಯ ಜನಗಳನ್ನು ಒಂದೇ ಒಂದು ಕ್ರಮ ಶಿಸ್ತುಗಳಿಗೆ ಆಧೀನವಾಗಿ ಸಂಯೋಜಿಸುವಲ್ಲಿ, ಅಂಥವರನ್ನು ಸಂಸ್ಥೆಯ ನಿಷ್ಠಾವಂತ ಕಾರ್ಯಕರ್ತರನ್ನಾಗಿ ರೂಪಿಸುವಲ್ಲಿ ಅದ್ವಿತೀಯರಾಗಿದ್ದರು. ತರುಣ ಕಾರ್ಯಕರ್ತರನ್ನು ಗುರುತಿಸಿ ಅವರನ್ನು ಕಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸುವ ಜಾಣ್ಮೆ ಅವರಲ್ಲಿತ್ತು.

ಅವರ ಬದುಕು ಜನತೆಗಾಗಿ ಮೀಸಲಾಗಿದ್ದಿತು. ಜನತೆಯ ಹಿತ ಮತ್ತು ಅಭಿವೃದ್ಧಿಗಳೇ ಅವರ ಕಾರ್ಯದಲ್ಲಿ ಸದಾ ಸ್ಫೂರ್ತಿಕೊಡುವ ಅಂಶಗಳಾಗಿದ್ದವು. ಮಕ್ಕಳಿಗಾಗಿ ಶಾಲೆ, ಹಳ್ಳಿಗಳಲ್ಲಿ ಆಸ್ಪತ್ರೆ, ನಿರಾಶ್ರಿತರಿಗೆ ನೆರವು ಈ ಮುಂತಾದ ಕರ್ಯಗಳೇ ಧರ್ಮ ಕಾರ್ಯಗಳೆಂದು ಬಗೆದ ಅವರು ಕರ್ನಾಟಕದ ಅತ್ಯಂತ ಜನಪ್ರಿಯ ಮುಂದಾಳುಗಳಾದುದರಲ್ಲಿ ಏನೂ ಆಶ್ಚರ್ಯವಿಲ್ಲ. ಜಾತೀಯತೆಯ ಕಪ್ಪುಕಲೆಯಿಲ್ಲದ ಶ್ರೀ ಪಾಟೀಲರನ್ನು ಎಲ್ಲ ವರ್ಗದ, ಮತದ ಜನತೆ ತುಂಬ ಗೌರವ ಮತ್ತು ಸೌಹಾರ್ದದಿಂದ ಕಾಣುತ್ತಿದ್ದರು. ಇಂತಹ ಜನ, ಈ ನೆಲದ ಉಪ್ಪು ಎಂದು ಹೇಳಬಹುದು.

***

## ಬೆಳ್ಳಿ ಚುಕ್ಕಿ

–ಡಾ। ಬಿ.ಸಿ.ಮಹಾಬಳೇಶ್ವರಪ್ಪ

(ಚಂದ್ರಶೇಖರ ಪಾಟೀಲರ ಕುರಿತು ಎಂ.ಫಿಲ್. ಪದವಿಗಾಗಿ ಸಂಶೋಧನೆ ಮಾಡಿದ ಇತಿಹಾಸಕಾರ)

ಚಂದ್ರಶೇಖರ ಪಾಟೀಲರು ಹೈದರಾಬಾದ್ ಕರ್ನಾಟಕದ ಇತಿಹಾಸದಲ್ಲಿ ಒಂದು ಬೆಳ್ಳಿಚುಕ್ಕಿ. ಹೋರಾಟದ ಸಂದರ್ಭದಲ್ಲಿ ರಜಾಕಾರರ ವಿರುದ್ಧ ಅವರು ಮಾಡಿದ ಹೋರಾಟ ನಿಜವಾಗಿಯೂ ಕ್ರಾಂತಿಕಾರಕವಾಗಿರತಕ್ಕಂಥದ್ದು. ಈ ಭಾಗದಲ್ಲಿ ಸತ್ಯಾಗ್ರಹವನ್ನು ಮಾಡುವುದಕ್ಕೆ ಅವಕಾಶವೇ ಇಲ್ಲದಿದ್ದಂಥ ಸಂದರ್ಭದಲ್ಲಿ ಅನೇಕ ಸ್ವಾತಂತ್ರ್ಯ ಸೇನಾನಿಗಳು ಈ ಭಾಗವನ್ನು ಬಿಟ್ಟು ನಿರಾಶ್ರಿತರಾಗಿ ಹೋದಾಗ, ಆ ನಿರಾಶ್ರಿತರಿಗೆ ಗಡಿ ಶಿಬಿರಗಳನ್ನು ಏರ್ಪಡಿಸಿ, ಅವರಿಗೆ ಒಂದು ರಕ್ಷಣೆಯನ್ನು ಕೊಟ್ಟು ಮತ್ತೆ ನಿಜಾಮ ಸರಕಾರದ ವಿರುದ್ಧ ಹೋರಾಟ ಮಾಡಿ, ಈ ನಿಜಾಮ ಸಂಸ್ಥಾನ ಭಾರತದ ಒಕ್ಕೂಟದಲ್ಲಿ ವಿಲೀನಗೊಳ್ಳಬೇಕು, ನಿಜಾಮ ಪ್ರಾಂತ ಭಾರತದ ಅವಿಭಾಜ್ಯ ಅಂಗ ಅನ್ನತಕ್ಕಂಥ ಒಂದು ಗುರಿಯನ್ನಿಟ್ಟುಕೊಂಡು ಈ ಭಾಗದಲ್ಲಿ ಸ್ವಾತಂತ್ರ್ಯ ಸೇನಾನಿಯಾಗಿ ಹೋರಾಟ ಮಾಡಿರತಕ್ಕಂಥವರು ಈ ಚಂದ್ರಶೇಖರ ಪಾಟೀಲರು...

## ಸಾರ್ವಜನಿಕರಿಗಾಗಿ ಜೀವತೇಯ್ದ ಧುರೀಣ

–ಡಾ। ಶರಣಬಸವಪ್ಪ ಅಪ್ಪ

ಯಾವುದೇ ವಸ್ತುನಿಷ್ಠ ಕಾರಣಕ್ಕಾಗಿ ನಿರ್ಭೀತಿಯಿಂದ ಹೋರಾಟ ನಡೆಸುವವರಲ್ಲಿ ದಿ। ಚಂದ್ರಶೇಖರ ಪಾಟೀಲರು ಮೊದಲಿಗರು. ನಿಜಾಮರ ವಿರುದ್ಧ ಹೋರಾಟ ನಡೆಸಿದ ಅವರು, ಭಾರತದ ಒಕ್ಕೂಟದಲ್ಲಿ ಹೈದರಾಬಾದ್ ಸಂಸ್ಥಾನ ವಿಲೀನಗೊಳ್ಳುವುದಕ್ಕಾಗಿ ಅಹಿರ್ನಿಶಿ ದುಡಿದವರಾಗಿದ್ದಾರೆ. ನಿರಂತರ ಪರಿಶ್ರಮ ಮತ್ತು ಸಂಘಟನಾ ಚಾತುರ್ಯ ಅವರ ಯಶಸ್ಸಿನ ಬೀಜಮಂತ್ರಗಳಾಗಿದ್ದವು. ಸಮುದಾಯದ ನಡುವೆ ಗಣ್ಯಾತಿಗಣ್ಯ ವ್ಯಕ್ತಿಯಾಗಿ

ಕಂಡುಬರುತಿದ್ದ ಅವರು ಪ್ರತಿಯೊಬ್ಬ ಸಾಮಾನ್ಯ ಮನುಷ್ಯನ ಅತ್ಯಂತ ಆತ್ಮೀಯ ಗೆಳೆಯನಂತೆ ವರ್ತಿಸುತ್ತಿದ್ದರು. ಅವರು ಸಾರ್ವಜನಿಕರಿಗಾಗಿ ದುಡಿಯುತ್ತ ಅವರೊಂದಿಗೆ ಒಂದಾದರು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅನಕ್ಷರತೆಯನ್ನು ಹೋಗಲಾಡಿಸಲು ಪಣತೊಟ್ಟ ಅವರು, ಅನೇಕ ಸಾಮಾಜಿಕ ಕಂದಾಚಾರಗಳನ್ನು ತೊಡೆದು ಹಾಕಲು ಪಣತೊಟ್ಟರು. ಗುಲಬರ್ಗಾ ಜಿಲ್ಲೆಯಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಳ್ಳುವುದಕ್ಕೆ ಪಾಟೀಲರೇ ಮುಖ್ಯ ಕಾರಣರಾಗಿದ್ದರು ಎಂದರೂ ತಪ್ಪಾಗದು. ಅವರ ಸರಳ ಸಜ್ಜನಿಕೆಯ ವ್ಯಕ್ತಿತ್ವ ಅವರನ್ನು ಎಲ್ಲರೂ ಆತ್ಮೀಯತೆಯಿಂದ ಕಾಣುವಂತೆ ಮಾಡಿದವು. ಹಳ್ಳಿಗಾಡಿನಲ್ಲಿ ಬದುಕುವ ಜನರ ಸೇವೆಯನ್ನು ಮಾಡುವುದರಲ್ಲಿ ಅವರಿಗೆ ಎಲ್ಲಿಲ್ಲದ ಉತ್ಸಾಹವಿತ್ತು. ಅಂತಹ ಜನರ ಏಳ್ಗೆಗಾಗಿ ಅವರು ಟೊಂಕಕಟ್ಟಿ ದುಡಿಯುತ್ತಿದ್ದರು.

ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟುವುದರಲ್ಲಿ ಅವರದ್ದು ಸಿಂಹ ಪಾಲು. ಸಮಾಜದ ಎಲ್ಲಾ ವರ್ಗಗಳೊಂದಿಗೆ ಸಹಬಾಳ್ವೆಯನ್ನು ಮಾಡುವ ಸಂಕೇತವಾಗಿದ್ದರು ಅವರು. ಈ ಭಾಗದ ಅಭಿವೃದ್ಧಿಪರ ಚಟುವಟಿಕೆಗಳಗೆ ಅಂತೆಯೇ ಜನರಲ್ಲಿ ತಮ್ಮ ಹಕ್ಕು ಬಾಧ್ಯತೆಗಳ ಬಗೆಗೆ ಎಚ್ಚರ ಮೂಡಿಸುವಲ್ಲಿಯೂ ಅವರು ಕಾರಣಕರ್ತೃವಾಗಿದ್ದರು. ಅವರು ಚಟುವಟಿಕೆಗಳೇ ಅವರ ನಿಸ್ವಾರ್ಥ ಸೇವೆ ಮತ್ತು ತ್ಯಾಗಗಳಿಗೆ ದ್ಯೋತಕಗಳಾಗಿದ್ದವು. ನೇರ ನುಡಿ ನಡೆಗಳಿಂದ ಅವರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತ್ಯಂತ ಜನಪ್ರಿಯ ನಾಯಕರಾಗಿ ಅವರು ಹೊರಹೊಮ್ಮಿದರು. ಅವರು ಅಷ್ಟೊಂದು ವಿದ್ಯಾವಂತರಾಗಿರದಿದ್ದರೂ, ಜನಪ್ರಿಯ ಹೋರಾಟದಲ್ಲೆಲ್ಲ ಅವರು ಮುಂದಾಳ್ತನ ಕೈಗೊಂಡಿದ್ದರು. ತಮ್ಮ ಅಲ್ಪ ಆಯುಷ್ಯದಲ್ಲೇ ಅವರು ಕಾಂಗ್ರೆಸ್‌ನ ಯುವ ನಾಯಕನಾಗಿ, ಜಿಲ್ಲಾ ಅಧ್ಯಕ್ಷನಾಗಿ, ಹೊಸ ಸಮಾಜ ನಿರ್ಮಾತೃವಾಗಿ ಜನರ ಮನವನ್ನು ಅವರು ಗೆಲ್ಲುವುದರಲ್ಲಿ ಸಫಲರಾದರು.

ಚಂದ್ರಶೇಖರ ಪಾಟೀಲರ ಇನ್ನೊಂದು ವಿಶೇಷ ಗುಣವೆಂದರೆ, ಅವರು ಯುವಕರನ್ನು ಕಂಡಾಕ್ಷಣ ಅವರಲ್ಲಿರುವ ಶಕ್ತಿಯನ್ನು ಪತ್ತೆಹಚ್ಚಿ ಜನಸೇವೆಗಾಗಿ

ಅಂತಹ ಯುವಕರನ್ನು ಹುರಿದುಂಬಿಸುತ್ತಿದ್ದರು. ಅವರು ರಾಜಕೀಯವನ್ನು ಒಂದು ವೃತ್ತಿಯನ್ನಾಗಿ ಸ್ವೀಕರಿಸದೆ, ಜನಸೇವೆಯ ಒಂದು ಮಾಧ್ಯಮವೆಂಬ ರೀತಿಯಲ್ಲಿ ಅದನ್ನು ಮುಂದುವರಿಸಿದರು. ಅವರು ಮರಣ ಹೊಂದಿದ ಬಳಿಕವಷ್ಟೇ ತಿಳಿದು ಬಂದದ್ದು ಏನಂದರೆ ಅವರು ತಮಗೋಸ್ಕರ ಏನನ್ನೂ ಮಾಡದೆ, ತನ್ನದೆಲ್ಲವನ್ನೂ ತ್ಯಾಗಮಾಡಿ ಬಡವರ ಸೇವೆಗಾಗಿ ಮುಡಿಪಾಗಿಟ್ಟದ್ದರು.

ಅವ್ರನ್ನು ನೋಡಿದ ತಕ್ಷಣವೇ ಈತ ಒಬ್ಬ ಪ್ರಮುಖ ಲೀಡರ್ ಅಂತ ಅನ್ನೋದಕ್ಕಾಗ್ತಿತ್ತು. ಹಾಗೆ ಜನರಿಗೆ ಆಕರ್ಷಣೆ ಆಗ್ತಿತ್ತು. ಹತ್ತು ಸಾವಿರ ಜನರ ಮಧ್ಯೆ ಇದ್ರೂ ಅವರು ಕಣ್ಣಿಗೆ ಬೀಳ್ತಾ ಇದ್ರು..

ಅವರಿಂದ ಅನೇಕ ಸೃಜನಾತ್ಮಕ, ವಸ್ತುನಿಷ್ಠ ಕಾಯಕವನ್ನು ಮುಂದೆ ಬಯಸುತ್ತಿದ್ದವರು, ಅವರ ಅಕಾಲಿಕ ಮರಣದಿಂದ ಧೃತಿಗೆಡುವಂತದರು. ಅವರ ಆದರ್ಶಗಳನ್ನು ಅನುಸರಿಕೊಂಡು ಹೋಗುವುದೇ ಅವರಿಗೆ ನಾವು ಸಲ್ಲಿಸಬಹುದಾದ ಶ್ರದ್ಧಾಂಜಲಿ ಎನ್ನಬಹುದು.

## ಅಧಿಕಾರಿಗಳಿಗೆಲ್ಲ ಆದರ್ಶ ವ್ಯಕ್ತಿ

– ಎಂ.ವಾಸುದೇವ ರಾವ್, ಐಎಎಸ್

ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಎಸ್.ನಿಜಲಿಂಗಪ್ಪನವರ ಮುಖಂಡತ್ವದಲ್ಲಿ ಚಂದ್ರಶೇಖರ ಪಾಟೀಲರ ಸ್ಮಾರಕ ಸಮಿತಿಯೊಂದು ಗುಲಬರ್ಗಾದಲ್ಲಿ ಅಸ್ತಿತ್ವಕ್ಕೆ ಬಂದಿರುವಂಥದ್ದು ನನಗಂತೂ ತುಂಬಾ ಸಂತೋಷಕೊಟ್ಟದೆ.

ಅವರು ಗತಿಸುವುದಕ್ಕೆ ಏಳು ವರ್ಷಕ್ಕೆ ಮೊದಲು ನಾನು ಗುಲಬರ್ಗಾ ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದೆ. ಪಾಟೀಲರನ್ನು ಶಾಸಕರಾಗಿಯೂ, ಸಾಮಾಜಿಕ ಕಾರ್ಯಕರ್ತರಾಗಿಯೂ ನಾನು ಚೆನ್ನಾಗಿ ಬಲ್ಲೆ. ಗುಲಬರ್ಗಾ ಜಿಲ್ಲೆಯ ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಗುಲಬರ್ಗಾ

ಕಾಲೇಜಿನ ವಿಜ್ಞಾನ ವಿಭಾಗವನ್ನು ಸ್ಥಾಪಿಸುವ ಸಂದರ್ಭದಲ್ಲೆಲ್ಲ ಪಾಟೀಲರ ನಿಕಟವಾದ ಸಂಪರ್ಕ ಮತ್ತು ಸಂಬಂಧಗಳು ನನಗೆ ಒದಗಿ ಬಂದವು. ಅನೇಕ ಸಂದರ್ಭಗಳಲ್ಲಿ ನಾವು ಜಿಲ್ಲೆಯ ಹಳ್ಳಿಗಳಲ್ಲಿ ಸಂಚಾರ ಕೈಗೊಡಾಗಲೆಲ್ಲ, ಬಹಳ ನಸುಕಿನಲ್ಲಿ ಅಥವಾ ಮಧ್ಯರಾತ್ರಿಯ ಬಳಿಕ ಜತೆಯಲ್ಲಿ ಸಮಯ ಕಳೆದದ್ದಿದೆ.

ಕೇಂದ್ರ ಸಚಿವ ಶ್ರೀ ಎಸ್.ಕೆ.ಡೇ ಅವರು ಗುಲಬರ್ಗಾಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ ಇಲ್ಲಿ ನಾವು ಕೈಗೊಂಡಿದ್ದ ಅಭಿವೃದ್ಧಿಪರ ಕೆಲಸಗಳನ್ನು ಕಂಡು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಇಲ್ಲಿನ ಪ್ರಗತಿಯನ್ನು ಅವಲೋಕಿಸಿದ ಅವರು, ಅಂದಿನ ಪ್ರಧಾನ ಮಂತ್ರಿಗಳಾದ ಪಂ.ಜವಾಹರಲಾಲ್ ನೆಹರೂರವರನ್ನು ಗುಲಬರ್ಗಾ ಬ್ಲಾಕಿಗೆ ಆಹ್ವಾನಿಸಿದ್ದರೆ ಚೆನ್ನಾಗಿತ್ತು ಎಂದು ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದರು. ಯಾಕಂದರೆ, ಅಂದು ಗುಲಬರ್ಗಾ ವಿಭಾಗದಲ್ಲಿ ಸಾರ್ವಜನಿಕರ ಅಷ್ಟೊಂದು ಸಹಕಾರದ ವಾತಾವರಣ ನೆಲೆಗೊಂಡಿತ್ತು.

ನಿಜ ಹೇಳಬೇಕಂದರೆ, ಇಲ್ಲಿ ಅಧಿಕಾರಿಗಳಿಗೆ ಒಳ್ಳೆಯ ಸಹಕಾರದ ಜತೆಗೆ ಸಮಾಜ ಕಾರ್ಯಕರ್ತರ ಪೂರಕ ಸಹಾಯ ಕೂಡಾ ಒದಗಿ ಬಂದಿತ್ತು. ಇವೆಲ್ಲದರ ಹಿಂದೆ ಶ್ರೀ ಚಂದ್ರಶೇಖರ ಪಾಟೀಲರ ಬೆಂಬಲವಿದ್ದುದೇ ಕಾರಣವಾಗಿತ್ತು. ಅಧಿಕಾರಿ ಮತ್ತು ಸಿಬ್ಬಂದಿಗಳಿಗಿಂತ ಪಾಟೀಲರೇ ಹೆಚ್ಚು ಶ್ರಮಪಡುವ ಮತ್ತು ಮುತುವರ್ಜಿಯಿಂದ ಕೆಲಸ ಮಾಡುವ ಕಾರ್ಯಕರ್ತರಾಗಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು. ಪ್ರತಿಯೊಂದು ಹಳ್ಳಿಯಲ್ಲಿರುವ ಪ್ರಮುಖ ಸೇವಾಕಾರ್ಯಕರ್ತರಲ್ಲದೆ ಪ್ರತಿಯೊಬ್ಬ ನೇತಾರರ ಬಗೆಗೂ ಅವರಿಗೆ ಅರಿವಿತ್ತು. ಚಂದ್ರಶೇಖರ ಪಾಟೀಲರ ಅಪರಿಮಿತ ಕರ್ತೃತ್ವ ಶಕ್ತಿಯ ಕಾರಣದಿಂದಾಗಿ ಸಾರ್ವಜನಿಕರಿಂದ ದೇಣಿಗೆಯನ್ನಲ್ಲದೆ, ಅವರಿಂದ ಶ್ರಮದಾನದ ಕೆಲಸವೂ ನಡೆದು ಅಭಿವೃದ್ಧಿ ಕಾರ್ಯಕ್ರಮಗಳು ತ್ವರಿತ ಗತಿಯಿಂದ ಮುನ್ನಡೆಯಲು ಸಾಧ್ಯವಾಯಿತು. ಪ್ರತಿಯೊಂದು ಹಳ್ಳಿಯಲ್ಲೂ ಪಾಟೀಲರ ಬಗೆಗೆ ಜನರಿಗೆ ತಿಳಿದಿತ್ತು. ಅನೇಕ ಸಂದರ್ಭಗಳಲ್ಲಿ ನಾನು ಅವರ ಪ್ರಾಮಾಣಿಕ ಹಾಗೂ ನಿಸ್ಪೃಹ ಸೇವೆಯ ಲಾಭವನ್ನು ಪಡೆದು ಸರಕಾರದ ವಿಶಿಷ್ಟ ಕಾರ್ಯಕ್ರಮಗಳ ಅನುಷ್ಠಾನವನ್ನು ಮಾಡಲು ಸಾಧ್ಯವಾಗಿತ್ತು ಎನ್ನಬಹುದು.

ಒಂದೇ ಒಂದು ನಿದರ್ಶನವನ್ನು ಕೊಡಬೇಕೆಂದರೆ, ಹೈದರಾಬಾದ್ ಸರಕಾರದ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು ನನಗೊಮ್ಮೆ ಟೆಲಿಫೋನ್ ಮಾಡಿ, ಗುಲಬರ್ಗಾ ಕಾಲೇಜಿನ ಸಯನ್ಸ್ ವಿಭಾಗವನ್ನು ಅಭಿವೃದ್ಧಿಪಡಿಸುವರೆ ಪರವಾನಗಿ ಕೊಡಮಾಡಿಸುವರೆ, ಸ್ಥಳೀಯ ಜನರಿಂದ ಕಟ್ಟಡ, ಪ್ರಯೋಗಶಾಲೆ ಮತ್ತಿತರ ಸೌಲಭ್ಯಕ್ಕಾಗಿ ರೂ.50,000ವನ್ನು ದೇಣಿಗೆಯಾಗಿ ಸಂಗ್ರಹಿಸಬೇಕು. ಪೂರ್ತಿ ಕೆಲಸ ಹದಿನೈದು ದಿನಗಳ ಗಡುವಿನೊಳಗೆ ಪೂರೈಸಬೇಕು– ಹೀಗೊಂದು ಸಂಧಿಗ್ಧ ಪರಿಸ್ಥಿತಿ ಉಂಟಾಯಿತು.

ನನಗೆ ಇನ್ನೂ ನೆನಪಿದೆ, ನಾವು ದೇಣಿಗೆಯನ್ನು ಸಂಗ್ರಹಿಸುತ್ತ ಬಹಳ ತಡ ರಾತ್ರಿಯ ಸಮಯ ಮನೆ ಮನೆಯ ಬಾಗಿಲುಗಳನ್ನು ತಟ್ಟಬೇಕಾಗಿತ್ತು. ಕೊನೆಗೂ ಚಂದ್ರಶೇಖರ ಪಾಟೀಲರ ಉತ್ಸಾಹ ಮತ್ತು ದಣಿವಿಲ್ಲದ ಶಕ್ತಿ ಸಾಮರ್ಥ್ಯ, ನಮಗೆ ನಿಗದಿತ ಮೊಬಲಗನ್ನು ಹದಿನೈದು ದಿನಗಳ ಒಳಗೆ ಸಂಗ್ರಹ ಮಾಡಲು ಸಹಕಾರಿಯಾಯ್ತು. ಜನರು ಅವರಿಗೆ ಗೌರವಾದರಗಳೊಂದಿಗೆ ಕಾಣುತ್ತಿದ್ದರು ಮಾತ್ರವಲ್ಲ, ಅವರನ್ನು ಬಹುವಾಗಿ ಪ್ರೀತಿಸುತ್ತಿದ್ದರು, ಯಾಕಂದರೆ, ಅವರೂ ಪರರಿಗೆ ಅದೇ ಬಗೆಯ ಪ್ರೀತಿಯನ್ನು ನೀಡುತ್ತಿದ್ದರು. ಗ್ರಾಮೀಣರಿಗೆ ಅವಶ್ಯವಾದ ಸವಲತ್ತುಗಳಾದ, ಕುಡಿಯುವ ನೀರಿನ ಬಾವಿ, ಗ್ರಾಮದ ರಸ್ತೆಗಳು, ಶಾಲೆಗಳು ಮತ್ತು ಸುಧಾರಿತ ಕೃಷಿ ಕೈಗಾರಿಕೆಯ ಮೂಲಕ ಉನ್ನತ ಅಭಿವೃದ್ಧಿ ಕೆಲಸಗಳನ್ನು ಅವರು ನೆರವೇರಿಸುತ್ತಿದ್ದರು.

ಬಡ ಜನರ ಏಳಿಗೆಗಾಗಿ ಕೇವಲ ತನ್ನ ಶಕ್ತಿಯನ್ನು ಮಾತ್ರವಲ್ಲದೆ, ತನ್ನ ಕೈಲಾದ ಆರ್ಥಿಕ ಸಹಾಯನ್ನು ಒದಗಿಸುತ್ತಿದ್ದರು. ಗುಲಬರ್ಗಾ ಜಿಲ್ಲೆಯಲ್ಲಿ ಸೇವೆಸಲ್ಲಿಸುತ್ತಿದ್ದ ಸರಕಾರೀ ಹಾಗೂ ಖಾಸಗೀ ವಲಯದ ಅಧಿಕಾರಿಗಳಿಗೂ ಪಾಟೀಲರ ಸೇವೆಯ ಕಾಯಕ ಮಾದರಿಯಾಗಿದ್ದವು.

## ನಮ್ಮ ಲಾರ್ಡ್ ಮೌಂಟ್‌ಬ್ಯಾಟನ್

–ಶ್ರೀ ಜಿ.ವಿ.ಹಳ್ಳಿಕೇರಿ

ನನ್ನಷ್ಟಕ್ಕೇ ನಾನು ಚಂದ್ರಶೇಖರ ಪಾಟೀಲರನ್ನು ಪ್ರೀತಿಸಲು ತೊಡಗಿದ್ದೆ. ಅವರು ಕಾರ್ಯಕುಶಲತೆಯ ಸಾಕಾರ ಮೂರ್ತಿಯಾಗಿದ್ದರು. ಅವರ ಆಕರ್ಷಕ ವ್ಯಕ್ತಿತ್ವ ಯಾವುದೇ ಮಾನವ ದ್ವೇಷಿಯನ್ನು ಕೂಡಾ ಚುಂಬಕ ಶಕ್ತಿಯಿಂದ ಸೆಳೆಯುವಂತಿತ್ತು. ರಾಜ್ಯ ರಾಜಕೀಯದಲ್ಲಿ ಆತ ಯುವ ನಾಯಕನಾಗಿ ಬಹಳಷ್ಟು ಎತ್ತರಕ್ಕೆ ಏರಬೇಕೆಂದುಕೊಂಡಾಗಲೇ ವಿಧಿ ಅವರನ್ನು ತನ್ನೆಡೆಗೆ ಸೆಳೆದುಕೊಂಡುದು ದೌರ್ಭಾಗ್ಯವೇ ಸರಿ.

1954ರ ಜುಲೈಯಲ್ಲಿ ರಾಜ್ಯ ಪುನರ್ಸಂಘಟನಾ ಆಯೋಗದ ಸಂದರ್ಭದಲ್ಲಿ ನಾನು ಮೊತ್ತಮೊದಲು ಅವರನ್ನು ಗುಲಬರ್ಗಾದಲ್ಲಿ ಭೇಟಿಯಾಗಿದ್ದು. ಅವರು ಆಗ ವಿಧಾನ ಸಭಾ ಸದಸ್ಯರಾಗಿದ್ದರಲ್ಲದೆ, ಗುಲಬರ್ಗಾ ಜಿಲ್ಲಾ ಕಾಂಗ್ರೆಸ್ ಸಮತಿಯ ಅಧ್ಯಕ್ಷರೂ ಆಗಿದ್ದರು. ಅವರ ಭವ್ಯ ವ್ಯಕ್ತಿತ್ವ ಕಂಡು ನಾನು ಆಕರ್ಷಿತನಾದೆ. ಅವರಲ್ಲಿ ಪ್ರಥಮ ನೋಟಕ್ಕೇ ಪ್ರೀತಿ ಅಂಕುರಿಸಿತು. ನಮ್ಮೊಳಗಿನ ಸಖ್ಯ ಮುಂದಿನ ಆರು ವರ್ಷಗಳ ಕಾಲ, ಅಂದರೆ ಅವರು ಕಾಲವಾಗುವ ತನಕ, ಹಾಗೆಯೇ ಮುಂದುವರಿಯಿತು. ಅವರ ಎಲ್ಲಾ ಸಾಮಾಜಿಕ, ರಾಜಕೀಯ ಮತ್ತು ಇನ್ನಿತರ ವಲಯಗಳಲ್ಲೂ ನಾನು ಅವರೊಂದಿಗೆ ಗುರುತಿಸಿಕೊಂಡಿದ್ದೆ. ತಮ್ಮ ಜತೆಗೆ ಬಂದವರನ್ನೆಲ್ಲ ಅವರು ಪ್ರೀತಿಯಿಂದ ಸ್ವೀಕರಿಸುತ್ತಿದ್ದರು. ಯಾವುದೇ ಅರ್ಹ ಕಾರಣಕ್ಕಾಗಿ ಅವರು ಎಂತಹುದೇ ತ್ಯಾಗಕ್ಕೂ ಸಿದ್ಧರಾಗುವ ದೊಡ್ಡ ಹೃದಯವಂತಿಕೆ ಅವರಿಗೆ ಇದ್ದಿತು. ತಮ್ಮ ಸ್ವಂತ ಅನುಕೂಲವನ್ನು ಅವರು ಎಂದೂ ಪರಿಗಣಿಸುತ್ತಿರಲಿಲ್ಲ.

ಬಡವರ ಮತ್ತು ದೀನ ದಲಿತರ ಬಗೆಗೆ ಅವರು ಹೃತ್ಪೂರ್ವಕವಾಗಿ ಸ್ಪಂದಿಸುತ್ತಿದ್ದರು. ಇದನ್ನು ಅವರು ತನ್ನ ಕೊನೆಯವರೆಗೆ ನಡೆಸಿಕೊಂಡು ಬಂದಿದ್ದರು. ಅವರ ಉನ್ನತ ವ್ಯಕ್ತಿತ್ವ, ಮಂದಸ್ಮಿತ ಮುಖ, ತಿದ್ದಿ ತೀಡಿದ ಅಂಗಸೌಷ್ಠವ ಮತ್ತು

ಗೌರವರ್ಣ ಲಾರ್ಡ್ ಮೌಂಟ್ ಬ್ಯಾಟನ್‌ರನ್ನು ನೆನಪಿಸುವಂತ್ತಿತ್ತು. 1957ರಿಂದ 1960ರವರೆಗೆ ಅವರು ನಮ್ಮ ರಾಜ್ಯದ ಪ್ರಪ್ರಥಮ ಖಾದಿ ಬೋರ್ಡ್‌ನ ಸದಸ್ಯರಾಗಿದ್ದರು. ಆ ಕಾಲಾವಧಿಯಲ್ಲಿ ನಾನು ಬೋರ್ಡ್‌ನ ಅಧ್ಯಕ್ಷನಾಗಿದ್ದೆ. ಯಾವುದೇ ವಿಷಯದಲ್ಲೂ ಅವರು ತಕ್ಷಣ ಸ್ಪಂದಿಸುತ್ತಿದ್ದರು. ಅವರು ತಮ್ಮ ಸಿದ್ಧಾಂತಗಳಲ್ಲಿ ಸೃಜನಾತ್ಮಕವಾಗಿರುತ್ತಿದ್ದರಲ್ಲದೆ, ಸದಾ ಕಾಲ ಹಾಸ್ಯಪ್ರವೃತ್ತಿಯಿಂದ ಇರುತ್ತಿದ್ದರು. ಜಟಿಲ ಸಮಸ್ಯೆಗಳಿಗೆ ಅವರಲ್ಲಿ ಸೂಕ್ತ ಪರಿಹಾರ ಸಿಗುತ್ತಿತ್ತು. ಅಂತಹ ಓರ್ವ ನಿಷ್ಠಾವಂತ ಕಾರ್ಯಕರ್ತನನ್ನು ಕಳಕೊಂಡು ಕರ್ನಾಟಕ ಬಡವಾಗಿದೆ.

## ಜನಸೇವೆಯ ಮಿಂಚಿನಬಳ್ಳಿ


–ಡಾ। ಸೂರ್ಯನಾಥ್ ಕಾಮತ್

ಕಲ್ಬುರ್ಗಿ ಜಿಲ್ಲೆಯ ಗಣ್ಯ ಸ್ವಾತಂತ್ರ್ಯ ಯೋಧರೂ ಸಮಾಜ ಕಾರ್ಯಕರ್ತರೂ ಆಗಿದ್ದ ದಿ। ಚಂದ್ರಶೇಖರ ಪಾಟೀಲ ಮಹಾಗಾಂವ್ ಅವರನ್ನು ಕುರಿತು ಬರೆದ ಈ ಜೀವನ ಚರಿತ್ರೆ ('ರಾಷ್ಟ್ರವೀರ'–ಬಿ.ಜಿ.ಕೆರೂರ, ಪ್ರ: ಅರುಣ್ ಕುಮಾರ್ ಪಾಟೀಲ್) ಆಧುನಿಕ ಕರ್ನಾಟಕದ ಇತಿಹಾಸ ರಚನೆಗೆ ನೆರವಾಗುವ ನೂರಾರು ಆಕರ ಗ್ರಂಥಗಳಲ್ಲಿ ಒಂದಾಗಿ ಬೆಳಕಿಗೆ ಬರುವಲ್ಲಿ ಯಾವ ಸಂಶಯವೂ ಇಲ್ಲ. ಕೇವಲ 42ನೇ ವಯಸ್ಸಿನಲ್ಲಿ ದಿವಂಗತರಾದ ಶ್ರೀ ಪಾಟೀಲರು ಎರಡು ದಶಕಗಳ ಕಾಲ ನಡೆಸಿದ ಸಾರ್ಥಕ ಜನಸೇವೆಯು ಮಿಂಚಿನಬಳ್ಳಿಯಂತೆ ಉಜ್ವಲ ಪ್ರಕಾಶ ಬೀರಿದುದು. ಹೈದರಾಬಾದ್ ಸಂಸ್ಥಾನದಲ್ಲಿ ನಡೆದ ಮತೀಯ ಹಾಗೂ ರಾಜಕೀಯ ದಬ್ಬಾಳಿಕೆಯ ವಿರುದ್ಧ ಹಿಂದೂ ಮಹಾಸಭೆ ಹಾಗೂ ಆರ್ಯಸಮಾಜಗಳು ಸಂಘಟಿಸಿದ್ದ ಸತ್ಯಾಗ್ರಹದಲ್ಲಿ, ವಿಶೇಷ ವಿದ್ಯಾವಂತರಲ್ಲದಿದ್ದರೂ ಎಳೆಯ ವಯಸ್ಸಿನಲ್ಲೇ ಸಮಾಜ ಪ್ರಜ್ಞೆ ಪಡೆದ ಪಾಟೀಲರು ಮನೆಮಂದಿಗೆ ತಿಳಿಸದೆ ಪಾಲುಗೊಂಡು ಜೈಲು ಕಂಡರು. ಆಗ ಅವರು 20ರ ಹರೆಯದವರು. ಮುಂದೆ 1947–48ರಲ್ಲಿ ರಜಾಕಾರರ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಪಾಲುಗೊಂಡರು. ಕಾಂಗ್ರೆಸ್ ಸೇರಿ ಅದರ ಜಿಲ್ಲಾ ಕಾರ್ಯದರ್ಶಿ,

ಅಧ್ಯಕ್ಷರಾದರು. ಹೈದರಾಬಾದ್ ಹಾಗೂ ಏಕೀಕೃತ ಕರ್ನಾಟಕದಲ್ಲಿ ಶಾಸಕರಾಗಿ ಹಿಂದುಳಿದ ಕಲ್ಬುರ್ಗಿ ಜಿಲ್ಲೆಯ ಪ್ರದೇಶಗಳ ಶಿಕ್ಷಣ, ಸಾರಿಗೆ ಸಂಪರ್ಕ, ನೀರಾವರಿ ಸಾಧನಗಳ ಹೆಚ್ಚಳ ಮುಂತಾದ ಸಮಸ್ಯೆಗಳ ಸುಧಾರಣೆಗಾಗಿ ದುಡಿದರು. ಕುಶಲ ಸಂಘಟಕರೆನಿಸಿ, ನಿಸ್ವಾರ್ಥ ಕಾರ್ಯಕರ್ತರೆನಿಸಿ ಹೆಣಗಿದರು.

## ಮಾದರಿ ಬದುಕು

–ಡಾ। ಎಂ.ಚೆನ್ನಾ ರೆಡ್ಡಿ



ನಿರಪೇಕ್ಷ ಮತ್ತು ಸಮರ್ಪಣಾ ಭಾವದ ಸೇವೆಯ ವಿಷಯದಲ್ಲಿ ಅವರು ಮಹಾರಾಷ್ಟ್ರದ ಭೀಮರಾವ್ ಸಾವನೀಕರ್ ಅವರ ಪ್ರತಿಬಿಂಬದಂತಿದ್ದರು. ಅವರ ಸರಳತೆ ಮತ್ತು ನಿಸ್ವಾರ್ಥ ಮನೋಭಾವ ಎಲ್ಲರಿಗೂ ಮಾದರಿಯಾಗಿತ್ತು.

# 4

# ಮಹಾಗಾಂವ್ ಚಂದ್ರಶೇಖರ ಪಾಟೀಲ್

## ಭಾವಚಿತ್ರಗಳು



ಸ್ನಿಗ್ಧ, ಸೌಮ್ಯ ಮತ್ತು ದೃಢ ಸಂಕಲ್ಪವನ್ನು ಬಿಂಬಿಸುವ
ಚಂದ್ರಶೇಖರ ಪಾಟೀಲರ ಭಾವಚಿತ್ರ

**"ಭಾಳಾ ಅಪರೂಪದ ವ್ಯಕ್ತಿ ಚಂದ್ರಶೇಖರ ಪಾಟೀಲರು. ನಮ್ಮ ಕರ್ನಾಟಕದಲ್ಲಿ ಅವರಂಥ ಆಜಾನುಬಾಹು, ಸ್ಫುರದ್ರೂಪಿ, ಸುಂದರ ನಿಲುವಿನ ವ್ಯಕ್ತಿ ಬೇರೆಯವರು ಇರ್ಲಿಲ್ಲ.... ಇವ್ರನ್ನು ನೋಡಿದ್ರೆ ಯಾವುದೋ ಫಿಲಂ ಆ್ಯಕ್ಟರ್ ಥರ ಕಾಣ್ತಿದ್ರು!**


–ಮುಖ್ಯಮಂತ್ರಿ ದಿ। ರಾಮಕೃಷ್ಣ ಹೆಗಡೆ



ವೀರಶೈವ ತರುಣಸಂಘದ ಸಮಾರಂಭ, ಮಹಾಗಾಂವ್




101 ಎತ್ತುಗಳ ಮೆರವಣಿಗೆಯಲ್ಲಿ



ಶ್ರೀ ಎಸ್.ಕೆ.ಡೇ. ಕೇಂದ್ರದ ಪಂಚಾಯತ್ ರಾಜ್ ಮತ್ತು
ಗ್ರಾಮೀಣ ಅಭಿವೃದ್ಧಿ ಮಂತ್ರಿಯವರೊಂದಿಗೆ



ಸಮಾರಂಭವೊಂದರಲ್ಲಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರೊಂದಿಗೆ



ನವಮೈಸೂರು ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರೊಂದಿಗೆ




ಮುಖ್ಯಮಂತ್ರಿ ಶ್ರೀ ಬಿ.ಡಿ.ಜತ್ತಿಯವರೊಂದಿಗೆ ಸಮಾಲೋಚನೆಯಲ್ಲಿ




ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರೊಂದಿಗೆ ಆಪ್ತತೆಯ ಒಂದು ಕ್ಷಣ



ಕೇಂದ್ರ ಆರೋಗ್ಯಮಂತ್ರಿ ಶ್ರೀಮತಿ ವೈಲೆಟ್ ಆಳ್ವ ಅವರೊಂದಿಗೆ



ಮುಖ್ಯಮಂತ್ರಿ ಶ್ರೀ ಕೆ.ಹನುಮಂತಯ್ಯನವರೊಂದಿಗೆ 1956ರಲ್ಲಿ ಹೈದರಾಬಾದ್‌ನಲ್ಲಿ
ನವಮೈಸೂರು ರಾಜ್ಯ ನಿರ್ಮಾಣದ ಸಮಯ



ಕೇಂದ್ರ ಗೃಹಮಂತ್ರಿ ಶ್ರೀದಾತಾರ್ ಹಾಗೂ ಮುಖ್ಯಮಂತ್ರಿ ಕೆ.ಹನುಮಂತಯ್ಯ ಮತ್ತು
ಹೈದರಾಬಾದ್ ರಾಜ್ಯದ ಕೃಷಿಮಂತ್ರಿ ಡಾ|ಎಂ.ಚೆನ್ನಾರೆಡ್ಡಿಯವರೊಂದಿಗೆ




ಶ್ರೀಮತಿ ಮತ್ತು ಶ್ರೀ ಕೋಲ್ಸ್ ಇಂಜನಿಯರ್ ಅವರೊಂದಿಗೆ




ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರೊಂದಿಗೆ ಚಂದ್ರಶೇಖರ ಪಾಟೀಲ್,
ಮಹದೇವಪ್ಪ ರಾಂಪುರೆ ಮತ್ತಿತರರು




ಚಂದ್ರಶೇಖರ ಪಾಟೀಲರೊಂದಿಗೆ ರಾಂಪುರೆ, ಮಹಮ್ಮದ್ ಆಲಿ ಮತ್ತು
ಕಲ್ಯಾಣ ರಾವ್ ಮರಗುತ್ತಿ




ಡಾ।ಟಿ.ಎಂ.ಎ.ಪೈ, ಜಗನ್ನಾಥ ರಾವ್ ಚಂಡರಕಿ ಹಾಗೂ ವೀರೇಂದ್ರ ಪಾಟೀಲ್,
ಮಜ್ಜಿಗೆ ಅವರೊಂದಿಗೆ ಚಂದ್ರಶೇಖರ ಪಾಟೀಲ್



ಹೈದರಾಬಾದ್ ಕರ್ನಾಟಕದ ಪ್ರಮುಖ ಪ್ರಭಾವೀ ನೇತಾರರಾದ ಚಂದ್ರಶೇಖರ ಪಾಟೀಲ್, ಮಹಮ್ಮದ್ ಆಲಿ, ಚಂಡರಕಿ ಮತ್ತು ರಾಂಪುರೆ



ಮಣಿಪಾಲದ ಶಿಲ್ಪಿ ಡಾ। ಟಿ.ಎಂ.ಎ.ಪೈ ಮತ್ತಿತರ ಗಣ್ಯರು ಬಿಸಿಲ ನಾಡಿಗೆ ಭೇಟಿಕೊಟ್ಟ ಸಂದರ್ಭದಲ್ಲಿ ಅವರೊಂದಿಗೆ ಚಂದ್ರಶೇಖರ ಪಾಟೀಲರು



ಚಂದ್ರಶೇಖರ ಪಾಟೀಲರ ಜತೆಗೆ ವೀರೇಂದ್ರ ಪಾಟೀಲ್, ಅಣ್ಣಾರಾವ ಸಣಮುಖಿ
ಕಲ್ಯಾಣ ರಾವ್ ಮರಗುತ್ತಿ ಮತ್ತಿತರರು




ಚಂದ್ರಶೇಖರ ಪಾಟೀಲರು ಮತ್ತು ಕುಟುಂಬದ ಸದಸ್ಯರು– ಶ್ರೀಮತಿ ಲಲಿತಾ ಬಾಯಿ
(ಪತ್ನಿ), ಶ್ರೀ ಅರುಣ್ ಕುಮಾರ್ ಪಾಟೀಲ್ (ಹಿರಿಯ ಪುತ್ರ), ವಿಜಯಲಕ್ಷ್ಮಿ
(ಹಿರಿಯ ಪುತ್ರಿ), ಹಾಗೂ ಇತರ ಮಕ್ಕಳು



ಮಹಾಗಾಂವ್‌ನಲ್ಲಿ ಅನಾವರಣಗೊಂಡ ಚಂದ್ರಶೇಖರ ಪಾಟೀಲರ
ಪಂಚಲೋಹದ ಪುತ್ಥಳಿ



ಶ್ರೀ ಚಂದ್ರಶೇಖರ ಪಾಟೀಲರ ಪುತ್ಥಳಿಯನ್ನು ಮಹಾಗಾಂವ್ ಗ್ರಾಮದಲ್ಲಿ
ಮುಖ್ಯಮಂತ್ರಿ ಶ್ರೀವೀರೇಂದ್ರ ಪಾಟೀಲರು ಅನಾವರಣಗೊಳಿಸಿದ ಸಂದರ್ಭ



ಶ್ರೀ ಚಂದ್ರಶೇಖರ ಪಾಟೀಲ ಕ್ರೀಡಾಂಗಣ, ಗುಲಬರ್ಗಾ




ಶ್ರೀ ಎಸ್.ನಿಜಲಿಂಗಪ್ಪನವರು ಮತ್ತು ಶ್ರೀ ಜೀವರಾಜ ಆಳ್ವರವರು ಶ್ರೀಚಂದ್ರಶೇಖರ ಪಾಟೀಲ್ ಕ್ರೀಡಾಂಗಣವನ್ನು ಉದ್ಘಾಟಿಸಲು ಬಂದ ಸಂದರ್ಭ




ಚಂದ್ರಶೇಖರ ಪಾಟೀಲ ಕ್ರೀಡಾಂಗಣದ ಮುಂಭಾಗದಲ್ಲಿ ಅನಾವರಣಗೊಂಡ ಪಾಟೀಲರ ಪುತ್ಥಳಿ




ಚಂದ್ರಶೇಖರ ಪಾಟೀಲರ ಪುತ್ಥಳಿಯನ್ನು ಗುಲಬರ್ಗಾದ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಕೇಂದ್ರ ಸಚಿವರಾದ ಎಸ್.ಆರ್.ಬೊಮ್ಮಾಯಿಯವರು ಅನಾವರಣಗೊಳಿಸಿದ ಸಂದರ್ಭ. ಚಿತ್ರದಲ್ಲಿ ಪಾಟೀಲರ ಧರ್ಮಪತ್ನಿ ಶ್ರೀಮತಿ ಲಲಿತಾ ಬಾಯಿ ಹಾಗೂ ಹಿರಿಯ ಪುತ್ರ ಶ್ರೀಅರುಣ್ ಕುಮಾರ್ ಪಾಟೀಲರನ್ನು ಕಾಣಬಹುದು



ಚಂದ್ರಶೇಖರ ಪಾಟೀಲರ ಸ್ಮರಣಾರ್ಥವಾಗಿ ನಿರ್ಮಿಸಿದ ಮೆಡಿಕಲ್ ಕಾಲೇಜು
ವಿದ್ಯಾರ್ಥಿಗಳ ವಸತಿ ಸಮುಚ್ಚಯ, ಗುಲಬರ್ಗಾ



ಚಂದ್ರಶೇಖರ ಪಾಟೀಲ ಮೆಡಿಕಲ್ ಕಾಲೇಜು ಹುಡುಗರ ವಸತಿ ನಿಲಯದ
ಆವರಣದಲ್ಲಿ ಅನಾವರಣಗೊಂಡ ಪಾಟೀಲರ ಪುತ್ಥಳಿ



ಶ್ರೀಚಂದ್ರಶೇಖರ ಪಾಟೀಲ್ ಅವರ ಪುತ್ಥಳಿಯನ್ನು ಚಂದ್ರಶೇಖರ ಪಾಟೀಲ ಮೆಡಿಕಲ್ ಕಾಲೇಜು ಹುಡುಗರ ವಸತಿ ನಿಲಯದ ಆವರಣದಲ್ಲಿ ಅನಾವರಣಗೊಳಿಸಿದವರು ಅಂದಿನ ಮುಖ್ಯಮಂತ್ರಿ ಶ್ರೀ ಧರಂಸಿಂಗ್, ಜತೆಗೆ ಕೇಂದ್ರ ಕಾರ್ಮಿಕ ಸಚಿವರಾದ ಮಲ್ಲಿಕಾರ್ಜುನ ಖರ್ಗೆ, ಪಾಟೀಲರ ಹಿರಿಯ ಪುತ್ರ ಶ್ರೀ ಅರುಣ್ ಕುಮಾರ್ ಪಾಟೀಲ್ ಮೊದಲಾದವರನ್ನು ಕಾಣಬಹುದು





ರಾಷ್ಟ್ರಪತಿ ಶ್ರೀ ನೀಲಂ ಸಂಜೀವ ರೆಡ್ಡಿಯವರು ಚಂದ್ರಶೇಖರ ಪಾಟೀಲರ ಸ್ಮಾರಕಕ್ಕೆ ಭೇಟಿ ನೀಡಿದ ಸಂದರ್ಭ. ಜತೆಯಲ್ಲಿ ಶ್ರೀ ಧರಂಸಿಂಗ್ ಹಾಗೂ ಮತ್ತಿತರ ಗಣ್ಯರನ್ನು ಕಾಣಬಹುದು.


## ಚಂದ್ರಶೇಖರ ಪಾಟೀಲರ ಹೆಸರಿನಲ್ಲಿ ಪ್ರಕಟವಾದ ಗ್ರಂಥಗಳು:













ಸ.ಕೇ.ಮು. ಬೆಂ.–59, ಕಾ.ಸೂ. 0–222, 1000 ಪುಸ್ತಕಗಳು, ದಿನಾಂಕ : 05–12–2014

## ಲೇಖಕರ ಪರಿಚಯ



ಡಾ. ಶಿವಾನಂದ ಬೇಕಲ್ ಅವರು ಕನ್ನಡ ಸಾರಸ್ವತ ಪ್ರಪಂಚವನ್ನು ಪ್ರವೇಶಿಸಿದ್ದು ತಮ್ಮ ಮೊದಲ ಕಥೆ 'ಕೇದಗೆಯ ಹಾವು' 1969ರಲ್ಲಿ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆಯುದರ ಮೂಲಕ. ಅನಂತರ ಅವರಿಗೆ 1980ರಲ್ಲಿ 'ಇನ್ನಾದರೂ ಅರ್ಥವಾಗೋಣ' ಕವನ ಸಂಕಲನಕ್ಕೆ ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, 1988ರಲ್ಲಿ 'ವಿಜ್ಞಾನ ವಿಶ್ವ' ವೈಜ್ಞಾನಿಕ ಸಾಕ್ಷ್ಯ ರೂಪಕಕ್ಕೆ ಅಖಿಲ ಭಾರತ ಆಕಾಶವಾಣಿ ವಾರ್ಷಿಕ ಸ್ಪರ್ಧೆಯಲ್ಲಿ ಅರ್ಹತಾ ಪತ್ರ. 'ಮಳೆ ನಿಂತ ಮೇಲಿನ ಮರ' ಕಾದಂಬರಿಗೆ ಗುಲಬರ್ಗಾ ವಿಶ್ವ ವಿದ್ಯಾಲಯದ 2002ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ, 'ವಿಜ್ಞಾನೇಶ್ವರ ಆಫ್ ಮಿತಾಕ್ಷರ' ಇಂಗ್ಲಿಷ್ ಡಾಕ್ಯುಮೆಂಟರಿ ಫಿಲಂಗೆ 2003ರಲ್ಲಿ ದೂರದರ್ಶನ ಮಹಾ ನಿರ್ದೇಶನಾಲಯ ಕೊಡಮಾಡುವ ದಕ್ಷಿಣ ವಲಯ ಪ್ರಥಮ ಪುರಸ್ಕಾರ ಮತ್ತು ಟ್ರೋಫಿ ಸಂದಿವೆ.

ಡಾ| ಬೇಕಲ್ ಅವರ 40ಕ್ಕೂ ಹೆಚ್ಚು ಪುಸ್ತಕಗಳು ಈಗಾಗಲೇ ಪ್ರಕಟವಾಗಿವೆ. ಶ್ರೀ ಟಿ.ಎ.ಪೈಯವರ ಕುರಿತಾದ ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಪ್ರಕಟವಾಗಿದೆ. ನಾಡಿನ ನಾನಾ ಪತ್ರಿಕೆಗಳಿಗೆ, ನಿಯತಕಾಲಿಕಗಳಿಗೆ ಇನ್ನೂರ ಐವತ್ತಕ್ಕೂ ಹೆಚ್ಚು ಲೇಖನ, ಚಿತ್ರ ಲೇಖನ, ಕಥೆ, ಕವನಗಳನ್ನು ಬರೆದಿದ್ದಾರೆ.

'ಪ್ರಯೋಗ' ಮುಂತಾದ ಟೆಲಿ ಫಿಲಂಗಳನ್ನೂ, 'ಸ್ವೆಟರ್' ಮುಂತಾದ ದೂರದರ್ಶನ ಧಾರಾವಾಹಿಗಳನ್ನೂ ರಚಿಸಿ ನಿರ್ಮಿಸಿ ಪ್ರಸಾರ ಮಾಡಿದ್ದಾರೆ. 30ಕ್ಕೂ ಹೆಚ್ಚು ಟಿ.ವಿ.ನಾಟಕಗಳನ್ನೂ, ಅನೇಕ ಟಿ.ವಿ.ಪ್ರಹಸನ, ಸಾಕ್ಷ್ಯಚಿತ್ರಗಳನ್ನು ದೂರದರ್ಶನಕ್ಕಾಗಿ ನಿರ್ಮಿಸಿದ್ದಾರೆ. ನೂರಾರು ರೂಪಕ, ನಾಟಕ ಮತ್ತು ಸಾಕ್ಷ್ಯಚಿತ್ರಗಳು ಆಕಾಶವಾಣಿಯಲ್ಲಿ ಪ್ರಸಾರಗೊಂಡಿವೆ.

'ನಲ್ಲ ನಲ್ಲೆ', 'ಅಭಿಸಾರಿಕೆ' ಮೊದಲಾದ ನಾಲ್ಕು ಕ್ಯಾಸೆಟ್/ಸಿಡಿಗಳಿಗೆ ಗೀತೆ ರಚನೆ ಮಾಡಿದ್ದಾರೆ.

ನಾಡಿನ ನೂರಾರು ಸಾಧಕ ಸತ್ಪುರುಷ ಅಗ್ರಮಾನ್ಯರನ್ನು ದೂರದರ್ಶನ ಆಕಾಶವಾಣಿ ಮತ್ತು ಪತ್ರಿಕೆಗಳಿಗಾಗಿ ಸಂದರ್ಶಿಸಿದ್ದಾರೆ.


ಚಿತ್ರಕಲೆ ಮತ್ತು ಲೋಹದ ಉಬ್ಬುಶಿಲ್ಪಗಳಲ್ಲಿ ಸಿದ್ಧಹಸ್ತರಾಗಿರುವ ಡಾ.ಬೇಕಲ್, ಮಕ್ಕಳಿಗಾಗಿ 'ನಾಣಿ ಮತ್ತು ನಾಯಿ ಕೊಡೆ', 'ದಮ್ಮ ದಿಮ್ಮಿ ಟುಮ್ಮಿ ಟಾಮಿ' ಮುಂತಾದ 6 ಕಾರ್ಟೂನ್ ಸೀರಿಯಲ್‌ಗಳನ್ನು 'ಉದಯವಾಣಿ', 'ತರಂಗ' ಮತ್ತು 'ತುಷಾರ'ಗಳಲ್ಲಿ ಪ್ರಕಟಿಸಿದ್ದಾರೆ.

1992ರಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವಾಗಿದೆ. ನಾಡಿನ ಹೆಸರಾಂತ ಪತ್ರಿಕೆ ನಿಯತಕಾಲಿಕಗಳಲ್ಲಿ ನೂರಾರು ಚಿತ್ರ ಲೇಖನಗಳು ಪ್ರಕಟಗೊಂಡಿವೆ.

'ದಿ ಪೋರ್ಟ್ಸ್ ಆಫ್ ಕೋಸ್ಟಲ್ ಕರ್ನಾಟಕ' ಮಹಾಪ್ರಬಂಧಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆಯುವುದರೊಂದಿಗೆ ಇತಿಹಾಸದಲ್ಲಿ ಅನೇಕ ಸಂಶೋಧನಾ ಬರಹಗಳನ್ನು ಪ್ರಕಟಿಸಿದ್ದಾರೆ.

"ನರೇಂದ್ರ ಮೋದಿ- ಒಂದು ರಾಜಕೀಯ ವ್ಯಕ್ತಿಚಿತ್ರ", "ದಿ ಸೀಕ್ರೆಟ್" ಮುಂತಾದ ಏಳು ಅಂತಾರಾಷ್ಟ್ರೀಯ ಬೆಸ್ಟ್ ಸೆಲ್ಲಿಂಗ್ ಹೊತ್ತಗೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.

ಭಾರತೀಯ ಪ್ರಸಾರ ಸೇವೆ (ಭಾ.ಪ್ರ.ಸೇ.)ಯ 1990ರ ಬ್ಯಾಚ್‌ನ ಹಿರಿಯ ಅಧಿಕಾರಿಯಾಗಿ ಬೆಂಗಳೂರು ಮತ್ತು ಗುಲಬರ್ಗಾ ದೂರದರ್ಶನ ಕೇಂದ್ರಗಳಲ್ಲಿ, ಅಂತೆಯೇ ಮಂಗಳೂರು, ಬೆಂಗಳೂರು ಮತ್ತು ಗುಲಬರ್ಗಾ ಆಕಾಶವಾಣಿ ನಿಲಯಗಳಲ್ಲಿ 33ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ.



ಶ್ರೀ ಚಂದ್ರಶೇಖರ ಪಾಟೀಲ ಮಹಾಗಾಂವ್ ರವರು ಹೈದರಾಬಾದ್ ಕರ್ನಾಟಕದ ಇತಿಹಾಸದಲ್ಲಿ ಒಂದು ಬೆಳ್ಳಿಚುಕ್ಕಿ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಜಾಕಾರರ ವಿರುದ್ಧ ಸಿಡಿದೆದ್ದ ಅವರ ಹೋರಾಟದ ಬದುಕು ನಿಜಕ್ಕೂ ಕ್ರಾಂತಿಕಾರೀ ಸ್ವರೂಪದ್ದು. ಸತ್ಯಾಗ್ರಹವನ್ನು ಮಾಡುವುದಕ್ಕೆ ಅವಕಾಶವೇ ಇಲ್ಲದಿದ್ದಂಥ ಸಂದರ್ಭದಲ್ಲಿ ನಿಜಾಮ ಸರಕಾರದ ವಿರುದ್ಧ ಹೋರಾಟ ಮಾಡಿ, ನಿಜಾಮರ ಸಂಸ್ಥಾನ ಭಾರತದ ಒಕ್ಕೂಟದಲ್ಲಿ ವಿಲೀನಗೊಳ್ಳುವ ಸಲುವಾಗಿ ಅಹರ್ನಿಶಿ ದುಡಿದವರು ಅವರು.

ಮುಂದೆ ಸಂಸದೀಯ ಪಟುವಾಗಿ ಸೇವೆ ಸಲ್ಲಿಸಿದ ಚಂದ್ರಶೇಖರರು ತಮ್ಮ ಧೀಮಂತ ವ್ಯಕ್ತಿತ್ವದಿಂದ ಉತ್ತರ ಕರ್ನಾಟಕದ ಜನತೆಯ ಪಾಲಿಗೆ ಶಾಶ್ವತವಾದ ಅನೇಕ ಕೊಡುಗೆಗಳನ್ನು ನೀಡಿದರು. ಸಂಸದೀಯರಾಗಿ ಅವರು ಸಲ್ಲಿಸಿದ ನಿಸ್ವಾರ್ಥ ಸೇವೆ ನಿಜಕ್ಕೂ ಸ್ಮರಣೀಯ. ಒಟ್ಟಿನಲ್ಲಿ ಹೇಳುವುದಾದರೆ, ಭಾರತದ ಪ್ರಜಾಪ್ರಭುತ್ವದ ತತ್ವಗಳಾಗಿರತಕ್ಕಂಥ ಸಮಾನತೆ, ಸ್ವಾತಂತ್ರ್ಯತೆ ಮತ್ತು ಸಹೋದರತೆಯ ತತ್ವಗಳನ್ನು ಎತ್ತಿಹಿಡಿಯುವ ಸಲುವಾಗಿ ತಾವೇ ಕರ್ಪೂರದ ಹಾಗೆ ಸುಟ್ಟುಕೊಂಡು ಇತಿಹಾಸದಲ್ಲಿ ಸೇರಿರತಕ್ಕಂಥ ವ್ಯಕ್ತಿ ಚಂದ್ರಶೇಖರ ಪಾಟೀಲರು.

ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯದ ಕೋರಿಕೆಯ ಮೇರೆಗೆ ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಮೂರು ದಶಕಗಳಿಗೂ ಮಿಕ್ಕಿ ಸೇವೆ ಸಲ್ಲಿಸಿದ ಸಾಹಿತಿ ಡಾ। ಶಿವಾನಂದ ಬೇಕಲ್ ಅವರು ಈ ಗ್ರಂಥವನ್ನು ರಚಿಸಿರುತ್ತಾರೆ. ಅವರ ಪ್ರಯತ್ನ ಶ್ಲಾಘನೀಯವಾದುದು.

